ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 10
ಮಾರ್ಚ್ 10, 2013

ಪುಟ 16 ರೂ. 10/-





ತ್ರಿಪುರ :

ಎಡರಂಗದ ಐತಿಹಾಸಿಕ ದಿಗ್ವಿಜಯ
ಸತತ ಐದನೇ ಗೆಲುವು

ಕೇಂದ್ರ ಬಜೆಟ್ :
ಹಸಿವನುಂಡ ಜನಗಳ
ಹೊಟ್ಟೆಯ ಮೇಲೆ ತಣ್ಣೀರ ಬಟ್ಟೆ



ರೇಷನ್ ಕಾರ್ಡ್
ಪರದಾಟಕ್ಕೆ
ಕೊನೆ ಎಂದು ?



ಈಜಿಪುರ :
ಬಡವರ ಗುಡಿಸಲ ಗೋರಿಗಳ ಮೇಲೆ
ಜಗಮಗಿಸುವ ಮಾಲ್‌ನ ಯೋಜನೆ



ಸ್ಥಳೀಯ ಸಂಸ್ಥೆ ಚುನಾವಣೆ :
ಜನತೆಗೆ ದ್ರೋಹ ಬಗೆದವರಿಗೆ ಪಾಠ ಕಲಿಸಿ
ಹೋರಾಟಗಾರರನ್ನು ಬೆಂಬಲಿಸಿ

ಜನಾರೋಗ್ಯದ ರಾಜಕೀಯ

ಇತ್ತೀಚೆಗೆ ನಮ್ಮ ಹಣಕಾಸು ಮಂತ್ರಿ ಹೆಮ್ಮೆಯಿಂದ ಭಾರತ ಟ್ರಿಲಿಯನ್ ಡಾಲರ್ ಎಕಾನಮಿ ಕ್ಲಬ್ಬಿಗೆ ಸೇರಿರುವುದಾಗಿ ಹೇಳುತ್ತಿದ್ದರೆ, ಭಾರತ ಆರೋಗ್ಯಕ್ಕಾಗಿ ಪ್ರತಿತಿಂಗಳು ತಲಾ 17 ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಿರುವುದು ವಿರೋಧಾಭಾಸವಾಗಿದೆ. ಹಾಗಾದರೆ ಜನಾರೋಗ್ಯವೆಂದರೇನು ? ಅದಕ್ಕೆ ಸರ್ಕಾರದ ಜವಾಬ್ದಾರಿಯೇನು ಎಂದು ತಿಳಿಯೋಣವೇ?



ಬೆಳಗಿನ ಜಾವ 'ವಾಕ್' ಮಾಡುವುದು, 'ಡಯಟ್' ಮಾಡುವುದು, ಧ್ಯಾನ ಮಾಡುವುದು ಮುಂತಾದವುಗಳು ಹೆಚ್ಚು ಹೆಚ್ಚು (ಪಟ್ಟಣದ) ಜನರನ್ನು ಅಕರ್ಷಿಸುತ್ತಿವೆ. ದಿನ ಪತ್ರಿಕೆಗಳು ಆರೋಗ್ಯ ಪುರವಣಿಯಲ್ಲಿ ಇವುಗಳ ಬಗ್ಗೆ ಅನೇಕ ಲೇಖನಗಳನ್ನು ಪ್ರಕಟಮಾಡಲು ಮುಂದಾಗಿವೆ. ಅಲೋಪತಿಯ ಅಡ್ಡ ಪರಿಣಾಮಗಳನ್ನು ಗುರಿಯಿಟ್ಟುಕೊಂಡು, ಆಯುರ್ವೇದ ಹಾಗೂ ಹೋಮಿಯೋಪತಿಗಳು ಜನರ ಆರೋಗ್ಯ ಸುಧಾರಿಸಲು ಮುಂದಾಗಿವೆ. ವೈದ್ಯರು, ನರ್ಸಿಂಗ್ ಹೋಂಗಳು, ಆಸ್ಪತ್ರೆಗಳ, ಖೊಟ್ಟಿವೈದ್ಯರು ಜನರ ಅನಾರೋಗ್ಯ, ರೋಗ ನಿವಾರಣೆಯ ಹೆಸರಿನಲ್ಲಿ ಪೈಪೋಟಿ ನಡೆಸಿದರೆ, ಸರ್ಕಾರಿ ಆರೋಗ್ಯ ಸಂಸ್ಥೆಗಳು ಕ್ಷೀಣಿಸುತ್ತ ನಡೆದಿವೆ. ಈ ಎಲ್ಲ ಪ್ರಯತ್ನಗಳು ಜನರ ವೈಯುಕ್ತಿಕ ಆರೋಗ್ಯದ ಬಗ್ಗೆ ಗಮನ ಹರಿಸುತ್ತಿವೆ. ಆದರೆ 'ಜನಾರೋಗ್ಯ'ದ ವೃದ್ಧಿಗಲ್ಲವೆಂಬುದು ಸ್ಪಷ್ಟ. ಜನಾರೋಗ್ಯ ಸುಧಾರಿಸಲು ಜನರಿಗೆ ಜೀವನದ ಅಗತ್ಯತೆಗಳಾದ ನೀರು, ಪೌಷ್ಟಿಕ ಆಹಾರ, ನೆಮ್ಮದಿಯ ಪರಿಸರ, ಆತಂಕರಹಿತ ವಾತಾವರಣ, ಉದ್ಯೋಗ, ಆರೋಗ್ಯ ಸೇವೆಗಳು, ಔಷಧಿಗಳು ಮುಂತಾದವುಗಳನ್ನು ದೊರಕಿಸಿಕೊಡಬೇಕು.



ಜನಾರೋಗ್ಯ ಸುಧಾರಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಜನರಿಗೆ ದೊರಕಿಸಿಕೊಡಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಸ್ಪಷ್ಟಪಡಿಸಿದೆ ಹಾಗೂ ಆ ನೀತಿಯ ಆಧಾರದ ಮೇಲೆ, ಆರೋಗ್ಯ ನೀತಿಯನ್ನು ರೂಪಿಸಲು ಕರೆ ಕೊಟ್ಟಿದೆ.

ಜನಾರೋಗ್ಯ ಪರಿಸ್ಥಿತಿ :

ಬಡತನ ಅನಕ್ಷರತೆ ಎದ್ದು ಕಾಣುವ ನಮ್ಮ ದೇಶದಲ್ಲಿ ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ. ಇಂದಿಗೂ ನಮ್ಮ ದೇಶದ ಆರೋಗ್ಯ ಸಮಸ್ಯೆಗಳು ತಡೆಗಟ್ಟಬಹುದಾದ, ಗುಣಪಡಿಸಬಹುದಾದ ರೋಗಗಳಾಗಿವೆ. ಉದಾ : ಸಾಂಕ್ರಾಮಿಕ ರೋಗಗಳು, ಪೌಷ್ಟಿಕ ಆಹಾರದ ಕೊರತೆಯಿಂದಾಗುವ ರೋಗಗಳು. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಬಹುದಾದ ಸರ್ಕಾರಿ ಆರೋಗ್ಯ ಕೇಂದ್ರಗಳು ಜನರಿಗೆ ಹತ್ತಿರದಲ್ಲಿವೆ, ಆದರೆ ವ್ಯವಸ್ಥೆ ಸರಿಯಿಲ್ಲ. ಪಟ್ಟಣಗಳಲ್ಲಿ ಖಾಸಗಿ, ಸುಸಜ್ಜಿತವಾದ ಆರೋಗ್ಯ ಕೇಂದ್ರಗಳಿವೆ. ಆದರೆ ಅಲ್ಲಿಯ ಸೇವೆಗಳ ದುಬಾರಿ ಹಾಗೂ ಜನಸಾಮಾನ್ಯರಿಗೆ ಎಟುಕದಂತಿವೆ.

ಆರೋಗ್ಯ ಸೌಲಭ್ಯಗಳ ಲಭ್ಯತೆಯಲ್ಲಿ ಅಸಮಾನತೆ ಎದ್ದು ಕಾಣುತ್ತಿದೆ. ಸಂಪ್ರದಾಯಿಕ ಪದ್ದತಿಯು ನಮ್ಮ ದೇಶದಲ್ಲಿ ಗ್ರಾಮ ಗ್ರಾಮಗಳಲ್ಲಿ ಜೀವಂತವಾಗಿದ್ದರೂ, ಕಡೆಗಣಿಸಲ್ಪಟ್ಟಿವೆ. ಅವುಗಳಲ್ಲಿ ಅಳವಡಿಸಿಕೊಳ್ಳಬಹುದಾದವುಗಳು ಯಾವುವು ? ಅವೈಜ್ಞಾನಿಕವಾದುವುಗಳು ಯಾವುವು ಎಂದು ನಮ್ಮ ದೇಶದಲ್ಲಿ ಔಷಧಿ ಉದ್ಯಮದ ಬೆಳವಣಿಗೆ ಇದ್ದರೂ, ಜನರಿಗೆ ಅಗತ್ಯ ಔಷಧಿಗಳು ದೊರಕಿಲ್ಲ. ಪ್ರಾರಂಭದಲ್ಲಿ ಜನಪರ ಆರೋಗ್ಯ ನೀತಿಯನ್ನು ಜಾರಿಗೊಳಿಸುವ ಪ್ರಯತ್ನವನ್ನು ಮಾಡಲಾಗಿದ್ದರೂ, ಇಂದು ಆರೋಗ್ಯ ನೀತಿ ಸಮರ್ಪಕವಾಗಿಲ್ಲ. ಆರೋಗ್ಯದ ಬಗ್ಗೆ ಜನರಿಗೆ ಕನಿಷ್ಠ ಮಾಹಿತಿಯೂ ಇಲ್ಲ. ಜನಾರೋಗ್ಯ ಸುಧಾರಿಸಲು ಜನಪರ ಹೋರಾಟಗಳಾಗುತ್ತಿದ್ದರೂ ಅವುಗಳ ಕೊರತೆ ಎದ್ದು ಕಾಣುತ್ತದೆ. ಜನಾರೋಗ್ಯದ ಬಗ್ಗೆ ವೈದ್ಯಕೀಯ ಕ್ಷೇತ್ರ ಯಾವ ಕಾಳಜಿಯನ್ನೂ ಹೊಂದಿಲ್ಲ. ಎಡಪಕ್ಷಗಳನ್ನು ಬಿಟ್ಟರೆ, ಯಾವ ರಾಜಕೀಯ ಪಕ್ಷಗಳೂ ಆರೋಗ್ಯದ ಬಗ್ಗೆ ತಲೆಕೆಡಿಸಿಕೊಂಡಿಲ್ಲ.

ಜನಾರೋಗ್ಯದ ಪರಿಸ್ಥಿತಿ ಅರಿಯಲು ಕೆಲವು ಸೂಚ್ಯಾಂಕಗಳನ್ನೂ ನೋಡಬಹುದಾಗಿದೆ ಉದಾ : ಶಿಶುಮರಣ ಸಂಖ್ಯೆ, ಮಾತೃಮರಣ ಸಂಖ್ಯೆ, ಸಾವಿನ ದರ, ಜೀವನಾಪೇಕ್ಷೆ ವರ್ಷಗಳ, ಲಸಿಕಾ ಪ್ರಮಾಣ ಇತ್ಯಾದಿ.

ಭಾರತದಲ್ಲಿ 1,000 ಜೀವಂತ ಮಕ್ಕಳ ಜನನಕ್ಕೆ ಸಂಬಂಧಿಸಿದ ಶಿಶುಮರಣ ಸಂಖ್ಯೆ (ರಾಷ್ಟೀಯ ಕುಟುಂಬ ಆರೋಗ್ಯ ಸಮೀಕ್ಷೆ)		
ಭಾರತ	78.5 (92–93)	67.6 (98–99)
ಕರ್ನಾಟಕ	65.4	51.5
ಓರಿಸ್ಸಾ	112.1	81.0
ಕೇರಳ	23.8	16.3

ಸಾಂಸ್ಥಿಕ ಹೆರಿಗೆ	ಪಟ್ಟಣ	ಗ್ರಾಮ
(ರಾಷ್ಟೀಯ ಕುಟುಂಬ ಆರೋಗ್ಯ ಸಮೀಕ್ಷೆ)		
ಭಾರತ	26% (92–93)	33.6% (98–99)
ಕರ್ನಾಟಕ	37.5%	51.1%
ಓರಿಸ್ಸಾ	14.1%	22.9%

ಲಸಿಕೆ ಪಡೆದ ಮಕ್ಕಳ ಸಂಖ್ಯೆ (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ)		
ಭಾರತ	35.4 (92–93)	42 (98–99)
ಕನಾಟಕ	52.2 (,, ,,)	60 (,, ,,)

ಮಾನವ ಅಭಿವೃದ್ಧಿ ವರದಿ (1998) ರಲ್ಲಿ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿಯ ಆರೋಗ್ಯ ಪರಿಸ್ಥಿತಿಯನ್ನು ನೀಡಲಾಗಿದೆ.

ಮುಂದುವರೆದ ರಾಷ್ಟ್ರಗಳ ಆರೋಗ್ಯ ಪರಿಸ್ಥಿತಿ ನಮ್ಮ ದೇಶಕ್ಕೆ ಹೋಲಿಸಿದರೆ ಉತ್ತಮವಾಗಿದೆ.

ಕ್ಷಯರೋಗ ಭಾರತದಲ್ಲಿ ವ್ಯಾಪಕವಾಗಿ ಕಂಡುಬರುವ ರೋಗ. ಈ ರೋಗವನ್ನು ಸಂಪೂರ್ಣ ಹತೋಟಿಯಲ್ಲಿಡುವ ಔಷಧಗಳಿವೆ, ಆದರೂ ಕ್ಷಯ ರೋಗ ಭಾರತದಲ್ಲಿ ಹೆಚ್ಚುತ್ತಲಿದೆ.

	ಮುಂದುವರೆದ 25 ರಾಷ್ಟ್ರಗಳು	ಮುಂದುವರಿಯುತ್ತಿರುವ ರಾಷ್ಟ್ರಗಳು(ಭಾರತ)	ಕೊನೆಯ 43 ರಾಷ್ಟ್ರಗಳು
ಜೀವನಾಪೇಕ್ಷ ದರ	76 ವರ್ಷ	62.2 ವರ್ಷ	51.2 ವರ್ಷ
ಸಾಕ್ಷರತಾ ದರ	98.6%	70.4%	49:2%
ಮಾತೃ ಮರಣ ಸಂಖ್ಯೆ ಒಂದು (ಲಕ್ಷ ಹೆರಿಗೆಗೆ)	30	488	1100
5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶಿಶುಮರಣ	16	65	170

1947 5 ಲಕ್ಷ ಕ್ಷಯರೋಗಿಗಳ ಸಾವು, 20 ಲಕ್ಷ ಒಟ್ಟು ರೋಗಿಗಳು

2000ರಲ್ಲಿ 5 ಲಕ್ಷ ಕ್ಷಯ ರೋಗಿಗಳ ಸಾವು, 120 ಲಕ್ಷ ಒಟ್ಟು ರೋಗಿಗಳು

ಇಂದಿಗೂ, ಶಿಶುಮರಣ ಸಂಖ್ಯೆ ಮುಂದುವರೆದ ರಾಷ್ಟ್ರಗಳಿಗೆ ಹೋಲಿಸಿದರೆ ಹೆಚ್ಚಾಗಿಯೇ ಇದೆ. ನಮ್ಮ ದೇಶದಲ್ಲಿ ಕೇರಳವೊಂದು ಬಿಟ್ಟರೆ, ಶಿಶುಮರಣ ಸಂಖ್ಯೆ ಅತಿ ಹೆಚ್ಚಾಗಿದೆ.

ಭಾರತ ಔಷಧಿಗಳನ್ನು ತಯಾರಿಸುವ ಉದ್ಯಮ ಹೊಂದಿದ್ದರೂ ಲಸಿಕೆಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಕೇವಲ ಪೋಲಿಯೋ ಲಸಿಕೆ ಬಗ್ಗೆ ಗಮನಹರಿಸುತ್ತಿದೆ.

ಭಾರತದಲ್ಲಿ ಹೆಚ್ಚಿನ ಹೆರಿಗೆಗಳು ಮನೆಯಲ್ಲಿಯೇ ಆಗುತ್ತವೆ. ಇದರಿಂದಾಗಿ ಮಾತೃಮರಣ ಹಾಗೂ ಶಿಶುಮರಣ ಸಂಖ್ಯೆ ಹೆಚ್ಚಾಗಿಯೇ ಉಳಿದಿದೆ. ಅಂಕಿ ಸಂಖ್ಯೆಗಳೇ ಆರೋಗ್ಯ ಪರಿಸ್ಥಿತಿಯನ್ನು ನಿರ್ಧರಿಸಲಾರವು. ಆದರೂ ಸರ್ಕಾರದ ಈ ಅಂಕಿ ಸಂಖ್ಯೆಗಳನ್ನು ಕಡೆಗಣಿಸಲಾಗುವುದಿಲ್ಲ. ಜನಾರೋಗ್ಯದ ಈ ಚಿಂತಾಜನಕ ಪರಿಸ್ಥಿತಿಗೆ ಹಲವಾರು ಕಾರಣಗಳನ್ನು ಗುರುತಿಸಬಹುದಾಗಿದೆ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆಯು ಜಾರಿಗೊಳ್ಳದೇ ಇರುವುದು. ಜನಾರೋಗ್ಯ ಸುಧಾರಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಜಾರಿಗೊಳ್ಳಬೇಕು. ವಿಶ್ವ ಆರೋಗ್ಯ ಸಂಸ್ಥೆ ಅದನ್ನು ಜಾರಿಗೊಳಿಸುವ ವಿಧಾನವನ್ನು 1977 ರಲ್ಲೇ ಸ್ಪಷ್ಟಗೊಳಿಸಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು, ಸರ್ಕಾರ 1983 ರಲ್ಲಿ ಪ್ರಾರಂಭಿಸಿತು. ಆದರೆ 1990 ರ ವೇಳೆಗೆ ಅದನ್ನು ಕೈಬಿಡಲಾಯಿತು. ಈಗ ಆರೋಗ್ಯ ಕೇಂದ್ರಗಳಿವೆ. ಆದರೆ ಸಮರ್ಪಕ ಆರೋಗ್ಯ ಸೇವೆಗಳು ದೊರಕುತ್ತಿಲ್ಲ. ಸರ್ಕಾರಿ ವ್ಯವಸ್ಥೆಯ ವೈಫಲ್ಯದಿಂದಾಗಿ ಖಾಸಗಿ ಆರೋಗ್ಯ ಕ್ಷೇತ್ರ ಬೆಳೆಯುವಂತಾಗಿದೆ. ಖಾಸಗಿ ಆರೋಗ್ಯ ವ್ಯವಸ್ಥೆ ಪಟ್ಟಣಗಳಲ್ಲಿ ಬೆಳೆಯುತ್ತಿದ್ದು ದುಬಾರಿಯಾಗಿವೆ ಹಾಗೂ ಅವು ಕೇವಲ ಚಿಕಿತ್ಸೆಗೆ ಮಹತ್ವ ಕೊಡುತ್ತವೆ. ರೋಗವೇ ಬರದಂತಹ ಪ್ರತಿಬಂಧನೆಗೆ ಅಲ್ಲ.

* ಮುಂಗಡ ಪತ್ರದಲ್ಲಿ ಆರೋಗ್ಯಕ್ಕೆ ಅಗತ್ಯವಿದ್ದಷ್ಟು ಹಣಕಾಸಿನ ಮಂಜೂರಾತಿ ಇಲ್ಲದಿರುವುದು.
* ಆರೋಗ್ಯ ನಿರ್ಧಾರಕಗಳಾದ ಸ್ವಚ್ಛ ಕುಡಿಯುವ ನೀರು, ನೈರ್ಮಲ್ಯ, ಪೌಷ್ಟಿಕ ಆಹಾರ, ವಸತಿ, ಉದ್ಯೋಗ ಮುಂತಾದವುಗಳ ಬಗ್ಗೆ ಗಮನ ಹರಿಸದೆ ಇರುವುದು.
* ಮಹಿಳೆ, ಮಕ್ಕಳ, ದಲಿತರ, ಅಲ್ಪಸಂಖ್ಯಾತರ, ವೃದ್ಧರ, ಅಂಗವಿಕಲರ ಆರೋಗ್ಯದ ಬಗ್ಗೆ ಗಮನ ಹರಿಸದೇ ಇರುವುದು.
* ಆರೋಗ್ಯ ನೀತಿ, ಔಷದ ನೀತಿ, ಲಸಿಕಾ ನೀತಿ, ಜನಸಂಖ್ಯಾ ನೀತಿ ಜನಪರವಾಗಿಲ್ಲದಿರುವುದು.
* ಗ್ರಾಮೀಣ ಪ್ರದೇಶದ ಆರೋಗ್ಯ ಕಡೆಗಣಿಸಲ್ಪಟ್ಟಿರುವುದು.
* ವೈದ್ಯಕೀಯ ಸಂಶೋಧನೆಗಳಿಗೆ ಅಪಾರ

ಪುಟ 4 ರಿಂದ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಪಡಿತರ ಚೀಟಿ ಪರದಾಟಕ್ಕೆ ಕೊನೆಯೆಂದು?

ಉಡುಪಿ ಜಿಲ್ಲೆಯಲ್ಲಿ ಸಾವಿರಾರು ಪಡಿತರ ಚೀಟಿಗಳನ್ನು ನಕಲಿ ಚೀಟಿಗಳೆಂದು ಏಕಪಕ್ಷೀಯವಾಗಿ ಘೋಷಣೆ ಮಾಡಿ ಅವುಗಳನ್ನು ರದ್ದುಮಾಡಿದ್ದು ಜನಸಾಮಾನ್ಯರಲ್ಲಿ ತೀವ್ರ ದಿಗಿಲು ಹುಟ್ಟಿಸಿದೆ. ಹೀಗೆ ರದ್ದಾದ ಪಡಿತರ ಚೀಟಿಗಳಲ್ಲಿ ಎಪಿಎಲ್ ಚೀಟಿಗಳೂ ಇವೆ, ಬಿಪಿಎಲ್ ಚೀಟಿಗಳೂ ಇವೆ. ಅಧಿಕಾರಿಗಳ ಪ್ರಕಾರ, ಅರ್ಜಿದಾರರು ನೀಡಿದ ಮಾಹಿತಿಗಳು ಇಂಟರ್‌ನೆಟ್‌ನಲ್ಲಿರುವ ಅವರ ಮನೆ ಸಂಖ್ಯೆ, ವಿದ್ಯುತ್ ಮೀಟರ್ ಸಂಖ್ಯೆಗಳೊಂದಿಗೆ ತಾಳೆಯಾಗದಿರುವುದರಿಂದ ಅಂತಹ ಪಡಿತರ ಚೀಟಿಗಳನ್ನು ನಕಲಿ ಎಂದು ಪರಿಗಣಿಸಲಾಗಿದೆ. ಈ ರೀತಿಯಾಗಿ ಅನರ್ಹಗೊಂಡ ಪಡಿತರದಾರರಿಗೆ ತಮ್ಮ ಸಮರ್ಥನೆಯನ್ನು ಸಲ್ಲಿಸಲು ಅವಕಾಶವನ್ನೇ ನೀಡಲಾಗಿಲ್ಲ. ನೀಡಲಾದ ಮಾಹಿತಿಗಳಲ್ಲಿ ತಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸಿಕೊಡಲೂ ಅವಕಾಶ ಕೊಟ್ಟಿಲ್ಲ. ಉದಾಹರಣೆಗೆ, ಒಂದೇ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸ ಇರುವ ಸಾಧ್ಯತೆ ಇರುತ್ತದೆ. ಒಂದೇ ಮನೆ ಸಂಖ್ಯೆ ಮತ್ತು ಒಂದೇ ವಿದ್ಯುತ್ ಮೀಟರ್ ಸಂಖ್ಯೆ ಅಡಿಯಲ್ಲಿ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸವಿದ್ದರೆ ಅವರಿಗೆ ಪ್ರತ್ಯೇಕ ಪಡಿತರ ಚೀಟಿ ಪಡೆಯುವ ಹಕ್ಕು ಇರುತ್ತದೆ. ಇದ್ಯಾವುದನ್ನೂ ಪರಿಗಣಿಸದೆ ಪಡಿತರ ಚೀಟಿಗಳನ್ನು ನಕಲಿ ಎಂದು ಪರಿಗಣಿಸಿ ರದ್ದು ಮಾಡಿರುವುದು ದೊಡ್ಡ ಅನ್ಯಾಯ. ಇದನ್ನು ಬಲವಾಗಿ ವಿರೋಧಿಸಬೇಕು. ಪಡಿತರ ಚೀಟಿಯ ಗೊಂದಲ ನಿವಾರಣೆ ಆಗುವವರೆಗೆ ಪಡಿತರದಾರರಿಗೆ ಪಡಿತರ ವಿತರಣೆಯನ್ನು ಮುಂದುವರೆಸುವಂತೆ ಒತ್ತಾಯಿಸಬೇಕಾಗಿದೆ.

ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಜನ ಸಾಮಾನ್ಯರು ಅನಾಥರಾಗುತ್ತಿದ್ದಾರೆ. ಚುನಾಯಿತ ಪ್ರತಿನಿಧಿಗಳು ಗೆಲ್ಲುವ ಕುದುರೆಯ ಹುಡುಕಾಟದಲ್ಲಿ ತಲ್ಲೀನರಾಗಿದ್ದಾರೆ. ಯಾವ ಪಕ್ಷಕ್ಕೆ ಹಾರಿದರೆ ಚುನಾವಣೆಯಲ್ಲಿ ಗೆಲ್ಲಬಹುದು ಎಂಬ ಲೆಕ್ಕಚಾರದಲ್ಲಿ ಅವರು ಮುಳುಗಿದ್ದಾರೆ. ತಮಗೆ ಹಿಂದೆ ಓಟು ಹಾಕಿದವರನ್ನಾಗಲಿ, ತಾವು ಪ್ರತಿನಿಧಿಸುವ ಕ್ಷೇತ್ರದ ಜನರನ್ನಾಗಲಿ ಅವರು ಈಗ ಮರೆತು ಬಿಟ್ಟಿದ್ದಾರೆ. ಹಣ ಬಲದಿಂದಲೋ ಜಾತಿ ಬಲದಿಂದಲೋ ಹೆಚ್ಚು ಓಟುಗಳನ್ನು ಗಿಟ್ಟಿಸಿಕೊಳ್ಳಬಹುದಾದ ಪಕ್ಷದಿಂದ ಟಿಕೆಟ್ ಸಿಗುವುದು ಖಚಿತವಾದ ನಂತರವಷ್ಟೇ ಅವರಿಗೆ ಮತದಾರರ ನೆನಪಾಗುವುದು. ಅಲ್ಲಿಯವರೆಗೆ ಮತದಾರರು ಬೆಲೆಏರಿಕೆಯಿಂದ ತತ್ತರಿಸಿದರೂ, ಪಡಿತರಕ್ಕಾಗಿ ಪರದಾಡುತ್ತಿದ್ದರೂ ಅದು ಅವರ ಗಮನ ಸೆಳೆಯದು. ಆಹಾರ ಧಾನ್ಯಗಳ ಮತ್ತು ಇತರ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ತತ್ತರಿಸುತ್ತಿದ್ದಾರೆ. ಇದೇ ಸಮಯದಲ್ಲಿ ಪಡಿತರ ಚೀಟಿ ವಂಚಿತರಾಗಿ ತಮ್ಮ ಸಮಸ್ಯೆಯನ್ನು ಕೇಳುವವರೇ ಇಲ್ಲವೆಂದು ಪರಿತಪಿಸುತ್ತಿದ್ದಾರೆ.

ಅರ್ಜಿ ಸಲ್ಲಿಸಿರುವ 31 ಲಕ್ಷ ಜನರ ಪೈಕಿ 18 ಲಕ್ಷ ಮಂದಿಗೆ ಇನ್ನೂ ಪಡಿತರ ಚೀಟಿ ವಿತರಣೆಯಾಗಿಲ್ಲ. ಉಳಿದವರಿಗೆ ಪಡಿತರ ಚೀಟಿ ನೀಡಲಾಗಿದೆಯಾದರೂ ಪಡಿತರ ಚೀಟಿ ಸಿಗದವರಿಗೆ ಪದೇ ಪದೇ ಎಸ್‌ಎಂಎಸ್ ಮಾಡಿ ಪಡಿತರ ಚೀಟಿ ಪಡೆಯುವಂತೆ ಇಲಾಖೆ ಸಿಬ್ಬಂದಿ ಕರೆಯುತ್ತಿರುತ್ತಾರೆ. ಎಸ್‌ಎಂಎಸ್‌ನಲ್ಲಿ ಸೂಚಿಸಿದಂತೆ ಅರ್ಜಿದಾರರು ಹೋದರೆ, ಈಗಲೇ ಏಕೆ ಬಂದಿದ್ದೀರಿ, ವಾರ ಬಿಟ್ಟು ಬನ್ನಿ ಎಂದು ಹೇಳಿ ವಾಪಸ್ ಕಳುಹಿಸುತ್ತಾರೆ. ಇದರಿಂದಾಗಿ ಅರ್ಜಿದಾರರು ತೀವ್ರ ಗೊಂದಲಕ್ಕೆ ಒಳಗಾಗುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ಚೀಟಿಗಾಗಿ ನೋಂದಣಿ ಮಾಡಿಕೊಳ್ಳುವುದು ನರಕಯಾತನೆಯ ಕೆಲಸವಾಗಿದೆ. ಸರಿಯಾದ ವಿದ್ಯುತ್ ಪೂರೈಕೆ ಇಲ್ಲದಿರುವುದು ಹಾಗೂ ಆಗಾಗ ಇಂಟರ್‌ನೆಟ್ ಕೈಕೊಡುವುದರಿಂದ ಬಡವರು, ಕೂಲಿಕಾರರು ತಮ್ಮ ಕೆಲಸ ಬಿಟ್ಟು ನೋಂದಣಿ ಕೇಂದ್ರಗಳ ಮುಂದೆ ಬೆಳಿಗ್ಗೆಯಿಂದಲೇ ಬಂದು ನಿಂತಿರುವುದು ವ್ಯರ್ಥವಾಗುತ್ತದೆ.

ಚಿಂತಾಮಣಿಯಲ್ಲಿ ಹರಸಾಹಸ ನಡೆಸಿ ಪಡಿತರ ಚೀಟಿಗಳನ್ನು


ಪುಟ 4 ಕ್ಕೆ

ಲೂಟಿಖೋರರು ವಾಹಕಗಳನ್ನು ಹುಡುಕುತ್ತಿದ್ದಾರೆ. ಎಚ್ಚರ!

ರಾಜ್ಯದಲ್ಲೀಗ ರಾಜಕೀಯ ವಲಸೆ ಪರ್ವ! ಅರ್ಥಾತ್ ಪಕ್ಷಾಂತರ ಪ್ರವಾಹ. ಫಲವನ್ನುಡುಕಿ ಕೊಂಬೆಯಿಂದ ಕೊಂಬೆಗೆ ಹಾಯುತ್ತಾ ಹೊರಟ ಮಂಗಗಳ ಸ್ಥಿತಿ ನಮ್ಮ ರಾಜ್ಯದ ಕೆಲ 'ಘನ-ಜನಪ್ರತಿನಿಧಿ'ಗಳದ್ದು. ಚುನಾವಣೆ ಹತ್ತಿರ ಬಂದಿರುವಾಗ ಮತ್ತೆ ಅಧಿಕಾರ ಹಿಡಿಯಲು ಗೆಲುವಿನ ಸುರಕ್ಷಿತ ತಾಣಗಳನ್ನು ಅರಸಿಕೊಂಡು ಗುಳೇ ಹೊಂಟಿದೆ ತಿಂದುಂಡ ಆ ದಂಡು.

ಬಾಲ ಹಿಡಿದು

ಈಗಾಗಲೇ ಯಡಿಯೂಯುರಪ್ಪನವರ ಕೆಜೆಪಿ ಪಕ್ಷದ 'ಕಾರ್ಯಕ್ರಮಕ್ಕೆ ಪುನಸೋತು' ಬಿಜೆಪಿಯೊಳಗಿದ್ದ 14 ಎಂಎಲ್‌ಎಗಳು ರಾಜೀನಾಮೆ ಕೊಟ್ಟಾಗಿ. ಆ ಬಳಿಕ ತಾವು ಹತ್ತಿದ್ದ ಬಿಜೆಪಿ ಹಡಗು ಮುಳುಗುವುದು ಖಾತ್ರಿಯೆಂದರಿತು ಅದರಲ್ಲಿದ್ದವರು ಒಬ್ಬೊಬ್ಬರಾಗಿ ಹೊರ ನಡೆಯುತ್ತಿದ್ದಾರೆ. ಈಗ ಸಚಿವರಾಗಿದ್ದ ರಾಜುಗೌಡ, ಸಿ.ಪಿ.ಯೋಗೀಶ್ವರ್ ರವರ ರಾಜೀನಾಮೆಗಳು ಅಂಗೀಕಾರವಾಗಿವೆ. ಆದರೆ ಮನ ಒಲಿಕೆಗೆ ಅನುಕೂಲವಾಗಲೆಂದೋ ಇನ್ನೂ ಶಂಕರಲಿಂಗೇಗೌಡರ ರಾಜಿನಾಮೆಯನ್ನು ಸ್ಪೀಕರ್‌ರವರು ಕಾದಿರಿಸಿದ್ದಾರೆ. ಇನ್ನೂ ಒಂದು ಡಜನ್‌ನಷ್ಟು ಬಿಜೆಪಿಯ ಎಂಎಲ್‌ಎಗಳು ಪಕ್ಷ ತೊರೆಯಲು ತುದಿಗಾಲ ಮೇಲೆ ನಿಂತಿದ್ದಾರೆ. ಯಾವ ಪಕ್ಷ ಸೇರಬೇಕು, ಯಾರು ಸೇರಿಸಿಕೊಳ್ಳುವರು ಎಂಬುದರ ಮೇಲೆ ಗೆಲುವ ಎತ್ತಿನ ಬಾಲ ಹಿಡಿಯಲು ಅವರ ಪಯಣ ಮುಂದುವರಿಯಲಿದೆ. ಹೀಗಾಗಿ ಬಿಜೆಪಿ ನಾಯಕ ಗಣ ಕೆಲವರಿಗೆ ದಮ್ಮಯ್ಯ ಹಾಕುತ್ತಿದೆ.



ಮಾನವಿಲ್ಲವಾದ ಮೇಲೆ

ಅಂದರೆ 117ರ ಸಂಖ್ಯಾ ಬಲವಿದ್ದ ಬಿಜೆಪಿ 104ಕ್ಕೆ ಕುಸಿದು, ಈಗಿನ ರಾಜೀವಾಮೆ ಪತ್ರಗಳನ್ನು ಅಂಗೀಕರಿಸಿದರೆ ಅದು ಮತ್ತೂ ತಳ ತಲುಪಲಿದೆ. ಹೀಗಾಗಿ ಈಗ ಅಧಿಕಾರದಲ್ಲಿರುವ ಬಿಜೆಪಿಗೆ ಬಹುಮತವಿಲ್ಲ. ಹಾಗಿದ್ದರೂ ಶೆಟ್ಟರ್ ರಾಜಿನಾಮೆ ಕೊಡಲು ತಯಾರಿಲ್ಲ. ಅಧಿಕಾರ ಉಳಿಸಿಕೊಳ್ಳಲು ಆಪರೇಷನ್ ಕ-ಮಲದಂತಹ ಕೆಲಸಕ್ಕೆ ಕೈ ಹಾಕಬೇಡಿ ಏನಾಗುವುದೋ ಹಾಗೇ ಎದುರಿಸಿ ಎಂಬ ಬಿಜೆಪಿ ಹೈಕಮಾಂಡ್‌ನ ಸೂಚನೆ ಕೇವಲ ಒಣ ಉಪದೇಶವಷ್ಟೇ. ಈಗಾಗಲೇ ಯರ್‍ರಾ ಬಿರ್‍ರಿ ಅಪಘಾತಕ್ಕೀಡಾಗಿ ರಿಪೇರಿಯಾಗದಷ್ಟು ಹಾಳಾಗಿ ಗುಜರಿಗೆ ಸೇರಿರುವಾಗ ಸಾಧ್ಯವಿರುವುದು ತೊಲಗುವುದೊಂದೇ. ಆದರೆ ಅಕ್ರಮ, ಅನೈಕ್ಯತೆಯನ್ನೇ ಉಂಡುಟ್ಟು, ಹಾಸಿ ಹೊದ್ದಿರುವ ಬಿಜೆಪಿಯು ಅಂತಹ ಮಾನ ಮರ್ಯಾದೆಯ ಕೆಲಸ ಮಾಡೀತೆ?

ಇಂತಹ ಸನ್ನಿವೇಶದಲ್ಲಿ ಕ್ರಮ ವಹಿಸಬೇಕಾದ ಸಭಾಧ್ಯಕ್ಷರಾದ ಬೋಪಯ್ಯನವರು ಭೂಗತರಾಗಿರುವುದು, ಕಾದು ನೋಡುವುದು ಅವರ ಲಾಬಿ-ಬೈಠಕ್‌ಗಳ ಸಹವಾಸ, ಇತ್ತೀಚಿನ ಇತಿಹಾಸ ಬಲ್ಲವರಿಗೆ ಆಶ್ಚರ್ಯ ತರುವುದೇನಲ್ಲ. ಹಾಗೆ ನೋಡಿದರೆ ಈ ಸರಕಾರ ಉಳಿದುಕೊಂಡಿರುವುದೇ ಸಭಾಧ್ಯಕ್ಷರ ಕೃಪೆಯಿಂದ! ಹೀಗಿರುವಾಗ ಮತ್ತೊಂದು ಆಪರೇಷನ್ ಯಾಕೆ ಬೇಕು. ಅದರಲ್ಲೂ ಏನು ಮಾಡಿದರೂ ಇನ್ನೇನು ಉದುರಿ ಹೋಗಲಿದೆ ಎಂದಿರುವಾಗ ಕೋಟಿಗಳ ಸಪ್ಪಳವೇಕೆ ! ಅಲ್ಲವೇ?

ಸಂದರ್ಭಸಾಧಕತೆ

ಇದು ಆಡಳಿತ ಪಕ್ಷದ ಕಥೆಯಾದರೆ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷವೂ ಸಹ ಏನಾದರಾಗಲಿ ಅಧಿಕಾರಕ್ಕೆ ಬರಬೇಕೆಂಬ ಪ್ರಯತ್ನಕ್ಕೆ ಇಳಿದಿದೆ. ಅಲ್ಲಿಲ್ಲಿಂದ ಹೊರಟಿರುವವರನ್ನು ಪಕ್ಷದೊಳಗೆ ಸೇರಿಸಿಕೊಳ್ಳಲು ಉತ್ಸಾಹ ತೋರಿತು. ಇದು ಸಹಜವಾಗಿಯೇ ತಮ್ಮ ಅವಕಾಶಗಳನ್ನು ತಪ್ಪಿಸಲಿದೆಯೆಂಬ ಆತಂಕದ ಹಿನ್ನೆಲೆಯಲ್ಲಿ ಮೂಲವಾಸಿಗಳನ್ನು ಕಡೆಗಣಿಸಿ ವಲಸೆಗಾರರಿಗೆ ಮಣೆ ಹಾಕಲಾಗುತ್ತಿದೆಯೆಂಬ ಆಂತರಿಕ ಆಕ್ಷೇಪವು ಬಹಿರಂಗ ಬಂಡಾಯವಾಗಿ ಸ್ಫೋಟಿಸಿತು. ತಕ್ಷಣದಲ್ಲಿ ನಗರಸಭಾ ಚುನಾವಣೆಗಳಲ್ಲಿ ಆಗಬಹುದಾದ ಹಾನಿಯನ್ನು ಅಂದಾಜಿಸಿ ಕೊನೆಗೆ ಹೈಕಮಾಂಡ್ ಯಾರನ್ನೂ ಸದ್ಯ ಸೇರಿಸಿಕೊಳ್ಳದಂತೆ ಸೂಚಿಸಿರುವುದು ಭಿನ್ನಮತದ ಬಲವನ್ನು ತೋರಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅದು ಕಾಂಗ್ರೆಸ್, ಬಿಜೆಪಿ, ಕೆಜೆಪಿ ಅಥವಾ ಅಂತಹ ಯಾವುದೇ ಪಕ್ಷವಾಗಿರಲಿ ಅದರ ಧ್ಯಾನವಿರುವುದು ಹೇಗಾದರೂ ಅಧಿಕಾರಕ್ಕೆ ಬರಬೇಕು ಎಂಬುದರಲ್ಲಿ. ಆದ್ದರಿಂದಲೇ ಬರಬಹುದಾದವರ ಯಾವುದೇ ಹಿನ್ನೆಲೆ, ರಾಜಕೀಯ ನಿಲುವು, ಉದ್ದೇಶಗಳನ್ನು ಪರಿಗಣಿಸುತ್ತಿಲ್ಲ. ಉದಾರೀಕರಣದ ಈ ಸಂದರ್ಭದಲ್ಲಿ ಈ ಪಕ್ಷಗಳಲ್ಲಿ ಕನಿಷ್ಠ ತೋರಿಕೆಗೂ ತಮ್ಮಲ್ಲಿರುವ ವ್ಯತ್ಯಾಸಗಳನ್ನು ಕೈ ಬಿಟ್ಟಿವೆ. ಹಾಗಾಗಿಯೇ ಯಾರೂ ಯಾವುದೇ ಪಕ್ಷಕ್ಕೆ ಅತ್ಯಂತ ಸುಲಭವಾಗಿ ಹೋಗಬಹುದು, ಹೊರ ಬರಬಹುದು, ಸೇರಬಹುದು. ಈಗ ಇಲ್ಲಿ ನಡೆಯುತ್ತಿರುವುದು ಕಳೆದ ಐದು ವರುಷಗಳಲ್ಲಿ ನಡೆದು ಬಂದ ಅದೇ ಸಂದರ್ಭಸಾಧಕ ರಾಜಕಾರಣ. ಈಗಾಗಲೇ ಬಿಜೆಪಿಯ ದುರಾಡಳಿತದಿಂದ ನರಳಿರುವ ಜನತೆಗೆ ಇದರಿಂದ ಏನು ಪ್ರಯೋಜನ? ಜನತೆಗೆ ಬಿಡುಗಡೆ ಬೇಕು. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಇಂತಹವರನ್ನೇ ಧೂಳೀಪಟ ಮಾಡಬೇಕಾಗಿರುವುದು.

ನೀವು ತಿರಸ್ಕರಿಸದಿದ್ದಲ್ಲಿ

ಇನ್ನೂ ವಿಶೇಷವೆಂದರೆ ರಾಜ್ಯದಲ್ಲಿ ಅಧಿಕಾರರೂಢ ಬಿಜೆಪಿಯ ವಿರುದ್ಧ ಜನರ ಮನೋಭಾವ ಬೆಳೆಯುತ್ತಿದೆ. ಇದನ್ನು ಗಮನಿಸಿಯೇ ತಮ್ಮನ್ನು ಹೊತ್ತೊಯ್ಯ ಬಲ್ಲ ವಾಹಕ ಪಕ್ಷಗಳನ್ನು ಅಲ್ಲಿರುವವರು ಹುಡುಕುತ್ತಿದ್ದಾರೆ. ಇನ್ನೂ ವಿಚಿತ್ರವೆಂದರೆ ಬಿಜೆಪಿ ಬದಲು ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಯೆಂಬ ಊಹಾಪೋಹಗಳ ನಂಬಿಕೆ! ಅಷ್ಟೇ ಅಲ್ಲ ಒಂದು ವೇಳೆ ಬದಲಾವಣೆ ಬೇಕೆಂದರೆ ಅದೇ ಪರ್ಯಾಯವಾಗಬೇಕು ಎಂಬ ಬಯಕೆ ಬಂಡವಾಳದಾರರಿಗೆ, ಲೂಟಿಗಾರರಿಗೆ ಇಲ್ಲದಿಲ್ಲ. ಅದೇ ದಿಕ್ಕಿನಲ್ಲಿ ರಾಜಕೀಯ ವಾತಾವರಣವನ್ನು ಸೃಷ್ಟಿಸಲು ಆ ವಲಯ ಹೆಣಗುತ್ತಿದೆ.

ಇಲ್ಲಿ ಮುಖ್ಯ ಪ್ರಶ್ನೆಯೆಂದರೆ ಇಂತಹವರನ್ನು ಪುರಸ್ಕರಿಸಬೇಕೇ ಅಥವಾ ತಿರಸ್ಕರಿಸಬೇಕೇ ಎಂಬುದು. ಪರ್ಯಾಯದ ಸೃಷ್ಟಿಯಲ್ಲಿಯೇ ಕರ್ನಾಟಕದ ಭವಿಷ್ಯವಿರುವುದು. ನೀವೇನಂತೀರಿ?

ಫೆ.28, 2013

ಜನಹಿತ ಮರೆತವರಿಗೆ ಪಾಠ ಕಲಿಸುವಂತಾಗಬೇಕು ಚುನಾವಣೆ

ಪ್ರಜಾಪ್ರಭುತ್ವದಲ್ಲಿ ಪ್ರಭುಗಳ ಆಯ್ಕೆ ನಡೆಸಬೇಕಾದ ಪ್ರಜೆಗಳು ಪ್ರಜ್ಞಾವಂತಿಕೆ ಮೆರೆಯುವ ಸಂದರ್ಭ ಚುನಾವಣೆಗಳ ಕಾಲವಾಗಿದ್ದು ಜನ ಹಿತಕ್ಕಾಗಿ ನಿಸ್ವಾರ್ಥ ಹಾಗೂ ಜನೋಪಕಾರಿ ಮನೋಭಾವಗಳಿಂದ ಕೆಲಸ ಮಾಡುವ ಬದ್ಧತೆ ಇರುವವರನ್ನು ಗುರ್ತಿಸಿ ಜನಹಿತ ಮರೆತ ಪಕ್ಷಗಳಿಗೆ ವ್ಯಕ್ತಿಗಳಿಗೆ ಪಾಠ ಕಲಿಸುವಂತಹ ಕೆಲಸಕ್ಕೆ ಮತದಾರರು ಸಂದರ್ಭವನ್ನು ಬಳಸಲೆ ಬೇಕಾದ ತುರ್ತು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು

ಸಿಪಿಐ[ಎಂ] ಪಕ್ಷದ ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ರವರು ಮಾತನಾಡಿ ಪ್ರಜಾಪ್ರಭುತ್ವ ಬಲಿಷ್ಠಗೊಳಿಸಲು ಸಂವಿಧಾನದ 74ನೇ ತಿದ್ದುಪಡಿಯಂತೆ ಅಧಿಕಾರ ವಿಕೇಂದ್ರಿಕರಣ ಹಾಗೂ ಜನತೆಗೆ ಅಧಿಕಾರ ನೀಡಬೇಕಾದ ನಗರ ಸ್ಥಳೀಯ ಸಂಸ್ಥೆಗಳು



ಭೂ ಕಬಳಿಕೆದಾರರ ಕೋಟ್ಯಾಧಿಪತಿಗಳ ಅರಮನೆಯ ಕೂಟಗಳಾಗದೆ ಜನತೆ ಸಂಕಷ್ಟಗಳಿಗೆ ಸ್ಪಂದಿಸುವಂತಹ ನೈಜ ಪ್ರಜಾ ಪ್ರಭುತ್ವದ ಕೇಂದ್ರಗಳಾಗಿ ಕೆಲಸ ನಿರ್ವಹಿಸುವಂತಾಗಬೇಕೆಂದರು.

ಕಾರ್ಯಕ್ರಮದ ಆರಂಭದಲ್ಲಿ ನಗರ ಸಮಿತಿಯ ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯರವರು ಪ್ರಾಸ್ತವಿಕ ಮಾತನಾಡಿದರು.

ಈ ಸಮಾರಂಭದಲ್ಲಿ 5ನೇ ವಾರ್ಡಿನ ಅಭ್ಯರ್ಥಿ ಬಿ.ಉಮೇಶ್, 11ನೇ ವಾರ್ಡಿನ ಅಭ್ಯರ್ಥಿ. ಕೆ.ಮಂಜುನಾಥ್ 12ನೇ ವಾರ್ಡಿನ ಅಭ್ಯರ್ಥಿ ಇಮ್ತಿಯಾಜ್ ಉನ್ನೀಸಾ, 13ನೇ ವಾರ್ಡಿನ ಅಭ್ಯರ್ಥಿ ರಫೀಕ್ ಅಹಮದ್, 22ನೇ ವಾರ್ಡಿನ ಅಭ್ಯರ್ಥಿ ರಾಘವೇಂದ್ರ ಅವರು ಹಾಜರಿದ್ದರು. ●

ಮುಂದಾಗಬೇಕೆಂದು ಹಿರಿಯ ಕಾರ್ಮಿಕ ದುರೀಣ ಸಿಪಿಐ [ಎಂ] ನಾಯಕ ಮಹಮದ್ ದಸ್ತಗೀರ್‌ರವರು ಅಭಿಪ್ರಾಯಪಟ್ಟರು.

ಅವರು ದಿನಾಂಕ 27-2-2013 ರಂದು ತುಮಕೂರಿನ ನಜರಾಬಾದ್‌ನಲ್ಲಿ ನಡೆದ ತುಮಕೂರು ನಗರಸಭಾ ಚುನಾವಣೆಗೆ ಸಿಪಿಐ [ಎಂ] ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ಸಿಪಿಐ[ಎಂ] ಮತ್ತೊಬ್ಬ ಮುಖಂಡ ಬಿ.ಉಮೇಶ್ ಮಾತನಾಡಿ ಸದಾ ಜನಹಿತದ ಸದುದ್ದೇಶದಿಂದ ಎಚ್ಚರ ಇರುವ ಚಳುವಳಿಗಳು ಚುನಾವಣೆಗಳ ಸಂದರ್ಭದಲ್ಲಿ ಜನಗಳಿಂದ ದೂರ ಉಳಿದುಬಿಡುವ ಕ್ರಮ ಸರಿಯಲ್ಲ ಹಾಗಾಗಿ ಈ ವ್ಯವಸ್ಥೆಯ ಎಲ್ಲಾ ತಪ್ಪುಗಳನ್ನು ಸರಿಪಡಿಸಲು ಚಳುವಳಿಗಳಲ್ಲಿರುವ ಜನರು ಜನರೊಂದಿಗೆ ಸೇರಿಕೊಂಡು ಚುನಾವಣೆ

ಜನಾರೋಗ್ಯದ ರಾಜಕೀಯ....

ಪುಟ 2 ರಿಂದ

ಸಾಧ್ಯತೆಗಳಿದ್ದರೂ ಅದನ್ನು ಕಡೆಗಣಿಸಿರುವುದು.

* ವೈದ್ಯಕೀಯ ಶಿಕ್ಷಣ ಸಮರ್ಪಕವಾಗಿರದೇ ಇರುವುದು, ಜನರ ಆರ್ಥಿಕ, ಸಾಮಾಜಿಕ, ಆಯಾಮಗಳಿಗೆ ಮಹತ್ವ ಕೊಡದೇ ಇರುವುದು.
* ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳನ್ನೂ ಅಪ್ಪಿಕೊಂಡಿರುವ ಸರ್ಕಾರ ಆರೋಗ್ಯ ಕ್ಷೇತ್ರದ ಜವಾಬ್ದಾರಿಯಿಂದ ಹಿಂತೆಗೆಯುತ್ತಿದೆ. ನೈರ್ಮಲ್ಯ ಕಾರ್ಯಕ್ರಮ ಬುಡಮೇಲಾಗುತ್ತಿದೆ.
* ಔಷದಿ, ಲಸಿಕಾ ಕ್ಷೇತ್ರದ ಸಾಂಪ್ರದಾಯಿಕ ಚಿಕಿತ್ಸಾ ಪದ್ದತಿಯನ್ನು ಕಡೆಗಣಿಸುವುದು.

ಆರೋಗ್ಯ ಕ್ಷೇತ್ರ ಪ್ರಾರಂಭದಲ್ಲಿ ಒಳ್ಳೆಯ ನೀತಿ ರೂಪಿಸಲು ಮುಂದಾಗಿತ್ತು. ಕಾಲಕ್ರಮೇಣ ಅದು ಜಾಗತೀಕರಣ ನೀತಿಗೆ ತಲೆಬಾಗಿ ಜನಾರೋಗ್ಯದ ಮುಖ್ಯ ಅಂಶಗಳನ್ನು ಕಡೆಗಣಿಸಿದೆ. ಇಂದು ಜನಸಾಮಾನ್ಯರಿಗೆ ರಾಜಕೀಯದ ಬಗ್ಗೆ ಸಿನಿಕತೆ ಉಂಟಾಗಿದೆ. ಜನಾರೋಗ್ಯ ಸಾಧನೆಗೆ ಹಾಗೂ ಸರ್ಕಾರದ ಇಂದಿನ ನೀತಿಗೆ ಈಗಿರುವ ಪ್ರತಿರೋಧ ಸಾಲದು. ಜನಾರೋಗ್ಯ ಆಂದೋಲನ ಸದೃಢವಾದಲ್ಲಿ ಮಾತ್ರ ಜನಾರೋಗ್ಯ ಸುಧಾರಣೆಯಾಗಲು ಸಾಧ್ಯ.

ಸ್ಥಳೀಯ ಸಂಸ್ಥೆ ಚುನಾವಣೆ: ಸಿಪಿಐ(ಎಂ) ಅಭ್ಯರ್ಥಿಗಳ- ಬೆಂಬಲಿತ ಅಭ್ಯರ್ಥಿಗಳ ಜಿಲ್ಲಾವಾರು ವಿವರ

1. ರಾಯಚೂರು ಜಿಲ್ಲಾ ಸಮಿತಿ :

1. ಸಿಂಧನೂರು ನಗರಸಭೆ – ವಾರ್ಡ್ 29 – ನಾರಾಯಣ ಕಿಲ್ಲೇದ್ – ಸಾಮಾನ್ಯ
2. ಸಿಂಧನೂರು ನಗರಸಭೆ – ವಾರ್ಡ್ 25– ದೇವೇಂದ್ರಗೌಡ– ಸಾಮಾನ್ಯ
3. ಮಾನ್ವಿ ಪುರಸಭೆ – ವಾರ್ಡ್ 3– ಮಲ್ಲಿಕಾರ್ಜುನ – ಸಾಮಾನ್ಯ

ಒಟ್ಟು = 03

2. ಬಳ್ಳಾರಿ ಜಿಲ್ಲಾ ಸಮಿತಿ:

1. ಬಳ್ಳಾರಿ ಮಹಾನಗರ ಪಾಲಿಕೆ-ಚಂದ್ರಕುಮಾರಿ- ವಾರ್ಡ್ 32-ಸಾಮಾನ್ಯ-ಮಹಿಳೆ

ಹೊಸಪೇಟೆ ನಗರಸಬೆ

1. ಎ. ಕರುಣಾನಿಧಿ. ಬೆಂಬಲಿತರು – 2.ಮಹೇಶ್, 3.ಎನ್.ಯಲಲಿಂಗ, 4.ಜಿ. ಕುಲಯಪ್ಪ

ಶಿರಗುಪ್ಪ ಪುರಸಭೆ – 1.ಓಬಳೇಶಪ್ಪ, 2.ಅಂಜಿನೇಯ, 3.ಮಲ್ಲಮ್ಮ, 4.ಖಾಜಾ

ಒಟ್ಟು = 09

3. ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ :

1. ಅನೇಕಲ್ : ಆರ್. ರಾಮಕೃಷ್ಣ – ವಾರ್ಡ್ 1 – ಸಾಮಾನ್ಯ
2. ಅನೇಕಲ್ : ವಿ. ಮಹೇಶ್ – ವಾರ್ಡ್ 2 – ಬಿ.ಸಿ.ಎಂ.(ಬಿ)
3. ಅನೇಕಲ್ : ಕೆ.ಪದ್ಮ – ವಾರ್ಡ್ 3 – ಸಾಮಾನ್ಯ
4. ಅನೇಕಲ್ : ಎಸ್. ಚಂದ್ರು – ವಾರ್ಡ್ – – ಸಾಮಾನ್ಯ
5. ಅನೇಕಲ್ : ಡಿ.ವಿ. ರುಕ್ಮಿಣಿ – ವಾರ್ಡ್ 20 – ಸಾಮಾನ್ಯ – ಮಹಿಳೆ
6. ಅನೇಕಲ್ : ವೆಂಕಟಲಕ್ಷ್ಮಮ್ಮ – ವಾರ್ಡ್ 22 – ಬಿ.ಸಿ.ಎಂ.(ಎ) □ ಮಹಿಳೆ
7. ಅನೇಕಲ್ : ರವಿ – ವಾರ್ಡ್ 23 – ಸಾಮಾನ್ಯ

ಸಿ.ಪಿ.ಐ. (ಎಂ) ಬೆಂಬಲಿತ

1. ರಾಮನಗರ ಸಿ.ಎಂ.ಸಿ. – ಭಾನು – ವಾರ್ಡ್ 23 ಟಿಪ್ಪುನಗರ-ಬಿ.ಸಿ.ಎಂ.(ಎ) – ಮಹಿಳೆ
2. ರಾಮನಗರ ಸಿ.ಎಂ.ಸಿ. – ಸಹನ ಭಾನು-ವಾರ್ಡ್ 19 ಯಾಕುಬ್‌ನಗರ – ಬಿ.ಸಿ.ಎಂ.(ಎ)-ಮಹಿಳೆ
3. ರಾಮನಗಧ ಸಿ.ಎಂ.ಸಿ – ಗುಹಾರ್ ತಾಜ್-ವಾರ್ಡ್ 24 ಯಾಕುಬ್‌ನಗರ – ಬಿ.ಸಿ.ಎಂ.(ಎ) -ಮಹಿಳೆ
4. ರಾಮನಗರ ಸಿ.ಎಂ.ಸಿ. -ಖಾಜಾ-ವಾರ್ಡ್ 22-ರೆಹಮಾನ್ ನಗರ – ಸಾಮಾನ್ಯ

ಒಟ್ಟು = 11

4. ಉತ್ತರ ಕನ್ನಡ ಜಿಲ್ಲೆ :

1. ದಾಂಡೇಲಿ ನಗರ – ಸಿ.ಪಿ.ಐ(ಎಂ) ಬೆಂಬಲಿತ ಎಂ. ಶಾಮ್‌ಸನ್, ರಾಜೇಸಾಬ್

ಒಟ್ಟು = 01

5. ತುಮಕೂರು ಜಿಲ್ಲೆ :

1. ತುಮಕೂರು : ಉಮೇಶ್ – ವಾರ್ಡ್ 5 – ಸಾಮಾನ್ಯ
2. ತುಮಕೂರು : ಕೆ. ಮಂಜುನಾಥ್ – ವಾರ್ಡ್ 11 – ಎಸ್.ಸಿ.
3. ತುಮಕೂರು – – ವಾರ್ಡ್ 12 – ಬಿ.ಸಿ.ಎಂ.(ಎ) – ಮಹಿಳೆ
4. ತುಮಕೂರು – ರಫೀಜ್ ಆಹಮದ್ – ವಾರ್ಡ್ 13 – ಬಿ.ಸಿ.ಎಂ(ಎ)
5. ತುಮಕೂರು – ಎಸ್. ರಾಘವೇಂದ್ರ – ವಾಡ್ 22 – ಸಾಮಾನ್ಯ
6. ಕುಣಿಗಲ್ ಪುರಸಭೆ – ಅಬ್ದುಲ್ ಮುನಾಫ್ – ವಾರ್ಡ್ 15 – ಸಾಮಾನ್ಯ
7. ಕುಣಿಗಲ್ ಪಟ್ಟಣ ಪಂಚಾಯತ್ – ಸುರೇಂದ್ರನಾಥ್ – ವಾರ್ಡ್ 14

ಒಟ್ಟು = 07

6. ಧಾರವಾಡ ಜಿಲ್ಲಾ ಸಂಘಟನಾ ಸಮಿತಿ :

1. ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ – ದುರ್ಗಪ್ಪ ಹನುಮಪ್ಪ ಚಿಕ್ಕತುಂಬಲ್ – ವಾರ್ಡ್ 25 – ಸಾಮಾನ್ಯ

ಒಟ್ಟು = 01

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಂತರ ರಾಷ್ಟ್ರೀಯ ಬಂಡವಾಳಿಗರ ಆಕರ್ಷಣೆಯ ಕೇಂದ್ರವಾಗಿರುವ ಬೆಂಗಳೂರು ನಗರದಲ್ಲಿ ಬಡವರ ಗುಡಿಸಲುಗಳನ್ನು ಸಮಾಧಿ ಮಾಡಿ ಅದರ ಮೇಲೆ .ಜಗಮಗಿಸುವ ಮಾಲ್‌ಗಳು ತಲೆ ಎತ್ತಲು ಹೊಂಚು ಹಾಕಿ ಕುಳಿತಿವೆ. ಈಜಿಪುರ ಸ್ಲಂ ಜನರ ಬದುಕಿನ ಮೇಲೆ ನಡೆದಿರುವ ಈ ಅನಾಗರೀಕ ಆಕ್ರಮಣ–ಪಾತಕದ ಹಿಂದೆ ಯಾರಿದ್ದಾರೆ. ? ಏನಿದೆ ?

ಸ್ಲಂ ಜನರ ಗೋರಿಯ ಮೇಲೆ ಐಷಾರಾಮಿ ಮಾಲ್ ಕಟ್ಟಲು ಹೊರಟ ಬಿಬಿಎಂಪಿ

ಅದು ಜನವರಿ 17, 2013. ಬೆಂಗಳೂರಿನ ಈಜಿಪುರದಲ್ಲಿನ ಬಡಜನರ ಕ್ವಾರ್ಟ್ರಸ್ (ಇಡಬಲ್‌ಯುಎಸ್)ನಲ್ಲಿ ಬೆಳ್ಳಂಬೆಳಿಗ್ಗೆ ಹೆಂಗಸರು, ಮಕ್ಕಳ ಚೀರಾಟ. ಉಟ್ಟ ಬಟ್ಟೆಯಲ್ಲೇ ಬೀದಿಪಾಲಾದ ಜನರ ಆಕ್ರಂದನಕ್ಕೆ ಕಟುಕನ ಮನವೂ ಕಲಕುವಂತಿತ್ತು. ಕ್ವಾರ್ಟ್ರಸ್‌ನೊಳಗೆ ಏಕಾಏಕಿ ನುಗ್ಗಿದ ದೈತ್ಯ ಜೆಸಿಬಿ– ಬುಲ್ಡೋಜರ್‌ಗಳ ಘರ್ಜನೆಗೆ ಕ್ಷಣಾರ್ಧದಲ್ಲಿ 1,512 ಮನೆಗಳು ನೆಲಸಮಗೊಂಡವು. ಪಾತ್ರೆ – ಪಗಡೆ, ಬಟ್ಟೆ ಬರೆ ಎಲ್ಲವೂ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಮುಂದೇನು ಮಾಡಬೇಕೆಂದು ತೋಚದ ಅಮಾಯಕ ಸ್ಲಂ ಜನರ ಪಾಡು ಅಕ್ಷರಶಹ ಬೀದಿಗೆ ಬಿದ್ದಿತ್ತು. ಹಣವಂತರ ಮೋಜಿಗೆ ಗುಡಿಸಲುಗಳು ಗೋರಿಯಾದವು. ಬೆಂಗಳೂರಿನ ಹಲವು ಸ್ಲಂಗಳ ಹಾಗೆ ಸ್ಲಂ ಕೂಡ ಇತಿಹಾಸದ ಪುಟ ಸೇರಿತು.

ಆರ್ಥಿಕವಾಗಿ ಹಿಂದುಳಿದ ವಿಭಾಗಗಳಿಗಾಗಿ 1991ರಲ್ಲಿ ಬಿಬಿಎಮ್‌ಪಿ ವತಿಯಿಂದ ನಿರ್ಮಿಸಿದ್ದ ಈ ಕ್ವಾರ್ಟ್ರಸ್‌ನಲ್ಲಿ ಸುಮಾರು 1512 ಕುಟುಂಬಗಳ 5000ಕ್ಕೂ ಹೆಚ್ಚಿನ ಜನ ವಾಸವಾಗಿದ್ದರು. ವಾಸ್ತವವಾಗಿ ಈ ವಸತಿ ಸಮುಚ್ಚಯವನ್ನು ಪೊಲೀಸ್ ಸಿಬ್ಬಂದಿಗೆಂದು ನಿರ್ಮಿಸಲಾಗಿತ್ತು. ಆದರೆ ಕಟ್ಟಡದ ಗುಣಮಟ್ಟ ಸರಿಯಿರದ ಕಾರಣ ಪೊಲೀಸ್ ಇಲಾಖೆ ಇದನ್ನು ತೆಗೆದುಕೊಳ್ಳಲು ನಿರಾಕರಿಸಿತು. ಹೀಗಾಗಿ ಇದನ್ನು ಇಡಬಲ್‌ಯುಎಸ್ ಕ್ವಾರ್ಟ್ರಸ್ ಎಂದು ನಾಮಕರಣ ಮಾಡಿ, ಏನೋ ಬಾರಿ ಉಪಕಾರ ಮಾಡುವಂತೆ ಪೋಸು ನೀಡಿ ಮಾಧ್ಯಮಗಳಲ್ಲಿ ಭಾರಿ ಪ್ರಚಾರ ಪಡೆದು ಸ್ಲಂ ನಿವಾಸಿಗಳಿಗೆ ಹಂಚಲಾಯಿತು. ಆಗಲೇ ಸ್ಲಂ ಜನರ ಶವ ಪೆಟ್ಟಿಗೆಗೆ ಮೊಳೆ ಹೊಡೆಯಲಾಗಿತ್ತು. ಹಂಚಿಕೆಯಾದ ಕೆಲವೆ ವರ್ಷಗಳಲ್ಲಿ ಒಂದು ವಸತಿ ಸಮುಚ್ಚಯ (2003) ಹಠಾತ್ ಕುಸಿಯಿತು. ಕಟ್ಟಡದ ಗುಣಮಟ್ಟ ತೀರ ಕಳಪೆಯಿಂದ ಕೂಡಿದೆ ಎಂದು ಸರ್ಟಿಫಿಕೇಟ್ ನೀಡಿದ ಮೇಲೂ ವಾಸಕ್ಕೆ ಮನೆ ನೀಡಲಾಗಿತ್ತು. ಪರಿಣಾಮ ಮೂರು ಜನ ಅಸು ನೀಗಿ ಹಲವರು ತೀವ್ರವಾಗಿ ಗಾಯಗೊಂಡರು. ಈ ಘಟನೆಗೆ ನಾಗರಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪರ್ಯಾಯ ವಸತಿ ಕಲ್ಪಿಸುವುದಾಗಿ ಬಿಬಿಎಮ್‌ಪಿಯು ನಿವಾಸಿಗಳಿಗೆ ಭರವಸೆ ನೀಡಿತ್ತು, ತದ ನಂತರ 2008ರಲ್ಲಿ ಇನ್ನುಳಿದ ವಸತಿ ಸಮುಚ್ಚಯಗಳನ್ನೂ ಕೆಡವಿಹಾಕಿ ತಾತ್ಕಾಲಿಕ ಪರಿಹಾರವಾಗಿ ಅದೇ ಜಾಗದಲ್ಲಿ ಟಿನ್ ಶೆಡ್‌ಗಳನ್ನು ನಿರ್ಮಿಸಿಕೊಡಲಾಗಿತ್ತು.

ಆರ್ಥಿಕವಾಗಿ ಹಾಗು ಸಾಮಾಜಿಕವಾಗಿ ತೀರ ಹಿಂದುಳಿದ ದಲಿತ, ಅಲ್ಪಸಂಖ್ಯಾತ ಹಾಗು ಹಿಂದುಳಿದ ವರ್ಗಗಳ ಶೇ.95 ಜನರೇ ವಾಸವಾಗಿದ್ದಾರೆ. ಹೀಗಿದ್ದೂ ಕೂಡ ಕೆಳ ವರ್ಗದ ಜನತೆಯ ಸಂಕಟಗಳಿಗೆ ನೆರವಾಗಬೇಕಿದ್ದ ಬಿಬಿಎಮ್‌ಪಿ ಹಾಗು ಸರ್ಕಾರ ಈ ರೀತಿಯ ದೌರ್ಜನ್ಯ ನಡೆಸಿರುವುದರ ಹಿಂದೆ ಪ್ರಭಾವಿಗಳ ಕೈವಾಡವಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕೋಟ್ಯಾಂತರ ರೂಪಾಯಿ ಬೆಲೆಬಾಳುವ 15.22ಎಕರೆ ವಿಸ್ತೀರ್ಣದ ಈ ಭೂಮಿಯನ್ನು ಇಡಿಯಾಗಿ ಕಬಳಿಸಲು ನಡೆಸಿರುವ ಹುನ್ನಾರ ಇದಾಗಿದೆ.



ಈ ಸಧ್ಯ 17 ಜನವರಿ 2013ರಂದು ಬಿಬಿಎಮ್‌ಪಿಯು ಸಂಬಂಧಪಟ್ಟ ನಿವಾಸಿಗಳಿಗೆ ನೋಟೀಸನ್ನಾಗಲಿ, ಕನಿಷ್ಠ ಮುನ್ಸೂಚನೆಯನ್ನೂ ನೀಡದೆ ಜೆಸಿಬಿ– ಬುಲ್ಡೋಜರ್‌ಗಳ ಮೂಲಕ ಏಕಾಏಕಿ ನುಗ್ಗಿ ನಿವಾಸಿಗಳು ವಾಸವಾಗಿದ್ದ ಶೆಡ್‌ಗಳನ್ನು ಧ್ವಂಸ ಮಾಡಿ ಬಡ ನಿವಾಸಿಗಳನ್ನು ಬೀದಿಗೆ ತಳ್ಳಿದೆ. ಬಿಬಿಎಮ್‌ಪಿ ಹಾಗು ಸರ್ಕಾರದ ಈ ಕ್ರಮ ಅತ್ಯಂತ ಅಮಾನುಷ ಹಾಗು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ. ನಿವಾಸಿಗಳಿಗೆ ಪುನರ್ವಸತಿಯನ್ನೂ ಕಲ್ಪಿಸದೆ ತೆರವು ಕಾರ್ಯಾಚರಣೆ ಮಾಡುವಂತಿಲ್ಲ ಎಂದು ತೀರ್ಪೊಂದರಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದೆ. ಹೀಗಿದ್ದೂ ಕೂಡ ಸುಪ್ರೀಂ ಕೋರ್ಟ್‌ನ ಆದೇಶವನ್ನೂ ಉಲ್ಲಂಘಿಸಿ ಮನೆಗಳ ತೆರವಿಗೆ ಮುಂದಾಯಿತು.

ಈ ಬಡ ನಿವಾಸಿಗಳನ್ನು ಬಲತ್ಕಾರದಿಂದ ಬೀದಿಪಾಲು ಮಾಡಿ ಮನೆಗಳನ್ನು ಧ್ವಂಸಗೊಳಿಸಿದ್ದು ಯಾವುದೋ ಘನ ಉದ್ದೇಶಕ್ಕಲ್ಲ ಬದಲಾಗಿ ಬೃಹತ್ ಮಾಲುಗಳನ್ನು ನಿರ್ಮಿಸುವ ಸಲುವಾಗಿ ಎಂಬುದು ಇಲ್ಲಿ ಗಮನಾರ್ಹ. ಈ ಜಾಗವನ್ನು ಉದಯ್ ಗರುಡಾಚಾರ್ ಎಂಬ ಉದ್ಯಮಿಯ ಮೇವರಿಕ್ ಎಂಬ ಕಟ್ಟಡ ನಿರ್ಮಾಣ ಸಂಸ್ಥೆಗೆ ನೀಡಲಾಗಿದೆ. ಗರುಡಾಮಾಲ್ ಖ್ಯಾತಿಯ ಉದಯ್ ಗರುಡಾಚಾರ್ ಎಂಬ ತಿಮಿಂಗಿಲ ಕಾಂಗ್ರೇಸ್ ಪಕ್ಷದ ಸ್ಥಳೀಯ ಶಾಸಕ ಹ್ಯಾರೀಸ್, ಆರ್. ವಿ ದೇಶಪಾಂಡೆ, ಗೃಹ ಸಚಿವ ಆರ್. ಅಶೋಕ್ ಹಾಗು ಇತರೆ ಕೆಲವರಿಗೆ ಆಮಿಷಗಳನ್ನು ಒಡ್ಡಿ ಲೈಸನ್ಸ್ ಪಡೆದಿದ್ದಾನೆ ಎಂದು ಸ್ಥಳೀಯ ಜನ ಮಾತನಾಡುತ್ತಿದ್ದಾರೆ. ಸಾವಿರಾರು ನಿರ್ಗತಿಕ ಸ್ಲಂ ನಿವಾಸಿಗಳ ಬದುಕಿನ ಗೋರಿಯ ಮೇಲೆ ಬೃಹತ್ ವಾಣಿಜ್ಯ ಸಂಕೀರ್ಣವೆಂಬ ಮೋಜಿನ ಸೌಧ ಕಟ್ಟಲು ಹೊರಟಿದ್ದಾರೆ.

ಈ ಹಿನ್ನೆಲೆಯಲ್ಲಿ ಡಿವೈಎಫ್ಐ ಹಾಗು ಇನ್ನಿತರ ಎಲ್ಲಾ ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳನ್ನು ಒಳಗೊಂಡ ಬಡವರ ಇಡಬಲ್‌ಯುಎಸ್ ಕ್ವಾರ್ಟ್ರಸ್ **ಭೂ ಕಬಳಿಕೆ ವಿರೋಧಿ ವೇದಿಕೆಯಿಂದ** ಫೆ. 9, 2013ರಂದು ಇಡಬಲ್‌ಯುಎಸ್ ಕ್ವಾರ್ಟ್ರಸ್ ಭೂಮಿಯನ್ನು ಮರುವಶಪಡಿಸಿಕೊಳ್ಳುವ ಚಳುವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ಆಸ್ಟಿನ್ ಟೌನ್‌ನಲ್ಲಿ ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಜಮಾಯಿಸಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್. ಎಸ್. ದೊರೆಸ್ವಾಮಿಯವರು ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು. ದಾರಿಯುದ್ದಕ್ಕೂ ಬಿಬಿಎಂಪಿ ಹಾಗು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತ ಬಂದ ಪ್ರತಿಭಟನಾಕಾರರು ಜಾಗದತ್ತ ಧಾವಿಸಿದಾಗ ಮಾರ್ಗ ಮಧ್ಯೆ ಪೊಲೀಸರು ಮೆರವಣಿಗೆಯನ್ನು ತಡೆಯಲು ಯತ್ನಿಸಿದರು. ಇದರಿಂದ ಪ್ರತಿಭಟನಾಕಾರರು ಹಾಗು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು.



ಕಿಮ್ಮತ್ತು

ಯಾರು ಯಾರೊ ಬಂದು ಹೋದವರನ್ನೆಲ್ಲ
ಸ್ಮರಿಸಿಕೊಳ್ಳಲು ನೋಡಿ ಸಮಯವೂ ಇಲ್ಲ
ಮಂತ್ರಿಗಳು ಜರತಾರಿ ಸ್ವಾಮಿಗಳು ಮತ್ತು
ಕೋಟಿ ಪತಿಗೆ ಮಾತ್ರ ಇಲ್ಲಿ ಕಿಮ್ಮತ್ತು

– ವಿಡಂಬಾರಿ

ಸಮುದಾಯ ಐದನೇ ರಾಜ್ಯ ಸಮ್ಮೇಳನ

ವ್ಯಾಪಕ ಪ್ರಗತಿಪರ ಸಾಂಸ್ಕೃತಿಕ ಚಳುವಳಿ ಕಟ್ಟಲು ಪ್ರೊ. ಐಜಾಜ್ ಕರೆ

ಫ್ಯಾಸಿಸಂ ಬೆಳೆಯುವ ಸೂಚನೆಗಳು ಕಂಡು ಬರುತ್ತಿರುವ ಇಂದಿನ ಭಾರತದಲ್ಲಿ ಇಂದಿನ ಪರಿಸ್ಥಿತಿಗೆ ಅನುಗುಣವಾದ ವ್ಯಾಪಕ ಪ್ರಗತಿಪರ ಸಾಂಸ್ಕೃತಿಕ ಚಳುವಳಿ ಕಟ್ಟಬೇಕಿದೆ ಎಂದು ಪ್ರೊ. ಐಜಾಜ್ ಅಹ್ಮದ್ ಕರೆ ಕೊಟ್ಟರು. ಅವರು ಫೆಬ್ರುವರಿ 17–18 ರಂದು ಮಂಗಳೂರಿನ ಶಕ್ತಿ ನಗರದ 'ಕಲಾಂಗಣ'ದ ಕೆ.ನಾಗೇಶ್ ಕುಮಾರ್ ಸಭಾಂಗಣದ ಪಂಡಿತ್ ರವಿಶಂಕರ್ ವೇದಿಕೆಯಲ್ಲಿ ಚಂಡೆ ಹೊಡೆಯುವ ಮೂಲಕ ಸಮುದಾಯದ 5ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ –'ಪ್ರಗತಿಪರ ಸಾಂಸ್ಕೃತಿಕ ಚಳುವಳಿಗಳ ಮುಂದಿರುವ ಸಾಧ್ಯತೆಗಳು ಮತ್ತು ಸವಾಲುಗಳು' ಎಂಬ ವಿಷಯದ ಬಗ್ಗೆ ಮಾತನಾಡುತ್ತಿದ್ದರು.


ಆಳುವ ವರ್ಗದ ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ರಾಜಕೀಯ–ಆರ್ಥಿಕ ನೀತಿಗಳಲ್ಲಿ ಏನೇನೂ ವ್ಯತ್ಯಾಸ ಉಳಿದಿಲ್ಲ. ಕೋಮುವಾದ ಬಗೆಗಿನ ಧೋರಣೆಯಲ್ಲೂ ಬಹಳ ವ್ಯತ್ಯಾಸ ಇಲ್ಲ. ಅಫ್ಜಲ್ ಗುರು ಗಲ್ಲು ಶಿಕ್ಷೆ ವಿಧಿಸಿದ ರೀತಿ ನೋಡಿದರೆ ಕಾಂಗ್ರೆಸ್ 'ಸಾಫ್ಟ್' ಹಿಂದುತ್ವ ಅನುಸರಿಸುತ್ತಿದ್ದರೆ, ಬಿಜೆಪಿ 'ಹಾರ್ಡ್' ಹಿಂದುತ್ವ ಅನುಸರಿಸುತ್ತಿದೆ. 'ಸಾಫ್ಟ್' ಹಿಂದುತ್ವ ಈಗಾಗಲೇ ಒಪ್ಪಿಕೊಂಡ ನೀತಿಯಾಗಿ ಬಿಟ್ಟಿದೆ. ನವ–ಉದಾರವಾದಿ ನೀತಿಗಳ ಪರಿಣಾಮವಾಗಿ ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದ್ದಂತೆ ಜಾಗತೀಕರಣದ ಫಲವಾಗಿ ಉದ್ಯೋಗ ಪಡೆದ ಜನರ ಉದ್ಯೋಗ ನಷ್ಟವಾಗಲು ಆರಂಭವಾಗುತ್ತದೆ. ಈ ಜನ ಚಾರಿತ್ರಿಕ ಅನುಭವದ ಪ್ರಕಾರ ಫ್ಯಾಸಿಸಂಗೆ ಒಲವು ತೋರಿಸುವ ಸಾಧ್ಯತೆ ಹೆಚ್ಚು. ಆದ್ದರಿಂದ ಬಿಜೆಪಿ ಮತ್ತು ಮೋದಿಯವರ 'ಹಾರ್ಡ್' ಹಿಂದುತ್ವ ಆಕರ್ಷಕವಾಗುವ ಸಾಧ್ಯತೆ ಇದೆ.

ಇಂದಿನ ಸಾಂಸ್ಕೃತಿಕ ಚಳುವಳಿಯ ಸವಾಲುಗಳು

'ಪ್ರಗತಿಪರತೆ' ಮತ್ತು 'ಸಂಸ್ಕೃತಿ' ಬಗ್ಗೆ ತಮ್ಮ ನಿರ್ವಚನೆಯನ್ನು ವಿವರವಾಗಿ ಮುಂದಿಟ್ಟ ಅವರು 1930–40ರ ದಶಕದಲ್ಲಿ ಭಾರತದಲ್ಲಿ ಮತ್ತು ವಿಶ್ವವ್ಯಾಪಿಯಾಗಿಯೂ ನಡೆದ ಫ್ಯಾಸಿಸ್ಟ್–ವಿರೋಧಿ ಪ್ರಗತಿಪರ ಸಾಂಸ್ಕೃತಿಕ ಚಳುವಳಿಯ



ಅನುಭವದ ಆಧಾರದ ಮೇಲೆ ಇಂದಿನ ಸಾಧ್ಯತೆಗಳೂ ಮತ್ತು ಸವಾಲುಗಳನ್ನು ಎದುರಿಸುವ ಬಗ್ಗೆ ಅವರು ತಮ್ಮ ವಿಚಾರಗಳನ್ನು ಮುಂದಿಟ್ಟರು. 1930–40ರ ದಶಕದಲ್ಲಿ ಭಾರತದಲ್ಲಿ ಮೂಡಿ ಬಂದು ಬೃಹತ್ತಾಗಿ ಬೆಳೆದು ಬಂದ ಇಪ್ಟಾ ಮತ್ತು ಪ್ರಗತಿಶೀಲ ಲೇಖಕರ ಸಂಘ ಫ್ಯಾಸಿಸ್ಟ್–ವಿರೊಧ, ಸಾಮ್ರಾಜ್ಯಶಾಹಿ–ವಿರೋಧ ಮತ್ತು ಪಾಳೆಯಗಾರಿ ವ್ಯವಸ್ಥೆಯ ವಿರುದ್ಧ ವ್ಯಾಪಕ ಐಕ್ಯ ಸಾಂಸ್ಕೃತಿಕ ಚಳುವಳಿ ಕಟ್ಟಲು ಸಾಧ್ಯವಾಗಿತ್ತು. ಪ್ರೇಮಚಂದ್, ಟಾಗೋರ್, ಸರೋಜಿನ ನಾಯ್ಡು, ನೆಹರೂರಂಥವರು ಚಳುವಳಿ ಜತೆ ಗುರುತಿಸಿ ಕೊಂಡಿದ್ದರು. ಸಾಂಸ್ಕೃತಿಕ ಚಳುವಳಿಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದ ಕಮ್ಯುನಿಸ್ಟ್–ಎಡಪಂಥೀಯ ಲೇಖಕರು ಕಲಾವಿದರು ಈ ಚಳುವಳಿಗೆ ಸಹಜ ನಾಯಕರಾಗಿದ್ದರು. ಕಮ್ಯುನಿಸ್ಟ್–ಎಡಪಂಥೀಯರಲ್ಲದ ಲೇಖಕರು ಕಲಾವಿದರು ಸಹ ಸ್ಪಷ್ಟ ರಾಜಕೀಯ ನಿಲುವುಗಳನ್ನು ಹೊಂದಿದ್ದು, ಅವಿಭಜಿತ ಸಿಪಿಐನ ರಾಜಕೀಯ ನಾಯಕತ್ವವನ್ನೂ ಒಪ್ಪಿಕೊಂಡಿದ್ದರು.



ಆದರೆ ಇಂದಿನ ಸನ್ನಿವೇಶ ಬಹಳ ಬಿನ್ನವಾಗಿದೆ. ಪ್ರಗತಿಪರತೆ ಎನ್ನುವುದು ಸಮಾಜದ ನಿರ್ದಿಷ್ಟ ರಚನೆ ಮತ್ತು ಸನ್ನಿವೇಶವನ್ನು ಹೊಂದಿಕೊಂಡಿರುತ್ತದೆ. ಇಂದು ಕೋಮುವಾದಕ್ಕೆ, ಫ್ಯಾಸಿಸಂಗೆ ಜಾತಿವ್ಯವಸ್ಥೆಗೆ ಸಾಮ್ರಾಜ್ಯಶಾಹಿಗೆ ವಿರೋಧವಾಗಿರುವ; ಪ್ರಜಾಸತ್ತೆ ಮತ್ತು ಸಾಮಾಜಿಕ ನ್ಯಾಯಗಳಿಗೆ ಪರವಾಗಿರುವ ಎಲ್ಲಾ ಶಕ್ತಿಗಳನ್ನು ಪ್ರಗತಿಪರ ಎಂದು ಪರಿಗಣಿಸಬೇಕು. ಅವರೆಲ್ಲರನ್ನೂ ಐಕ್ಯ ಸಾಂಸ್ಕೃತಿಕ ಚಳುವಳಿಯ ಪರಿಧಿಯ ಒಳಗೆ ತರುವ ಸಾಧ್ಯತೆ ಇದೆ. ಆದರೆ ಇಂತಹ ಹಲವು ಪ್ರಗತಿಪರ ವ್ಯಕ್ತಿಗಳೂ ಶಕ್ತಿಗಳೂ ರಾಜಕೀಯ–ರಹಿತರಾಗಿರಲು ಬಯಸುತ್ತಾರೆ. ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳ ನಡುವೆ ಗೆರೆ ಎಳೆಯ ಬಯಸುತ್ತಾರೆ. ಅವರ ರಾಜಕೀಯಕರಣ ನಮ್ಮ ಮುಂದಿರುವ ದೊಡ್ಡ ಸವಾಲು.

ಭಾಷಾ ಗಡಿಯನ್ನು ದಾಟಿ ಎಲ್ಲರನ್ನೂ ತಲುಪುವ ಸಾಂಸ್ಥಿಕ ರಚನೆ

ಸಂಸ್ಕೃತಿ ಮತ್ತು ಭಾಷೆ ಇಂದಿನ ಸಮಾಜದಲ್ಲಿ ಹೇಗೆ ಪ್ರಧಾನ ಪಾತ್ರ ವಹಿಸುತ್ತದೆ ಎಂಬುದನ್ನು ವಿವರಿಸಿದರು. ಇಂದು ಮಾತಿನ



ಸಾಧನವನ್ನಷ್ಟೇ ಭಾಷೆ ಎನ್ನಲಾಗದು. ನೂರಾರು ಟಿವಿ ಚಾನೆಲ್‌ಗಳು, ರೇಡಿಯೋ, ಇಂಟರ್‌ನೆಟ್, ಎಲ್ಲವೂ ಭಾಷೆಯ ಸಾಧನಗಳೇ. ಅವೆಲ್ಲವೂ ಯಜಮಾನಿಕೆಯ ಸಿದ್ಧಾಂತವನ್ನು ನಮ್ಮ ಬಳಿಗೆ ಪ್ರವಾಹದಂತೆ ಹೊತ್ತು ತರುತ್ತವೆ. ಇಂದಿನ ಯುವಜನತೆ ಅವುಗಳನ್ನು ಯಾವುದೇ ಪ್ರತಿರೋಧ ಅಥವಾ ವಿಮರ್ಶೆ ಇಲ್ಲದೆ ಸ್ವೀಕರಿಸುತ್ತಾರೆ. ಈ ಕ್ಷೇತ್ರದಲ್ಲಿ ಪ್ರಗತಿಪರ ಚಳುವಳಿ ಇನ್ನಷ್ಟು ಸಕ್ರಿಯವಾಗಿ ಮಧ್ಯ ಪ್ರವೇಶಿಸಬೇಕಾದ ಅಗತ್ಯವಿದೆ.

ಸಾಮಾನ್ಯವಾಗಿ ರಾಷ್ಟ್ರೀಯತೆ ಭಾಷೆಯನ್ನು ಆಧರಿಸಿರುತ್ತದೆ. ಇತರ ದೇಶಗಳು ಏಕಭಾಷೆಯನ್ನು ಆಧರಿಸಿದ್ದರೆ ಭಾರತದಲ್ಲಿ ಬಹುಭಾಷೆ ಇದೆ. ಆಧುನಿಕ ಬಂಡವಾಳ ಶಾಹಿ ಮಾರುಕಟ್ಟೆ ಇಂಗ್ಲಿಷನ್ನು ಮುಂದಿಟ್ಟುಕೊಂಡು ಯಶಸ್ವಿಯಾಗಿಬಿಡುತ್ತದೆ. ಆದರೆ ಪ್ರಾದೇಶಿಕತೆಯನ್ನೇ ಕೇಂದ್ರೀಕರಿಸಿಕೊಂಡಿರುವ ಪ್ರಗತಿಪರ ಚಳುವಳಿ ಬಹುಭಾಷಾ ನೀತಿಯನ್ನು ಸರಿಯಾಗಿಯೇ ಅಂಗೀಕರಿಸಿವೆ. ಆದರೆ ಇದು ಪ್ರಗತಿಪರ ಚಳುವಳಿ ರಾಷ್ಟ್ರೀಯವಾಗಿ ಬೆಳೆಯಲು ಪ್ರಬಲ ಅಂಗೀಕಾರ್ಹತೆ ಪಡೆಯಲು, ಹಲವು ಪ್ರಾಂತೀಯ ಚಳುವಳಿಗಳು ಕನಿಷ್ಟ ಸಂವಹನ ಸಾಧಿಸಲು ತೊಡಕಾಗಿದೆ. ಆದ್ದರಿಂದ ಈ ಭಾಷಾ ಗಡಿಯನ್ನು ದಾಟಿ ಪ್ರಗತಿಪರರೆಲ್ಲರನ್ನೂ ತಲುಪುವಂತಹ ಸಾಂಸ್ಥಿಕ ರಚನೆಯನ್ನು ಪ್ರಗತಿಪರ ಚಳುವಳಿ ಸೃಷ್ಟಿಮಾಡಬೇಕಾಗಿದೆ ಎಂದು ಪ್ರೊ. ಐಜಾಜ್ ಹೇಳಿದರು. ಅದಕ್ಕಾಗಿ ಆಧುನಿಕ ತಂತ್ರಜ್ಞಾನವನ್ನು (ಪ್ರಮುಖವಾಗಿ ದೃಶ್ಯ ಮಾಧ್ಯಮವನ್ನೂ, ಇಂಟರ್‌ನೆಟ್‌ನಲ್ಲಿ ಯೂ ಟ್ಯೂಬ್ ವಿಡಿಯೋ ಮುಂತಾದ ಸಂಪರ್ಕ ಮಾಧ್ಯಮಗಳನ್ನೂ) ಸಮರ್ಥವಾಗಿ ಬಳಸಿಕೊಳ್ಳುವ ಬಗ್ಗೆಯೂ ಅವರು ವಿವರಿಸಿದರು.

'ಆಧುನಿಕೋತ್ತರವಾದ' ಪುಸ್ತಕ ಬಿಡುಗಡೆ

ಸ್ವಾಗತ ಸಮಿತಿಯ ಅಧ್ಯಕ್ಷರಾದ ಎರಿಕ್ ಒಜಾರಿಯೊ ಸ್ವಾಗತ ಭಾಷಣ ಮಾಡಿದರು. ಸಮುದಾಯ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಸುರೇಂದ್ರ ರಾವ್ ಸಮುದಾಯ ನಡೆದು ಬಂದ ಹಾದಿ ಮತ್ತು ಸಮ್ಮೇಳನದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಕ್ಕಳ ರಂಗಭೂಮಿ ತಜ್ಞರಾದ ಐ.ಕೆ.ಬೋಳುವಾರು ಹಲವು ಉದಾಹರಣೆಗಳೊಂದಿಗೆ ಮಕ್ಕಳ ರಂಗಭೂಮಿಯಲ್ಲಿ ತಮ್ಮ ಅನುಭವಗಳು ಮತ್ತು ಸಾಧ್ಯತೆಗಳ ಬಗ್ಗೆ ಮನ ಮುಟ್ಟುವ ಹಾಗೆ ಮಾತನಾಡಿದರು. ಅಧ್ಯಕ್ಷೀಯ ಭಾಷಣ ಮಾಡುತ್ತಾ ಸಮುದಾಯದ ರಾಜ್ಯ ಅಧ್ಯಕ್ಷ ಪ್ರೊ.ಆರ್.ಕೆ. ಹುಡಗಿ ಅವರು ಆಧುನಿಕೋತ್ತರವಾದದ ಮತ್ತು ಪ್ರಜಾಪ್ರಭುತ್ವಕ್ಕೆ ಹೊಸ ಸವಾಲುಗಳ ಬಗ್ಗೆ ಮಾತನಾಡಿದರು. ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಯಶವಂತ ಮರೋಳಿ ವಂದಿಸಿದರು. ಕಾರ್ಯದರ್ಶಿ ವಾಸುದೇವ ಉಚ್ಚಿಲ್, ಭಾಸ್ಕರ ನೆಲ್ಲಿತೀರ್ಥ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನೆಯ ನಂತರ ಪ್ರೊ. ಐಜಾಜ್ ಅಹ್ಮದ್ ಬರೆದಿರುವ ಕೃತಿಯ ಕನ್ನಡ ಅನುವಾದ 'ಆಧುನಿಕೋತ್ತರವಾದ–ನಿಮಗೆ ತಿಳಿದಿರಲಿ' ಪುಸ್ತಕವನ್ನು ಅವರೇ ಬಿಡುಗಡೆ ಮಾಡಿದರು. ಅನುವಾದಕರಾದ ಕೆ. ಪ್ರಕಾಶ್ ಪುಸ್ತಕ ಪರಿಚಯ ಮಾಡುತ್ತಾ ಕರ್ನಾಟಕದ ಸಂದರ್ಭದಲ್ಲಿ ಅದರ ಮಹತ್ವದ ಬಗೆಗೂ ಮಾತನಾಡಿದರು.

ಬಿಚ್ಚು ಮನಸ್ಸಿನ ಪ್ರಜಾಸತ್ತಾತ್ಮಕ ಚರ್ಚೆ

ಸಮ್ಮೇಳನದ ವಿವಿಧ ಕಲಾಪಗಳನ್ನು

ಪುಟ 14 ಕ್ಕೆ.

ಆರ್ಥಿಕ ಸರ್ವೇಕ್ಷಣೆ 2012–13

ಎರಡು ಭಾರತಗಳ ನಡುವಿನ ಕಂದರವನ್ನು ಹಿಗ್ಗಿಸುವ ನಿಲುವು

ಈ ಸರ್ವೇಕ್ಷಣೆಯಲ್ಲಿ ಆರ್ಥಿಕತೆ ನಿಧಾನಗೊಂಡಿದೆ ಎಂಬ ಸರಿಯಾದ ರೋಗಪತ್ತೆಯಂತೂ ಇದೆ. ಆದರೆ ನವ–ಉದಾರವಾದಿ ಸುಧಾರಣೆಗಳನ್ನು ಮುಂದುವರೆಸಲಿಕ್ಕಾಗಿ ಸರ್ವೇಕ್ಷಣೆ ಆಧಾರದಲ್ಲಿ ತಪ್ಪು ಔಷಧಿಗಳನ್ನು ಸೂಚಿಸಲಾಗಿದೆ– 'ಹೂಡಿಕೆ'ಗಳ ಮೇಲೆಯೇ ಅದರ ಗಮನ, 'ಬಳಕೆ' ಸಾಮರ್ಥ್ಯದ ಬಗ್ಗೆ ಉಪೇಕ್ಷೆ. ಹಣಕಾಸು ಕ್ರೋಢೀಕರಣದ ಅಗತ್ಯದ ಬಗ್ಗೆ ಮನವರಿಕೆ ಮಾಡಿಸಲು ಶ್ರಮಪಡುವ ಈ ಸರ್ವೆ, ದೊಡ್ಡ ಹಣಕಾಸು ಕೊರತೆಗಳನ್ನು ನಿರ್ಮಿಸುವ ಮೂಲವಾದ ಶ್ರೀಮಂತರ ತೆರಿಗೆ ರಿಯಾಯ್ತಿಗಳ ಮೇಲೆ ಗುರಿಯಿಡುವ ಬದಲು, ಬಡವರ ಅಲ್ಪ ಸಬ್ಸಿಡಿಗಳ ಮೇಲೆಯೇ ಅದರ ಗುರಿ. ಇದು ಆಂತರಿಕ ಬೇಡಿಕೆಯನ್ನು ಇನ್ನಷ್ಟು ಹಿಂಡಿ ಹಾಕಿ ನಮ್ಮ ಆರ್ಥಿಕವನ್ನು ಇನ್ನಷ್ಟು ನಿಧಾನಗೊಳಿಸುತ್ತದೆ.

ಸೀತಾರಾಂ ಯೆಚೂರಿ

ಎಂದಿನಂತೆ ಬಜೆಟ್ ಮಂಡನೆಯ ಮೊದಲು 'ಆರ್ಥಿಕ ಸರ್ವೆ 2012–13'ನ್ನು ಕೇಂದ್ರ ಸರಕಾರ ಸಂಸತ್ತಿನ ಮುಂದೆ ಪ್ರಸ್ತುತ ಪಡಿಸಿದೆ.


ಸುಮಾರು 300 ಪುಟಗಳು ಮತ್ತು ಆರ್ಥಿಕ ಮಾಹಿತಿಗಳ 178 ಪುಟಗಳನ್ನು ಹೊಂದಿರುವ ಈ ದಸ್ತಾವೇಜು ಜಿಡಿಪಿ ಬೆಳವಣಿಗೆ ದರ ಕುರಿತ ಸಿಎಸ್‌ಒ ಅಂದಾಜನ್ನೇ ಪುಷ್ಟೀಕರಿಸಿದೆ. ಸಿಎಸ್‌ಒ(ಕೇಂದ್ರೀಯ ಅಂಕೆ–ಸಂಖ್ಯೆಗಳ ಸಂಘಟನೆ) 2012–13 ರಲ್ಲಿ ಜಿಡಿಪಿ ಬೆಳವಣಿಗೆ ದರ 5ಶೇ. ಎಂದು ಅಂದಾಜು ಮಾಡಿತ್ತು. ಆದರೆ ಹಣಕಾಸು ಮಂತ್ರಿಗಳು ಮತ್ತು ಅವರ ಇಲಾಖೆ ಇದನ್ನು ಪ್ರಶ್ನಿಸಿದ್ದರು, ಇದು ಕಡಿಮೆ ಅಂದಾಜು, ಭಾರತೀಯ ಆರ್ಥಿಕ ಇದಕ್ಕಿಂತ ಹೆಚ್ಚಿನ ದರದಲ್ಲಿ ಬೆಳೆದಿದೆ ಎಂದಿದ್ದರು. ಬೆಳವಣಿಗೆ ದರ 2009–10ರಲ್ಲಿ 9.3 ಶೇ. ಇದ್ದದ್ದು 2011–12ರಲ್ಲಿ 6.2ಶೇ.ಕ್ಕೆ ಮತ್ತು 2012–13ರಲ್ಲಿ 5.0ಶೇ.ಕ್ಕೆ ಇಳಿದಿದೆ ಎಂದು ಈಗ ಈ ಸರ್ವೆಯೂ ಗಮನಿಸಿದೆ.

ಈ ನಿಧಾನಗತಿಗೆ ಕಾರಣಗಳನ್ನು ಗುರುತಿಸುತ್ತ 2008ರಲ್ಲಿ ಆರಂಭವಾದ ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಅನುಸರಿಸಿ ಬೇಡಿಕೆಗೆ ಒತ್ತಾಸೆ ನೀಡಲು ಒದಗಿಸಿದ ಉತ್ತೇಜನಾ ಪ್ಯಾಕೇಜುಗಳ ಪರಿಣಾಮ ಜಿಡಿಪಿ ಬೆಳವಣಿಗೆಯ ಮೇಲೆ ನಿಧಾನಗೊಂಡಿತು ಎಂದು ಅದು ಹೇಳಿದೆ. ಬೇಡಿಕೆಗೆ ನೀಡಿದ ಒತ್ತಾಸೆಯಿಂದಾಗಿ ಬಳಕೆ ಪ್ರಮಾಣ 2009–12ರ ನಡುವೆ ಸರಾಸರಿ ವಾರ್ಷಿಕ 8ಶೇ.ದರದಲ್ಲಿ ಏರಿತು. ಇದರ ಫಲಿತಾಂಶವಾಗಿ 'ಬಲವಾದ ಹಣದುಬ್ಬರ ಮತ್ತು ಒಂದು ಬಲಿಷ್ಟ ಹಣಕಾಸು ಸ್ಪಂದನೆ'(ರಿಝರ್ವ್ ಬ್ಯಾಂಕ್ ಸಾಲ ದರವನ್ನು ಹೆಚ್ಚಿಸಿದ್ದು) ಬಂದು ಬಳಕೆ ಬೇಡಿಕೆ ನಿಧಾನಗೊಳ್ಳುವಂತಾಯಿತು ಎಂದು ಸರ್ವೆ ಹೇಳುತ್ತದೆ. ಮುಂದುವರೆದು ಅದು, "2011–12ರಿಂದ ಆರಂಭಿಸಿ, ಹೂಡಿಕೆ ಅಡೆ–ತಡೆಗಳು ಮತ್ತು ಬಿಗಿ ಹಣಕಾಸು ಧೋರಣೆಯಿಂದಾಗಿ ಕಾರ್ಪೊರೇಟ್ ಮತ್ತು ಮೂಲರಚನೆ ಹೂಡಿಕೆಗಳು ನಿಧಾನಗೊಳ್ಳಲಾರಂಭಿಸಿದವು" ಎಂದು ಹೇಳುತ್ತದೆ.

ಆದಾಗ್ಯೂ ಸರ್ವೆ, ಒಟ್ಟಾರೆಯಾಗಿ ಆರ್ಥಿಕ "2013–14ರಲ್ಲಿ 6.1ಶೇ.ದಿಂದ 6.7ಶೇ. ದರದಲ್ಲಿ ಏರುವ ನಿರೀಕ್ಷೆಯಿದೆ" ಎಂಬ ಭ್ರಮೆಯನ್ನು ಪ್ರಸ್ತುತ ಪಡಿಸುತ್ತದೆ. ಇದನ್ನು ಸಾಧಿಸಬೇಕಾದರೆ ಹೂಡಿಕೆಗಳಿಗೆ ಇರುವ ಅಡೆ–ತಡೆಗಳನ್ನು ನಿವಾರಿಸಬೇಕು, ಹಣಕಾಸು ಧೋರಣೆಯನ್ನು ಸಡಿಲಗೊಳಿಸಬೇಕು ಎಂದು ಸಲಹೆ ಮಾಡುತ್ತದೆ. ಇದರಿಂದ ಉನ್ನತ ಬೆಳವಣಿಗೆಗೆ ಮತ್ತು ಉದ್ಯೋಗ ನಿರ್ಮಾಣಕ್ಕೆ ಅವಕಾಶವಾಗುತ್ತದೆ ಎಂದು ಅದು ಭಾವಿಸುತ್ತದೆ. ಆದರೆ, ಈ ಹಿಂದೆ ಈ ಅಂಕಣದಲ್ಲಿ ಹಲವು ಬಾರಿ ಹೇಳಿರುವಂತೆ, ಹೂಡಿಕೆಗೆಂದು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವುದರಿಂದ ಮಾತ್ರವೇ ಬೆಳವಣಿಗೆ ತಂತಾನೇ ಬರುವುದಿಲ್ಲ. ಇಂತಹ ಹೂಡಿಕೆಗಳಿಂದ ಉತ್ಪತ್ತಿಯಾದವುಗಳನ್ನು ಮಾರುಕಟ್ಟೆಯಲ್ಲಿ ಬಳಕೆಗೆ ಖರೀದಿಸಿದಾಗ ಮಾತ್ರವೇ ಬೆಳವಣಿಗೆ ನಡೆಯುತ್ತದೆ. ಇಂತಹ ಬಳಕೆ ಸಾಮರ್ಥ್ಯವೇ ಭಾರತೀಯ ಜನತೆಯ ನಡುವೆ ತೀವ್ರವಾಗಿ ಕುಗ್ಗಿದೆ ಎಂಬುದನ್ನು ಈ ಆರ್ಥಿಕ ಸರ್ವೇಕ್ಷಣೆಯೂ ಗಮನಿಸುತ್ತದೆ. ಆರ್ಥಿಕದಲ್ಲಿ ಅಂತಿಮ ಬಳಕೆ ವಾರ್ಷಿಕ ಸರಾಸರಿ 8ಶೇ.ದಿಂದ 2012–13ರಲ್ಲಿ 4.4ಶೇ.ದ ಆಸುಪಾಸಿಗೆ ಇಳಿದಿದೆ. ಇದನ್ನು ಹೆಚ್ಚಿಸದೆ, ಕೇವಲ ಹೂಡಿಕೆಗೆ ಹೆಚ್ಚಿನ ನಿಧಿಗಳನ್ನು ಲಭ್ಯಗೊಳಿಸುವುದರಿಂದೇನೂ ಬೆಳವಣಿಗೆ ಉಂಟಾಗದು.

'ಹೂಡಿಕೆ'ಯ ಮೇಲೇ ಗಮನ

ಆದರೆ ಈ ಸರ್ವೆ 'ಹೂಡಿಕೆ'ಯ ಅಂಶದ ಮೇಲೆಯೆ ಗಮನ ಕೇಂದ್ರೀಕರಿಸುತ್ತದೆ, 'ಬಳಕೆ'ಯ ಅಂಶವನ್ನು ಉಪೇಕ್ಷಿಸುತ್ತದೆ. ಇದು ನಮ್ಮ ವಿಶಾಲ ಜನಸಮೂಹಗಳಿಗೆ ಇನ್ನಷ್ಟು ಸಂಕಟಗಳನ್ನಷ್ಟೇ ತರಬಲ್ಲುದು. ಹೀಗೆ, 'ಅಡೆ–ತಡೆ'ಗಳನ್ನು ನಿವಾರಿಸಿ, ಹಣಕಾಸು ಧೋರಣೆಯನ್ನು ಸಡಿಲಗೊಳಿಸಿ ಹೂಡಿಕೆಗಳಿಗೆ ಒತ್ತಾಸೆ ನೀಡಲು, ವಿದೇಶಿ–ದೇಶೀ ಹೂಡಿಕೆಗಳಿಗೆ ಪ್ರೋತ್ಸಾಹಕಗಳನ್ನು ಕೊಡಬೇಕು ಎಂದು ಅದು ಸಲಹೆ ಮಾಡುತ್ತದೆ. ಬೆಳವಣಿಗೆ ದರ ಮತ್ತು ಹೂಡಿಕೆ ದರದ ನಡುವೆ ಬಲವಾದ ಸಹ–ಸಂಬಂಧ ಇದೆ ಎನ್ನುತ್ತ, ಹೂಡಿಕೆಯ ಪ್ರಮಾಣವನ್ನು ಹೆಚ್ಚಿಸಲು ಹೆಚ್ಚಿನ ನಿಧಿಗಳನ್ನು ಲಭ್ಯಗೊಳಿಸಿ ಭಾರತವನ್ನು ಮತ್ತೆ ಉನ್ನತ ಬೆಳವಣಿಗೆಯ ದಿಕ್ಪಥದಲ್ಲಿ ಇರಿಸಬಹುದು ಎಂಬ ತೀರ್ಮಾನಕ್ಕೆ ಈ ಆರ್ಥಿಕ ಸರ್ವೇಕ್ಷಣೆ ಬಂದಿರುವಂತೆ ಕಾಣುತ್ತದೆ.



ಇಲ್ಲಿ ನಮ್ಮ ಆರ್ಥಿಕ ನಿಧಾನಗೊಂಡಿದೆ ಎಂಬ ಸರಿಯಾದ ರೋಗಪತ್ತೆಯಂತೂ ಇದೆ. ಆದರೆ ಇದರ ಆಧಾರದಲ್ಲಿ ತಪ್ಪು ಔಷಧಿಗಳನ್ನು ಸೂಚಿಸಲಾಗಿದೆ– ನವ–ಉದಾರವಾದಿ ಸುಧಾರಣೆಗಳನ್ನು ಮುಂದುವರೆಸಲಿಕ್ಕಾಗಿ. ಬೇಡಿಕೆಯನ್ನೇರಿಸದೆ ಬೆಳವಣಿಗೆ ದರವನ್ನು ಉತ್ತೇಜಿಸಲು ಸಾಧ್ಯವಿಲ್ಲ. ಆಂತರಿಕ ಬೇಡಿಕೆಗಳನ್ನು ಹೆಚ್ಚಿಸದೆ, ಇನ್ನಷ್ಟು ನಿಧಿಗಳನ್ನು ಒದಗಿಸುವುದರಿಂದ ಅಥವ ವಿದೇಶಿ ಹೂಡಿಕೆಗೆ ಇನ್ನಷ್ಟು ದಾರಿಗಳನ್ನು ತೆರೆದು ಕೊಡುವುದರಿಂದ ಈ ಹಣವೆಲ್ಲ ಉತ್ಪಾದಕ ಹೂಡಿಕೆಗಳಾಗುವ ಬದಲು ಜೂಜುಕೋರ ಚಟುವಟಿಕೆಗಳತ್ತ ಹರಿದು ಹೋಗುತ್ತದೆ. ನಮ್ಮ ದೇಶದಲ್ಲಿ ರಿಯಲ್ ಎಸ್ಟೇಟಿನ ಮತ್ತು ಚಿನ್ನದ ವಿಪರೀತ ಬೆಲೆಗಳ ಅನುಭವವೇ ಇದಕ್ಕೆ ಸಾಕ್ಷಿ. ಶ್ರೀಮಂತರು ತಮ್ಮ ಹಣವನ್ನು ಇಂತಹ 'ಬೆಲೆಬಾಳುವ' ದಾರಿಗಳಲ್ಲಿ ಇಟ್ಟಿದ್ದಾರೆ. ಇವುಗಳಲ್ಲಿ ಕಲಾಕೃತಿಗಳು, ಬೆಲೆಬಾಳುವ ಲೋಹಗಳು ಮತ್ತು ಅವುಗಳಿಂದ ಮಾಡಿದ ಆಭರಣೆಗಳೂ ಸೇರಿವೆ ಎಂದು ಈ ಸರ್ವೆಯೇ ಹೇಳುತ್ತದೆ. ಪ್ರಸ್ತುತ ಬೆಲೆಗಳಲ್ಲಿ ಈ ಸ್ವರೂಪದ ಹೂಡಿಕೆಗಳಲ್ಲಿ 2007–15 ರ ನಡುವೆ 4.5ಪಟ್ಟು ಹೆಚ್ಚಳವಾಗಿದೆ. ಸ್ಥಿರಬೆಲೆಗಳಲ್ಲೂ ದೇಶದಲ್ಲಿನ ಒಟ್ಟು ಹೂಡಿಕೆಗಳಲ್ಲಿ ಇಂತಹ ಹೂಡಿಕೆಗಳ ಪ್ರಮಾಣ 2007–12ರ ಅವಧಿಯಲ್ಲಿ 2.9ಶೇ.ದಿಂದ 6.2ಶೇ.ಕ್ಕೆ ಏರಿದೆ ಎಂದು ಸರ್ವೆ ಹೇಳುತ್ತದೆ.

ಬೆಳವಣಿಗೆ ದರ ನಿಜಚಿತ್ರ ಕೊಡದು

ಹೀಗೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ಅನುತ್ಪಾದಕ ಹೂಡಿಕೆಗಳತ್ತ ತಿರುಗಿಸಲಾಗುತ್ತಿದ್ದರೂ, ಹೂಡಿಕೆಯನ್ನು ಪ್ರೋತ್ಸಾಹಿಸುವ ಸಂರಚನಾ ಸುಧಾರಣೆಗಳ ಬಗ್ಗೆ ಈ ಸರ್ವೆ ಮಾತಾಡುತ್ತದೆ. ಅಂದರೆ, ಇಲ್ಲಿ ಕಾಣುವ ಪ್ರಯತ್ನವೆಂದರೆ, ನಮ್ಮ ದೇಶದಲ್ಲಿ ಗರಿಷ್ಟ ಲಾಭ ಗಿಟ್ಟಿಸಲು ವಿದೇಶಿ ಬಂಡವಾಳಕ್ಕೆ, ಜತೆಗೆ ದೇಶೀ ಬಂಡವಾಳಕ್ಕೆ ಮತ್ತು ಶ್ರೀಮಂತರಿಗೆ ಹೆಚ್ಚಿನ ಅವಕಾಶ ಒದಗಿಸುವ ಒಂದು ಸುಧಾರಣಾ ಕಂತೆಗೆ ಚಾಲನೆ ನೀಡುವುದು. ಇದು ಎರಡು ಭಾರತಗಳ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಕೇವಲ ಬೆಳವಣಿಗೆ ದರಗಳು ಆರ್ಥಿಕತೆಯ ಅಥವ ಜನತೆಯ ಒಟ್ಟಾರೆ ಆರೋಗ್ಯದ ಚಿತ್ರಣ ಕೊಡುವುದಿಲ್ಲ, ಕೊಡಲಾರದು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಮಾನವ ಅಭಿವೃದ್ಧಿ ಸೂಚಕಗಳಲ್ಲಿ, ಭಾರತದಲ್ಲಿ ಸನ್ನಿವೇಶ ಇನ್ನಷ್ಟು ಹದಗೆಡುತ್ತಿರುವುದು ಕಾಣಬರುತ್ತಿದೆ. ಸರಕಾರದ ಈ ಆರ್ಥಿಕ ಸರ್ವೇಕ್ಷಣೆ 2011ರ ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ವರದಿಯನ್ನು ಉಲ್ಲೇಖಿಸುತ್ತದೆ. ಇದರ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 187 ದೇಶಗಳಲ್ಲಿ ಭಾರತ 134ನೇ ಸ್ಥಾನಕ್ಕಿಳಿದಿದೆ. ಪ್ರಮುಖ ಅಭಿವೃದ್ಧಿ ಸೂಚಕಗಳಲ್ಲಿ ಭಾರತ ನಮ್ಮ ನೆರೆ ದೇಶಗಳಾದ ಶ್ರೀಲಂಕ ಮತ್ತು ಬಾಂಗ್ಲಾ ದೇಶಕ್ಕಿಂತ ಹಿಂದಿದೆ. 'ಬ್ರಿಕ್ಸ್' ದೇಶಗಳಲ್ಲಿ ನಾವು ಕೊನೆಯಲ್ಲಿದ್ದೇವೆ. ಆರೋಗ್ಯ ಖರ್ಚಿನ ವಿಷಯದಲ್ಲಿಯೂ ಇಂತಹುದೇ ಸ್ಥಿತಿ. ಆರೋಗ್ಯದ ಮೇಲೆ ಸಾರ್ವಜನಿಕ ಖರ್ಚಿನ

ಪುಟ 14ಕ್ಕೆ

ಪ್ರಗತಿಯ ಮರೀಚಿಕೆ ತೋರುವ ಕೇಂದ್ರ ಬಜೆಟ್ 2013–14

ಹಸಿವನುಂಡ ಜನರ ಹೊಟ್ಟೆಯ ಮೇಲೆ ತಣ್ಣೀರ ಬಟ್ಟೆ

2013–14 ರ ಸಾಲಿನ ಕೇಂದ್ರ ಬಜೆಟ್ ಪ್ರಸ್ತುತ ಆರ್ಥಿಕ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಜನಸಾಮಾನ್ಯರ ಆತಂಕ ಸಂಕಷ್ಟಗಳಿಗೆ ಪರಿಹಾರ ತೋರುವುವಲ್ಲಿ ವಿಫಲವಾಗಿದೆ. ಆರ್ಥಿಕ ಸಮೀಕ್ಷೆಯು ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಅದರಲ್ಲೂ ಆಹಾರ ಧಾನ್ಯಗಳ ಬೆಲೆಗಳು ತೀವ್ರವಾಗಿ ಏರುತ್ತಿರುವುದನ್ನು, ದೇಶದಲ್ಲಿ ಉಳಿತಾಯ ಮತ್ತು ಹೂಡಿಕೆಯು ಕುಸಿಯುತ್ತಿರುವುದನ್ನು ಎತ್ತಿ ತೋರುತ್ತಿದೆ. ಅಲ್ಲದೇ ದೇಶವು ವಿದೇಶಿ ನಿಧಿಯ ಮೇಲೆ ಹೆಚ್ಚೆಚ್ಚು ಅವಲಂಬಿತವಾಗುತ್ತಿರುವುದನ್ನು ಹಾಗೂ ವಿತ್ತೀಯ ಕೊರತೆ ಎನ್ನುವ ಬಜೆಟ್ ಕೊರತೆ ತೀವ್ರಗೊಳ್ಳುತ್ತಿರುವುದನ್ನು ಸಹ ಎತ್ತಿತೋರಿಸಿದೆ. ದೇಶದಲ್ಲಿ ಕೆಲಸಕ್ಕಾಗಿ ಕಾಯುತ್ತಿರುವ ದುಡಿಯುವ ಜನಶಕ್ತಿಗೆ ಆದಾಯವನ್ನು ತರುವಂತಹ ಉದ್ಯೋಗದ ಅವಕಾಶಗಳನ್ನು ಒದಗಿಸಬೇಕಿದೆ. ಹಾಗಾಗಬೇಕಾದಲ್ಲಿ ಕೃಷಿರಂಗದಲ್ಲಿ, ಸಣ್ಣ ಉದ್ದಿಮೆಗಳ ಕ್ಷೇತ್ರದಲ್ಲಿ ಹಾಗು ಗ್ರಾಮೀಣ ಅಭಿವೃದ್ಧಿ ವಲಯದಲ್ಲಿ ಸರ್ಕಾರ ಸಾರ್ವಜನಿಕ ಹೂಡಿಕೆಯನ್ನು ಮಾಡಬೇಕಿದೆ. ಆದರೆ ಈ ಬಜೆಟ್‌ಗೆ ಉದಾರೀಕರಣದ ಚೌಕಟ್ಟನ್ನು ಮೀರಿ ಜನಹಿತವನ್ನು ನೋಡುವ ಕಣ್ಣೋಟ–ಪರಿಕಲ್ಪನೆಯೇ ಇಲ್ಲವಾಗಿದೆ ಮತ್ತು ಸಾರ್ವಜನಿಕ ವೆಚ್ಚ ಕಡಿತ ಮಾಡುವ ಮೂಲಕ ಬಜೆಟ್ ಕೊರತೆಯನ್ನು ಕಡಿಮೆ ಮಾಡುವ ಗೀಳಿಗೆ ಬಿದ್ದಿದೆ.

ಕಪೋಲ ಕಲ್ಪಿತ ಆದಾಯದ ಮೇಲೆ ಅವಲಂಬನೆ

ಆರ್ಥಿಕ ಬೆಳವಣಿಗೆಯ ದರವು ಕೆಳಮಟ್ಟದಲ್ಲೆ ಉಳಿದಿದ್ದರೂ ಬಜೆಟ್ ಅವಾಸ್ತವಿಕವಾದ ಪ್ರಮಾಣದ ಅಗಾಧ ಆದಾಯ ಸಂಗ್ರಹದ ಯೋಜನೆಯನ್ನು ಬಿಂಬಿಸುತ್ತಿದೆ ಮತ್ತು ಸಾರ್ವಜನಿಕ ವೆಚ್ಚದ ಸಲುವಾಗಿ ಈ ಕಪೋಲಕಲ್ಪಿತ ಆದಾಯದ ಮೇಲೆ ಅವಲಂಬಿತವಾಗಿದೆ. ಹಣಕಾಸು ಸಚಿವರು ತಮ್ಮ ಪರಿಷ್ಕೃತ ಅಂದಾಜಿನಂತೆ 5,20,925 ಕೋಟಿಗಳ ಮೊತ್ತದ ಬಜೆಟ್ ಕೊರತೆಯ ಬಗೆಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಶ್ರೀಮಂತ ವಿಭಾಗಗಳು ಮತ್ತು ಅನುಕೂಲಸ್ಥ ವಿಭಾಗಗಳಿಂದ ವಸೂಲಿ ಮಾಡದೇ ಬಿಟ್ಟ ಆದಾಯ ಕಳೆದ ಸಾಲಿನಲ್ಲಿ 5,73,630 ಕೋಟಿ ಇದೆ ಮತ್ತು ಅದು ಬಜೆಟ್ ಕೊರತೆಗಿಂತ ಕಡಿಮೆ ಮೊತ್ತ ಎಂಬುದರ ಬಗೆಗೆ ಮಾತನಾಡುತ್ತಿಲ್ಲ. ಮತ್ತು ಈ ಹಣಕಾಸು ಕೊರತೆ ಕೂಡ ಶ್ರೀಮಂತ ವಿಭಾಗಗಳಿಗೆ ನೀಡಲಾದ ಪ್ರೋತ್ಸಾಹಕ ಕೊಡುಗೆಗಳು ಮತ್ತು ರಿಯಾಯಿತಿ ವಿನಾಯಿತಿಗಳಿಂದಾಗಿ ಸೃಷ್ಟಿಯಾಗಿರುವಂಥದ್ದು. ಮತ್ತು ಇದರಿಂದ ಉಂಟಾದ ಕೊರತೆಯ ಭಾರದ ಗಂಟನ್ನು ಬಡಜನರ ಹೆಗಲ ಮೇಲಕ್ಕೇ ವರ್ಗಾಯಿಸಲಾಗಿದೆ ಎಂಬುದು ಸ್ಪಷ್ಟ 2012–13 ರ ಸಾಲಿನಲ್ಲಿ ಬಜೆಟ್‌ನಲ್ಲಿ ಯೋಜಿಸಿದ್ದುದಕ್ಕಿಂತ ಒಟ್ಟು ವೆಚ್ಚವು ಶೇ. 4 ರಷ್ಟು ಕಡಿಮೆಯಾಗಿದೆ. ಅಂದರೆ ಇದು ಸಾರ್ವಜನಿಕರಿಗಾಗಿ ಮಾಡಬೇಕಾಗಿದ್ದ ವೆಚ್ಚದಲ್ಲಿ ತೀವ್ರ ಕಡಿತ ಎಂಬುದನ್ನು ಗಮನಿಸಬೇಕಿದೆ. ಹಣಕಾಸು ಸಚಿವರು

ಜೆಟ್ ಹಣಕಾಸು ಕೊರತೆಯನ್ನು ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ ಶೇ. 4.8 ಕ್ಕೆ ಇಳಿಸುವ ಬಗೆಗೆ ಅದಮ್ಯ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ಮತ್ತು ಸಾರ್ವಜನಿಕ ವೆಚ್ಚದ ಪ್ರಮಾಣದಲ್ಲಿಯೂ ಹೆಚ್ಚಳವನ್ನು ಸೂಚಿಸುತ್ತಿದ್ದಾರೆ. ಆದರೆ ಈ ಯಾವುವು ವಾಸ್ತವವಾಗಿ ಈಡೇರುವಂತೆ ಕಾಣುತ್ತಿಲ್ಲ.

ಉಣ್ಣುವ–ಉಡುವ–ತೊಡುವುದರಲ್ಲಿ ಕಡಿತ

ತೀವ್ರ ಆತಂಕದ ಮತ್ತೊಂದು ವಿಷಯವಿದೆ. ಕಳೆದ ಮೂರು ವರ್ಷಗಳಲ್ಲಿ ದೇಶದ 'ಅನುಭೋಗ ವೆಚ್ಚ' ಅಂದರೆ ಒಟ್ಟು ಜನರ 'ಉಣ್ಣುವ–ಉಡುವ–ತೊಡುವ' ವೆಚ್ಚವು ಸರಾಸರಿ ಶೇ. 8 ರ ದರದಲ್ಲಿ ಏರಿಕೆಯಾಗಿತ್ತು. ಆದರೆ ಪ್ರಸಕ್ತ ವರ್ಷದಲ್ಲಿ ಈ ವೆಚ್ಚವು ಕೇವಲ ಶೇ. 4 ರ ದರದಲ್ಲಿ ಮಾತ್ರ ಏರಿದೆ. ಅಂದರೆ ಮೊದಲೇ ಸರಿಯಾಗಿ ತಿನ್ನಲು ತೊಡಲು ಶಕ್ತಿಯಲ್ಲಿದೆ ತತ್ವಾರ ಅನುಭವಿಸುತ್ತಿದ್ದ ಜನರ ಅನುಭೋಗ ಮತ್ತಷ್ಟು ಕಡಿಮೆಯಾಗಿದೆ. ಅಂದರೆ ಹಸಿವನ್ನುಂಡ ಜನತೆಯನ್ನು ಅವರು ತಮ್ಮ ಸೊಂಟದ ಬೆಲ್ಟನ್ನು ಮತ್ತಷ್ಟು ಬಿಗಿಮಾಡಿಕೊಂಡು ಬದುಕಬೇಕಾದ ಗತಿಗೆ ತಳ್ಳಲಾಗಿದೆ. ಇಷ್ಟೆಲ್ಲಾ ಆದರೂ ಕೂಡ ಹೆಚ್ಚುತ್ತಿರುವ ಹಣದುಬ್ಬರವನ್ನು ಅಂದರೆ ಬೆಲೆಗಳ ಏರಿಕೆಯನ್ನು ತಡೆಯಲು ಸರ್ಕಾರ ಯಾವ ಗಂಭೀರ ಪ್ರಯತ್ನವನ್ನೂ ಮಾಡಿಲ್ಲ. ಪರಿಷ್ಕೃತ ಅಂದಾಜಿನಂತೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಳೆದ ವರ್ಷದಲ್ಲಿ ಒಟ್ಟು ಸರ್ಕಾರದ ಸಹಾಯಧನ ನೀಡಿಕೆಯಲ್ಲಿ 26,571 ಕೋಟಿಗಳಷ್ಟು ಕಡಿತವಾಗಿದೆ. ಬಾರಿ ಬೊಬ್ಬೆ ಹೊಡೆಯಲಾಗುತ್ತಿರುವ 'ಆಹಾರ ಭದ್ರತಾ ಕ್ರಮ'ಗಳ ಮೂಲಕ ಸಹಾಯಧನದ ಏರಿಕೆಯಾಗಿರುವುದು ಅತ್ಯಂತ ನಿಕೃಷ್ಟ ಪ್ರಮಾಣವಷ್ಟೆ. ಹಣಕಾಸು ಸಚಿವರು ಇದಕ್ಕಾಗಿ ಕೇವಲ 10 ಸಾವಿರ ಕೋಟಿಗಳನ್ನು ಹೆಚ್ಚುವರಿಯಾಗಿ ನೀಡುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ. ಆದರೆ ಇತ್ತೀಚಿನ ಪರಿಷ್ಕೃತ ಅಂದಾಜಿನಂತೆ 2012–13 ರ ವರ್ಷದ ಆಹಾರ ಸಬ್ಸಿಡಿಯಲ್ಲಿ ಸರ್ಕಾರ 5 ಸಾವಿರ ಕೋಟಿ ರೂಪಾಯಿಗಳಷ್ಟು ಕಡಿಮೆ ವೆಚ್ಚ ಮಾಡಿದೆ. ಹೀಗಾಗಿ ನಿಜವಾದ ಅರ್ಥದಲ್ಲಿ ಸರ್ಕಾರ ಕೇವಲ 5 ಸಾವಿರ ಕೋಟಿಗಳ ಹೆಚ್ಚಳವನ್ನಷ್ಟೆ ಮಾಡಿದೆ.

ತೀವ್ರ ಸಬ್ಸೀಡಿ ಕಡಿತ

ಪರಿಷ್ಕೃತ ಅಂದಾಜಿನಂತೆ ಹಿಂದಿನ ವರ್ಷ ಕೊಡಲಾಗಿದ್ದ ಪೆಟ್ರೋಲಿಯಂ ಉತ್ಪನ್ನಗಳ ಸಬ್ಸೀಡಿಯಲ್ಲಿ ಈ ವರ್ಷ 30,000 ಕೋಟಿಗಳಷ್ಟು ತೀವ್ರವಾದ ಅಗಾಧವಾದ ಕಡಿತವಾಗಿದೆ. ಬೆಲೆ ಏರಿಕೆ ಮತ್ತು ಹಣದುಬ್ಬರದ ರೂಪದಲ್ಲಿ ಇದು ಜನಗಳ ಜೀವ ಹಿಂಡುವಂತಹ ಪರಿಣಾಮವನ್ನು ಬೀರುತ್ತಿದೆ. ಆರ್ಥಿಕ ಹಿಂಜರಿತದಿಂದಾಗಿ ನಿರುದ್ಯೋಗದಲ್ಲಿ ತೀವ್ರ ಏರಿಕೆಯಾಗಿದ್ದರೂ ಕೂಡ ಮಹಾತ್ಮ ಗಾಂಧೀ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕಳೆದ ವರ್ಷಕ್ಕಿಂತ ಈ ವರ್ಷ ಯಾವುದೇ ಹೆಚ್ಚಳವನ್ನು ಮಾಡಿಲ್ಲ. ಮತ್ತೊಂದು ಕಡೆ ಸರ್ಕಾರ ಸಾರ್ವಜನಿಕ ಉದ್ದಿಮೆಗಳಿಂದ 50,000 ಕೋಟಿಗಳಷ್ಟು ಮೊತ್ತದಷ್ಟು ಬಂಡವಾಳವನ್ನು ಹಿಂದೆ ತೆಗೆಯಲು ಯೋಜಿಸಿದೆ.

ಶಿಕ್ಷಣ, ಆರೋಗ್ಯ ಕ್ಷೇತ್ರ ಮುಂತಾದ ಸಾಮಾಜಿಕ ವಲಯದಲ್ಲಿ ಬಜೆಟ್ ಸೂಚನೆಗಳಿಗೂ ನಿಜವಾದ ಅಗತ್ಯಕ್ಕೂ ಅಗಾಧವಾದ ಅಂತರವಿದೆ. ಜಿಡಿಪಿಯ ಲೆಕ್ಕದಲ್ಲಿ ನೋಡಿದಲ್ಲಿ ಆರೋಗ್ಯಕ್ಕೆ ಕೊಟ್ಟಿರುವ ಹಣ ಕಳೆದ ವರ್ಷಕ್ಕಿಂತ ಕಡಿಮೆಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿಯೂ ಹಾಗೆಯೇ. ಜಿಡಿಪಿ ಲೆಕ್ಕದಲ್ಲಿ ಶಿಕ್ಷಣಕ್ಕೆ ಹಿಂದಿನ ವರ್ಷ ಕೊಟ್ಟಿದ್ದಕ್ಕಿಂತ ಕಳೆದ ವರ್ಷ ಅಂದರೆ ಈಗ ಮುಗಿದ ವರ್ಷದಲ್ಲಿ ವಾಸ್ತವವಾಗಿ ಕೊಟ್ಟ ಹಣದಲ್ಲಿ ಕಡಿತವಾಗಿದೆ. ಗ್ರಾಮೀಣಾಭಿವೃದ್ಧಿಯ ಪ್ರಶ್ನೆಯಲ್ಲಿಯೂ ಇದೇ ರೀತಿಯ ಕಡಿತವಾಗಿದೆ.

ದಲಿತ ವಿರೋಧಿ ವಂಚನೆ

ಯೋಜಿತ ವೆಚ್ಚದಲ್ಲಿ ಬುಡಕಟ್ಟು ಜನರ ಉಪಯೋಜನೆಯ ವಿಷಯದಲ್ಲಿ ಸಂವಿಧಾನಬದ್ಧವಾಗಿ ಕೊಡಬೇಕಾದುದಕ್ಕಿಂತ ಸರಿ ಸುಮಾರು 20,900 ಕೋಟಿಗಳಷ್ಟು ಹಣಕಾಸು ಕಡಿಮೆ ನೀಡಲಾಗಿದೆ. ಪರಿಶಿಷ್ಟ ಜಾತಿ(ಎಸ್.ಟಿ.)ಜನರ ವಿಶೇಷ ಯೋಜನೆಗೆ ನೀಡಿರುವ ಹಣ 47,000 ಕೋಟಿ ಇದ್ದು, ಅದು ಸಂವಿಧಾನಬದ್ಧವಾಗಿ ನೀಡಬೇಕಾದುದಕ್ಕಿಂತ ಸುಮಾರು ಅರ್ಧದಷ್ಟು ಮಾತ್ರ ಇದೆ. ಆದ್ದರಿಂದ ಜನತೆಯ ತುರ್ತು ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಯಿಂದ ಈ ಬಜೆಟ್ ನೀಡುತ್ತಿರುವುದು ಏನೇನೂ ಸಾಲದಾಗಿದೆ. ಆದರೆ ಬಜೆಟ್ ಇದೇ ಸಮಯದಲ್ಲಿ ಶ್ರೀಮಂತ ವಿಭಾಗಗಳಿಗೆ, ಬಂಡವಾಳಗಾರರಿಗೆ ಬಾರಿ ಕೊಡುಗೆಗಳನ್ನು ಬಜೆಟ್ ನೀಡುತ್ತಿದೆ. ಮತ್ತು ಸಾರ್ವಜನಿಕ ವೆಚ್ಚವನ್ನು ಕಡೆಗಣಿಸುವ ಘೋರ ಪಾತಕವು ಈ ಬಜೆಟ್‌ನಲ್ಲಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದೃಷ್ಟಿಯಲ್ಲಿ ಈ ಬಜೆಟ್ ಒಂದು ಬಡವರ ವಿರೋಧಿ ಬಜೆಟ್ ಆಗಿದೆ. ಆರ್ಥಿಕತೆಯ ಬೆಳವಣಿಗೆ ಕುಂಠಿತಗೊಂಡು ನಿರುದ್ಯೋಗ ಮತ್ತು ಹಣದುಬ್ಬರ ಹೆಚ್ಚಿರುವ ಸಂದರ್ಭದಲ್ಲಿ ದೇಶದ ಆರ್ಥಿಕತೆಗೆ ಚೇತರಿಕೆ ನೀಡುವಲ್ಲಿ ಈ ಬಜೆಟ್ ಅಸಮರ್ಥವಾಗಿದೆ. ಈ ಬಜೆಟ್‌ನಲ್ಲಿ ಜನವಿರೋಧಿ ಅಂಶಗಳನ್ನು ತೀವ್ರವಾಗಿ ಪ್ರತಿಭಟಿಸುವ ಮತ್ತು ಹಿಮ್ಮೆಟ್ಟಿಸುವ ಗುರುತರ ಹೊಣೆಗಾರಿಕೆ ಜನರ ಹೆ ಮೇಲಿದೆ.



ಕೃಪೆ : ದಿ ಹಿಂದು

ಹೆಜ್ಜೆಹೆಜ್ಜೆಗಳಲ್ಲಿಯೂ ವಿಜಯದ ಗೆಜ್ಜೆನಾದ

ಎಸ್.ವೈ.ಗುರುಶಾಂತ್

ತ್ರಿಪುರಾದ ಈ ನೆಲದ ಮೇಲೆ ಕಾಲೂರಿ, ಕಣ್ಣು ಹಾಯಿಸಿದಾಗ ಇನ್ನೊಂದು ಚುನಾವಣೆ ನಡೆದಿತ್ತೇ ಎನ್ನುವ ಅನಿಸಿಕೆ ನನ್ನಲ್ಲಿ ಮೂಡಿತು. ಯಾಕೆಂದರೆ ಇದೇ ಫೆಬ್ರವರಿ 14ರಂದು ಭರ್ಜರಿ ಮತದಾನವಾಗಿದೆ.ಯಾರಾದರೂ ಹೀಗೂ ಉಂಟೇ ಎನ್ನುವಂತಹ ಅದೂ 94 ಶೇಕಡಾ ಫಲಿತಾಂಶವಿನ್ನೂ ಬರಬೇಕಿತ್ತು. ಚುನಾವಣೆ, ಅದರ ಪ್ರಚಾರ ಎಂದರೆ ಅದೊಂದು ರಾಜಕೀಯ ಹಬ್ಬ, ನೀವು ನೋಡಲೇಬೇಕು ಬಂದು ಹೋಗಿ ಎಂಬ ಆಹ್ವಾನವಿತ್ತು. ಆದರೀಗ ನೋಡಿದರೆ ಎಲ್ಲೂ ಅಂತಹ ಕುರುಹೇ ಇಲ್ಲವಲ್ಲ ಎಂಬ ಸಹಜ ಹುಡುಕಾಟ : ಈ ಬಳಿಕ ತಿಳಿದ ಸಂಗತಿಯೆಂದರೆ ಕೇಂದ್ರದ ಚುನಾವಣಾ ಆಯೋಗ, ಅದರ ಅಧಿಕಾರಿಗಳು ಧ್ವಜ, ಬ್ಯಾನರ್, ಭಿತ್ತಿಪತ್ರ ಎಲ್ಲವನ್ನೂ ಮತದಾನದ ಹಿಂದೆಯೇ ಪೂರ್ಣವಾಗಿ ತೆಗೆಸಿ ಬಿಟ್ಟರು. ಆದ್ದರಿಂದಲೇ ತ್ರಿಪುರಾ ತಣ್ಣಗೆ ಮಲಗಿದಂತೆ ಕಂಡಿದ್ದು.

ಆದರೆ ಎಲ್ಲರಲ್ಲೂ ಫಲಿತಾಂಶ ತಿಳಿಯುವ ಕಾತುರ ಎಚ್ಚರವಾಗಿಯೂ ಇತ್ತು. ಮತ ಎಣಿಕೆಯ ದಿನ ಫೆಬ್ರವರಿ 27ರಂದು ಸಂಜೆ ದಕ್ಷಿಣ ತ್ರಿಪುರಾದ ಜಿಲ್ಲೆಯ ಪಕ್ಷದ ಕಚೇರಿಯಲ್ಲಿ ಕುಳಿತಾಗ ಅಲ್ಲಿ ನಾಳಿನ ಮತ ಎಣಿಕೆಯ ಪೂರ್ಣ ಸಿದ್ಧತೆಗಳನ್ನು ಕಾರ್ಯದರ್ಶಿಯವರು ವಿವರಿಸಿದರು. ಹಾಗೇ "ನಾವು ಗೆದ್ದೇ ಗೆಲ್ಲುತ್ತೇವೆ. ಜನತೆಯ ಸ್ಪಂದನ 6 ವಾರ ಆದರೂ...". ಆ ಗೆಲ್ಲುವ ವಿಶ್ವಾಸ ಇರುವಾಗಲೇ ಜನಾದೇಶದ ಬಗ್ಗೆ ಆತಂಕ! ಇದೇ ಅಲ್ಲವೇ ಜನತೆಯ ತೀರ್ಪಿಗೆ ಪ್ರಜಾ ತಂತ್ರದಲ್ಲಿ ಅತೀ ಮಹತ್ವವಿರುವುದು. ಎಲ್ಲರೂ ತಲೆ ಬಾಗಬೇಕಿರುವುದು. ಫೆಬ್ರವರಿ 28ರ ಬೆಳಗು ಹರಿಯುತ್ತಿದ್ದಂತೆಯೇ ಮತದಾನದ ಕೇಂದ್ರದತ್ತ ಎಲ್ಲರ, ಎಣಿಕೆಯ ಮೇಲೆ ನೆಟ್ಟ ಚಿತ್ತ. ಸಮಯ ಏರುತ್ತಿರುವಂತೆ ನೆರೆದ ಜನರ ಸಂಖ್ಯೆಯೂ ಏರುಗುತಿಯೇ, ಅದೂ ನೋಡಬೇಕು, ಒಂದೊಂದು ಸುತ್ತಿನ ಮತ ಎಣಿಕೆ ಫಲಿತಾಂಶ ಹೊರ ಬಂದಾಗ ಘೋಷಣೆ ಕೂಗುವುದೇನೂ! ಕುಣಿಯುವುದೇನು? ಇದು ಒಂದು ಪಕ್ಷದ್ದಲ್ಲ, ಎಲ್ಲರಲ್ಲೂ ಅದೇ ಗತಿ, ಅದೇ ವೇಗ.

ನಾನಿದ್ದ ಬೀರಬಮ್ ಪ್ರದೇಶದಲ್ಲಿ ಎರಡು ಶಾಸಕರನ್ನೂ ಚುನಾಯಿಸಬೇಕಿತ್ತು. ಸಿ.ಪಿ.ಐ.(ಎಂ) ಅಲ್ಲಿ ಸ್ಪರ್ಧಿಸಿತ್ತು. ಪ್ರತಿ ಸ್ಪರ್ಧಿ ಕಾಂಗ್ರೆಸ್. ಪ್ರತಿ ಸುತ್ತಿನ ಎಣಿಕೆಯಾದಾಗಲೂ ಸಿ.ಪಿ.ಐ.(ಎಂ) ಮುಂದೆಯೇ. ಅದೂ ಅಂತಿಮ ಸುತ್ತಿನ ಪ್ರಕಟಣೆಯಾದಾಗ ಅತ್ಯಂತ ಗಣನೀಯ ಮತಗಳ ಅಂತರ ಪಡೆದು ಇಬ್ಬರೂ ಅಭ್ಯರ್ಥಿಗಳು ಸಚಿವ ಕಾಂ॥ ಜಿತೇಂದ್ರ ಚೌಧುರಿ, (ಮನು ಎಸ್.ಟಿ. ಕ್ಷೇತ್ರದಿಂದ ಇನ್ನೊಬ್ಬ ಸಂಗಾತಿ ರೀತಕ್ (ಮಹಿಳೆ) ಗೆದ್ದಿದ್ದರು.

ಕಾಂಗ್ರೆಸ್ ಎರಡೂ ಕಡೆ ಸೋತಿತ್ತು. ಜಿತೇಂದ್ರ ಚೌಧುರಿ ಸ್ಪರ್ಧಿಸಿದ್ದ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹೇಳಿದ್ದು, ಫಲಿತಾಂಶ ಹೊರಬರುವುದರೊಳಗೆ ಒಂದು ಅಂಬುಲೆನ್ಸ್ ತಂದಿರಿಸಿ, ಅದು ಸೀದಾ ಮಂತ್ರಿಯನ್ನು ಆಸ್ಪತ್ರೆಗೆ ಕೊಂಡೊಯ್ಯಬೇಕಾಗುತ್ತದೆ"!. ಇದನ್ನು ಅಲ್ಲಿನ ಹಿರಿಯರೊಬ್ಬರು ನನಗೆ ನೆನಪಿಸಿ



ಹೇಳಿದರು. 'ಹೌದು! ಈಗ ತಕ್ಷಣವೇ ಅಂಬುಲೆನ್ಸ್ ಬೇಕು. ಆದರೆ ಕೊಂಡೊಯ್ಯುವುದು ಕಾಂ॥ ಚೌಧುರಿಯನ್ನಲ್ಲ. ಕಾಂಗ್ರೆಸ್ ಅಭ್ಯರ್ಥಿಯನ್ನ". ಇಂತಹ ರಾಜಕೀಯ



ಹೋರಾಟ ಎಲ್ಲೆಡೆಗಳಲ್ಲಿ ನಡೆದಿರುವಾಗ, ಅದನ್ನೂ ಎದುರಿಸಿ ಗೆದ್ದಾಗ, ಪ್ರತಿಕ್ರಿಯೆ ಹೇಗಿರಬೇಕು! ಅದೂ ಹಾಗೇ, ಅದಕ್ಕೊಪ್ಪುವ, ಅದೇ ಶಕ್ತಿಯ ಪ್ರತಿಕ್ರಿಯೆ ರಾಜ್ಯದ ಎಲ್ಲೆಡೆಗಳಲ್ಲಿಯೂ ಕಂಡಿತು. ಜನ ಬಾವುಟಗಳನ್ನಿಡಿದು ಬೀದಿಗಿಳಿದರು. ಕೆಲವರು ವಾದ್ಯಗಳನ್ನೂ ಹಿಡಿದು, ನುಡಿಸತೊಡಗಿದರು. ಆ ಸಂಗೀತಕ್ಕೆ ಲಯಬದ್ಧವಾಗಿ ಕುಣಿತ-ನೃತ್ಯ ಕೆಂಪು ಬಣ್ಣದ ಎರಚಾಟ, ಘೋಷಣೆಗಳೋ, ಘೋಷಣೆಗಳೋ, ಹೀಗೆ ರಾಜ್ಯದ ಎಲ್ಲೆಡೆ ಸಾಗಿತ್ತು ವಿಜಯದ ಮೆರವಣಿಗೆ.

ಒಂದು ವಿಶೇಷವೆಂದರೆ ಮತದಾನದ ದಿನ, ಮತ ಎಣಿಕೆಯಂದು ಇಡೀ ಊರು-ನಗರವೇ ಬಂದ್ ಆದಂತೆ ಸ್ತಬ್ಧ, ಅಂಗಡಿ-ಮುಂಗಟ್ಟುಗಳು ಮುಚ್ಚಿ ಜನ ಚುನಾವಣೆ ಹಬ್ಬದಲ್ಲಿ ಭಾಗಿಯಾಗಿದ್ದರು.

ಫಲಿತಾಂಶ ಹೊರಬಂದಾಗ ಎಡರಂಗ ಒಟ್ಟು 50 ಸ್ಥಾನ ಗಳಿಸಿತ್ತು. ಹಿಂದಿಗಿಂತ ಒಂದು ಸ್ಥಾನ ಅಧಿಕ ಮತದ ಪ್ರಮಾಣವೂ ಹೆಚ್ಚು. ಕಾಂಗ್ರೆಸ್ 10 ಸ್ಥಾನ ಎಡರಂಗವನ್ನೂ ಕಾಂಗ್ರೆಸ್ ಕೂಡ ಸ್ಥಾಪಿತ ಹಿತಾಶಕ್ತಿಗಳ ದೂರವಿರಿಸಬೇಕೆಂದರು. ಆದರೆ ಜನ ಮತ್ತಷ್ಟು ಬಲನೀಡಿ ಅಧಿಕಾರದಲ್ಲಿ ಕೂರಿಸಿದರು.

ಈ ಮೂಲಕ ಎಡರಂಗದ ನೇತೃತ್ವವನ್ನು ಜನತೆ ಅನುಮೋದಿಸಿದರು. ಇದು ನಿಜಕ್ಕೂ ಐತಿಹಾಸಿಕ ವಿಜಯ. ನಿರಂತರ ಐದನೆಯ ಬಾರಿಗೆ ಅಧಿಕಾರ ಸ್ವೀಕಾರ. ಒಟ್ಟು ಎಡರಂಗದ್ದು 7ನೇ ಬಾರಿ.

'ಈ ಗೆಲುವು ಇನ್ನಷ್ಟು ಹೆಚ್ಚಿನ ಹೊಣೆ ತಂದಿದೆ. ಜನತೆಯ ನಿರೀಕ್ಷೆ ಈಡೇರಿಸಲು ನಾವು ಅಹೋರಾತ್ರ ಶ್ರಮಿಸುತ್ತೇವೆ. ಇರುವ ಸಂಪನ್ಮೂಲಗಳ ಮಿತಿಯಲ್ಲೂ ಸಾಧಿಸುತ್ತೇವೆ. ಹೆಚ್ಚಿನ ಸಂಪನ್ಮೂಲಕ್ಕೆ ಕೇಂದ್ರದೊಂದಿಗೆ ಹೋರಾಡುತ್ತೇವೆ. ನಮ್ಮದು ಬಡಜನರ ಶ್ರಮಿಕರ, ಸಾಮಾನ್ಯರ ಪರವಾದ ಅಭಿವೃದ್ಧಿ, ವಿಶ್ವಾಸ ವಿರಿಸಿದ, ಬಲ ತುಂಬಿದ ಎಲ್ಲರಿಗೂ ಹೃದಯಪೂರ್ವಕ ಅಭಿನಂದನೆಗಳು, ಹೀಗೆ ಎಂದಿನಂತೆ ಹಂಬಲ, ವಿನಯ, ಆತ್ಮವಿಶ್ವಾಸದಿಂದ ಹೇಳಿದ್ದು ಮುಖ್ಯಮಂತ್ರಿ, ಪಿ.ಬಿ.ಸದಸ್ಯ ಕಾಂ. ಮಾಣಿಕ್ ಸರ್ಕಾರ್ ಹಾಗೂ ಪಕ್ಷದ ರಾಜ್ಯಕಾರ್ಯದರ್ಶಿ ಕಾಂ। ಬಿಜಂಧರ್‌ರವರು.

ಈಗ ಎಲ್ಲೆಡೆಗಳಲ್ಲಿಯೂ ಜನರಿಗೆ ಕೃತಜ್ಞತೆ ಸಲ್ಲಿಸುವ ಸಭೆಗಳಾಗುತ್ತಿದೆ. ಬಹುತೇಕ 4 ರಂದು ಪ್ರಮಾಣ ವಚನ. ಅಲ್ಲಿಯವರೆಗೂ ಎಲ್ಲೆಲ್ಲೂ ವಿಜಯೋತ್ಸವ.



ಎಡ ಪಂಥವೇ ದಾರಿ

ಆರು ದಶಕಗಳ ಕಾಲ ಆಳಿರುವ ಪಕ್ಷ
ಹಲವರಿಗೆ ಇದುವರೆಗೆ ಬೇಡಿಸಿದೆ ಭಿಕ್ಷೆ
ನೊಂದವರ ಕಿವಿ ಮಾತು ಹೇಳುವನು ಕೇಳಿ?
ಎಡ ಪಂಥ ಸಂಘಟನೆ ಮಾಡೋಣ ಏಳಿ.
– ವಿಡಂಬಾರಿ

ಸರಕಾರೀ ವರದಿಯ ಪ್ರಕಾರವೂ ಉದ್ಯೋಗ ರಹಿತ ಬೆಳವಣಿಗೆ

ಯೋಜನಾ ಆಯೋಗದ ಉಪಾಧ್ಯಕ್ಷರು ಸರಕಾರೀ ಸಂಸ್ಥೆ ಸಿಎಸ್‌ಒ ತಪ್ಪು ಲೆಕ್ಕಾಚಾರ ಮಾಡಿರಬಹುದು, ಸರಕಾರದ ನವ-ಉದಾರವಾದಿ ಧೋರಣೆಗಳದೇನೂ ತಪ್ಪಿಲ್ಲ ಎಂದು ಪರೋಕ್ಷವಾಗಿ ಹೇಳುತ್ತಿರುವಾಗಲೇ ಅದೇ ಸರಕಾರದ ಇನ್ನೊಂದು ಸಂಸ್ಥೆ ಜಿಡಿಪಿ ಬೆಳವಣಿಗೆ 8-9ಶೇ. ಇರುವಾಗಲೂ ಅದು ಜನತೆಗೆ ಹೆಚ್ಚಿನ ಉದ್ಯೋಗಗಳನ್ನೇನೂ ಸೃಷ್ಟಿಸಿಲ್ಲ ಎಂದು ಹೇಳಿದೆ. ಅನ್ವಯಿಕ ಮಾನವಶಕ್ತಿ ಸಂಶೋಧನಾ ಸಂಸ್ಥೆ(ಐಎಎಂಆರ್) ಸ್ವತಃ ಯೋಜನಾ ಆಯೋಗದ ಅಡಿಯಿರುವ ಸಂಸ್ಥೆ, ಅದರ 'ಚಿಂತಕ ಚಾವಡಿ' ಎನಿಸಿಕೊಂಡಿರುವ ಸಂಸ್ಥೆ. ಅದರ ಲೆಕ್ಕಾಚಾರವೂ ತಪ್ಪು ಎಂದು ಅದರ 'ಬಾಸ್' ಹೇಳುತ್ತಾರೋ ಗೊತ್ತಿಲ್ಲ.

"ಉದ್ಯೋಗಹೀನತೆ ಮತ್ತು ಅನೌಪಚಾರಿಕೀಕರಣ: ಭಾರತದಲ್ಲಿ ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆಯ ಸವಾಲುಗಳು" ಎಂಬುದು ಈ ಸಂಸ್ಥೆ ಇತ್ತೀಚೆಗೆ ಪ್ರಕಟಿಸಿರುವ ಒಂದು ಸಂಶೋಧನಾ ಪ್ರಬಂಧದ ಶಿರೋನಾಮೆ. ಯುಪಿಎ ಆಳ್ವಿಕೆಯಲ್ಲಿ ಭಾರತ ಉದ್ಯೋಗಹೀನ ಬೆಳವಣಿಗೆಯನ್ನು ಕಂಡಿದೆಯಷ್ಟೇ ಅಲ್ಲ, ಕೋಟಿಗಟ್ಟಲೆ ಮಂದಿ ಯಾವುದೇ ಸಾಮಾಜಿಕ ಭದ್ರತೆಯಿಲ್ಲದೆ ಕ್ಯಾಶುವಲ್ ದುಡಿಮೆಗಾರರ ಮಟ್ಟಕ್ಕೆ ನೂಕಲ್ಪಟ್ಟಿದ್ದಾರೆ ಎಂಬುದು ಈ ಸಂಶೋಧನೆಯ ಸಾರಾಂಶ.

ಸಾಮೂಹಿಕ ಸಂಘಟನೆಗಳಲ್ಲಿ ದುಡಿಮೆಗಾರರ ನಡುವೆ ಕೆಲಸ ಮಾಡುವವರಿಗೆ, ಎಡಪಂಥೀಯರಿಗೆ ಇದೇನು 'ಸಂಶೋಧನೆ'ಯೆನಿಸುವುದಿಲ್ಲ, ಏಕೆಂದರೆ, ಅವರು ಈ ಅಂಶದತ್ತ ಬಹಳ ಹಿಂದೆಯೇ ಗಮನ ಸೆಳೆದಿದ್ದಾರೆ. ಈಗ ಅದು ಯಾರಿಂದಲೂ ಮುಚ್ಚಿಡಲಾಗದಂತಹ ವಾಸ್ತವವಾಗುತ್ತಿದೆ, ಅದನ್ನು ಆಳುವ ವರ್ಗಗಳ ಕೆಲವು 'ಚಿಂತಕ'ರಾದರೂ ಗಮನಿಸಿದ್ದಾರೆ ಎಂಬುದಷ್ಟೆ ಇಲ್ಲಿ ಮಹತ್ವದ ಸಂಗತಿ. 2005-10 ರ ಅವಧಿಯಲ್ಲಿ 1.5 ಕೋಟಿ ದುಡಿಮೆಗಾರರು ಕೃಷಿ ಕ್ಷೇತ್ರದಿಂದ ಕೈಗಾರಿಕಾ ಮತ್ತು ಸೇವಾವಲಯಕ್ಕೆ ಸ್ಥಳಾಂತರ ಹೊಂದಿದ್ದಾರೆ, ಅಂದರೆ ಬೇಸಾಯದಲ್ಲಿ ಬದುಕು ಕಟ್ಟಿಕೊಳ್ಳಲಾರದೆ ನಗರಗಳಿಗೆ ವಲಸೆ ಹೋಗಿದ್ದಾರೆ. ಅತ್ತ ಮೂಲರಚನೆ ವಲಯದಲ್ಲಿ ಸರಕಾರ ಭಾರೀ ಹೂಡಿಕೆಗೆ ಪ್ರೋತ್ಸಾಹ ನೀಡಿರುವುದರಿಂದ 1.8 ಕೋಟಿ ಉದ್ಯೋಗಾವಕಾಶಗಳು ನಿರ್ಮಾಣವಾಗಿವೆ. ಆದರೆ ಇದು ಯುಪಿಎ ಸರಕಾರದ ಸಾಧನೆ ಎಂದು ಈ ಪ್ರಬಂಧವೂ ಬಗೆದಿಲ್ಲ. ಏಕೆಂದರೆ 2010ರ ವೇಳೆಗೆ ಕಟ್ಟಡ ನಿರ್ಮಾಣ ವಲಯದಲ್ಲಿ ನಿರ್ಮಾಣಗೊಂಡ 4.4 ಕೋಟಿ ಉದ್ಯೋಗಗಳಲ್ಲಿ 4.2 ಕೋಟಿ ಅನೌಪಚಾರಿಕ ವಲಯದಲ್ಲಿ ಯಾವುದೇ ಸಾಮಾಜಿಕ ಭದ್ರತೆಯಿಲ್ಲದಲ್ಲಿ. ಕಟ್ಟಡ ನಿರ್ಮಾಣ ವಲಯದಲ್ಲಿ 95ಶೇ. ಮಂದಿಗೆ ಯಾವುದೇ ರೀತಿಯ ಸಾಮಾಜಿಕ ಭದ್ರತೆಯ ಕ್ರಮಗಳಿಲ್ಲ ಎಂದು ಈ ಅಧ್ಯಯನ ಹೇಳುತ್ತದೆ.

ಅಲ್ಲದೆ 2005-10ರ ಅವಧಿಯಲ್ಲಿ ಕೈಗಾರಿಕಾ ಉತ್ಪಾದನಾ ವಲಯದಲ್ಲಿ 50 ಲಕ್ಷ ಉದ್ಯೋಗಗಳು ನಾಶವಾಗಿವೆ. ಸೇವಾವಲಯದಲ್ಲಿಯೂ ಈ ಅವಧಿಯಲ್ಲಿ ನಿರ್ಮಾಣಗೊಂಡ ಉದ್ಯೋಗಗಳು ಕೇವಲ 40 ಲಕ್ಷ. ಈ ಅವಧಿಯನ್ನು 'ಸೇವಾವಲಯದ ನೇತೃತ್ವದ ಬೆಳವಣಿಗೆ' ಎಂದು ಪರಿಗಣಿಸಿರುವಾಗ ಇದು ಬಹಳ ಕಡಿಮೆಯೇ ಎಂಬುದು ಈ ಪರಿಣತರ ಅಭಿಪ್ರಾಯ.

ನಮ್ಮ ಆರ್ಥಿಕದಲ್ಲಿ ಅನೌಪಚಾರಿಕ ವಲಯ ವಿಪರೀತವಾಗಿ ಬೆಳೆದಿರುವುದನ್ನು ಕೊನೆಗೂ ಗಮನಿಸಿರುವ ಈ ಸಂಶೋಧನಾ ಪ್ರಬಂಧ ಈ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ನಮ್ಮದು ಈ ವಿಷಯದಲ್ಲಿ ಅತ್ಯಂತ ಕೆಟ್ಟ ರೀತಿಯ ಬೆಳವಣಿಗೆ, "ಇತರ ಮೂಡಿ ಬರುತ್ತಿರುವ ಆರ್ಥಿಕಗಳಿಗಿಂತ ಭಾರತವನ್ನು ಭಿನ್ನವಾಗಿಸುವ ಸಂಗತಿಯೆಂದರೆ ಒಟ್ಟು ದುಡಿಮೆಗಾರರಲ್ಲಿ ಅನೌಪಚಾರಿಕ ವಲಯದ ದುಡಿಮೆಗಾರರ ಪ್ರಮಾಣ 93ಶೇ. ಬ್ರೆಝಿಲ್‌ನಲ್ಲಿ ಇದು 55ಶೇ." ಎಂದು ಅದು ಹೇಳಿದೆ.

ಇಷ್ಟೇ ಅಲ್ಲ, "ಅಸಂಘಟಿತ ವಲಯದಲ್ಲೇನೋ ಅನೌಪಚಾರಿಕ ಅಥವ ಕ್ಯಾಶುವಲ್ ದುಡಿಮೆಯದ್ದೇ ಪ್ರಾಬಲ್ಯ, ಅತ್ತ ಸಂಘಟಿತ ವಲಯದಲ್ಲೂ ಈ ಅನೌಪಚಾರಿಕತೆ ಬೆಳೆಯುತ್ತಿದೆ" ಎಂದು ಈ ಅಧ್ಯಯನ ಹೇಳುತ್ತದೆ. 2010 ರ ವೇಳೆಗೆ ಸಂಘಟಿತ ಕೈಗಾರಿಕಾ ಉತ್ಪಾದನಾ ವಲಯದಲ್ಲಿ ಅನೌಪಚಾರಿಕ-ಕಾಂಟ್ರಾಕ್ಟ್ ದುಡಿಮೆಯ ಪ್ರಮಾಣ 60ಶೇ., ಉತ್ಪಾದನೆಯಲ್ಲದ ಸಂಘಟಿತ ವಲಯದಲ್ಲಂತೂ ಇದು 80ಶೇ. ಎಂದಿರುವ ಈ ಅಧ್ಯಯನ ಯಾವುದೇ ಸಾಮಾಜಿಕ ಭದ್ರತೆಗಳನ್ನು ಒದಗಿಸದ ಇಂತಹ ಬೆಳವಣಿಗೆ ಧೋರಣೆ ರೂಪಿಸುವವರಿಗೆ ಒಂದು ದೊಡ್ಡ ಸವಾಲು ಎಂದಿದೆ.

ಆದರೆ ನಮ್ಮ ಹಣಕಾಸು ಮಂತ್ರಿಗಳಿಗೆ, ಯೋಜನಾ ಆಯೋಗದ ಉಪಾಧ್ಯಕ್ಷರಿಗೆ, ಅಷ್ಟೇ ಏಕೆ ಪ್ರಧಾನ ಮಂತ್ರಿಗಳಿಗೂ ಇದು ತಮ್ಮ ಮುಂದಿರುವ ಪ್ರಮುಖ ಸವಾಲು ಎಂದನಿಸಿದಂತಿಲ್ಲ. ಕಾಂಗ್ರೆಸಿನ ಭವಿಷ್ಯದ ಮುಖಂಡರಿಗಂತೂ ಈ ಸವಾಲನ್ನು ಬಹಳ ಹಿಂದೆಯೇ ದೇಶಪ್ರೇಮಿಗಳ ಗಮನಕ್ಕೆ ತಂದಿರುವ ಎಡಪಂಥೀಯರನ್ನೇ ದೇಶದಿಂದ ಹೊರಗಟ್ಟುವುದೇ ಮುಖ್ಯ ಸವಾಲು! ●

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸಿಪಿಐ(ಎಂ)

ಪುಟ 4 ರಿಂದ

7. ಕೊಡಗು ಜಿಲ್ಲಾ ಸಂಘಟನಾ ಸಮಿತಿ : ಒಟ್ಟು = 04

1. ವಿರಾಜಪೇಟೆ ಪಟ್ಟಣ ಪಂಚಾಯತಿ – ದುರ್ಗಾಪ್ರಸಾದ್ – ವಾರ್ಡ್ 1 – ಸಾಮಾನ್ಯ
2. ವಿರಾಜಪೇಟೆ ಪಟ್ಟಣ ಪಂಚಾಯತಿ – ಭಾರತಿ ಸಾಬು – ವಾರ್ಡ್ 2 – ಬಿ.ಸಿ.ಎಂ(ಎ) – ಮಹಿಳೆ
3. ವಿರಾಜಪೇಟೆ ಪಟ್ಟಣ ಪಂಚಾಯತಿ – ರತೀಶ್ – ವಾರ್ಡ್ 4 – ಸಾಮಾನ್ಯ
4. ವಿರಾಜಪೇಟೆ ಪಟ್ಟಣ ಪಂಚಾಯತಿ – ಸಮೀನಾ – ಬಿ.ಸಿ.ಎಂ(ಎ)–ಮಹಿಳೆ

8. ಮೈಸೂರು ಜಿಲ್ಲಾ ಸಂಘಟನಾ ಸಮಿತಿ : ಒಟ್ಟು = 04

1. ಮೈಸೂರು ಮಹಾನಗರ ಪಾಲಿಕೆ : ಜಿ. ಜಯರಾಂ – ವಾರ್ಡ್ 26 – ಸಾಮಾನ್ಯ
2. ಹುಣಸೂರು ಪುರಸಭೆ : ಎಸ್. ವೆಂಕಟೇಶ್ – ವಾರ್ಡ್ 1 – ಎಸ್.ಸಿ.
3. ಹುಣಸೂರು ಪುರಸಭೆ : ಕೆ.ಸಿ. ಆಶಾ – ವಾರ್ಡ್ 3 – ಎಸ್.ಟಿ. – ಮಹಿಳೆ
4. ಹುಣಸೂರು ಪುರಸಭೆ : ಎಲ್. ಜಗದೀಶ್ – ವಾರ್ಡ್ 4 – ಎಸ್.ಟಿ.

9. ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಘಟನಾ ಸಮಿತಿ : ಒಟ್ಟು = 03

1. ದೊಡ್ಡಬಳ್ಳಾಪುರ ನಗರಸಭೆ : ರಿಜ್ವಾನ್ – ವಾರ್ಡ್ 6 – ಸಾಮಾನ್ಯ
2. ದೊಡ್ಡಬಳ್ಳಾಪುರ ನಗರಸಭೆ : ವೆಂಕಟೇಶ್ ಪಿ.ಎ. – ವಾರ್ಡ್ 11 – ಬಿ.ಸಿ.ಎಂ.(ಎ)
3. ದೊಡ್ಡಬಳ್ಳಾಪುರ ನಗರಸಭೆ : ಹೆಮಂತರಾಜು – ವಾರ್ಡ್ 12 – ಸಾಮಾನ್ಯ

10. ಮಂಡ್ಯ ಜಿಲ್ಲಾ ಸಂಘಟನಾ ಸಮಿತಿ : ಒಟ್ಟು = 02.

ಮಳವಳ್ಳಿ ಪುರಸಭೆ : ಜಯಮ್ಮ – ವಾರ್ಡ್ 2 – ಸಾಮಾನ್ಯ – ಮಹಿಳೆ
ಮಳವಳ್ಳಿ ಪುರಸಭೆ : ಭಾಗ್ಯಮ್ಮ – ವಾರ್ಡ್ 3 – ಸಾಮಾನ್ಯ – ಮಹಿಳೆ

11. ಮಂಗಳೂರು ಜಿಲ್ಲಾ ಸಮಿತಿ :

ಮಂಗಳೂರು ಮಹಾನಗರ ಪಾಲಿಕೆ 14
ಬಂಟ್ವಾಳ : 2
ಬೆಳ್ತಂಗಡಿ : 6
ಪುತ್ತೂರು : 1
ಮೂಡಬಿದರಿ : 8
ಉಳ್ಳಾಲ : 7
ಸುಳ್ಯ : 3

12. ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ : ಒಟ್ಟು = 32

ನಗರಸಭೆ = 2
ಪುರಸಭೆ = 25
ಪಟ್ಟಣ ಪಂಚಾಯಿತಿ = 5

13. ಉಡುಪಿ ಜಿಲ್ಲಾ ಸಮಿತಿ : ಒಟ್ಟು = 7

ನಗರಸಭೆ = 7
ರಾಜು ದೇವಾಡಿಗ – 22– ಶಾಂತಿನಿಕೇತನ
ಗುಣರತ್ನ (ಮಹಿಳೆ) – 21 – ಹುಂಜಾರಬೆಟ್ಟು
ಮೇರಿ ಜ್ಯೋತಿ (ಮಹಿಳೆ) – 23 – ಕಲ್ಲಾಗಾರ
ಸುಧಾಕರ್ ಮೆಂಡನ್ – 13 – ಮಂಗಳೂರು ಟೈಲ್ಸ್
ಶಿವಕುಮಾರ್‌ಮೆಂಡನ್ – 18 – ನಾನಾ ಸಾಹೇಬ್
ಕಲಾವತಿ (ಮಹಿಳೆ) – 19 – ವಿಠಲವಾಡಿ ಎಸ್.ಸಿ.
ಮೀನಾಕ್ಷಿ (ಮಹಿಳೆ) – 20 – ಕುಂದೇಶ್ವರ ಎಸ್.ಟಿ.

14. ಕೊಪ್ಪಳ ಜಿಲ್ಲಾ ಸಮಿತಿ : ಒಟ್ಟು = 2

ನಗರಸಭೆ = 2

15. ಬಿಜಾಪುರ ಜಿಲ್ಲಾ ಸಮಿತಿ : ಒಟ್ಟು = 1

ನಗರಸಭೆ = 1

16. ಹಾಸನ/ಚಿಕ್ಕಮಗಳೂರು ಜಿಲ್ಲಾ ಸಂಘಟನಾ ಸಮಿತಿ : ಒಟ್ಟು = 1

ನಗರಸಭೆ = 1

17. ಗದಗ್ :

ಗಜೇಂದ್ರಗಡ ಪುರಸಭೆ = 8

ವರ್ಷಕ್ಕೆರಡು ಬಾರಿ ರೈಲು ದರ ಏರಿಕೆ: ಯುಪಿಎ-2 ತಂದಿರುವ ನವೀನತೆ!

ಯುಪಿಎ-2 ಸರಕಾರದ ಹೊಸ ರೈಲು ಮಂತ್ರಿಗಳು ತಮ್ಮ ಬಜೆಟನ್ನು ಎಂದಿನ ಯುಪಿಎ-2 ಮಾದರಿಯಲ್ಲೇ ಸಲ್ಲಿಸಿದ್ದಾರೆ. ಈ ಸಚಿವರು ಹಿಂದಿನವರಂತಲ್ಲ ಎನ್ನುತ್ತಿವೆ ಮಾಧ್ಯಮಗಳ ವರದಿಗಳು. ಇವರದ್ದೇನೋ



ವಿಶೇಷವಂತೆ. ಆಹಾ ಏನು ವಿಶೇಷ ಅಂತ ನೋಡಿದರೆ ಕಳೆದ 17 ವರ್ಷಗಳಲ್ಲಿ ರೈಲ್ವೆ ಬಜೆಟ್ ಮಂಡಿಸುತ್ತಿರುವ ಮೊದಲ ಕಾಂಗ್ರೆಸ್ ರೈಲ್ವೆ ಮಂತ್ರಿಯಂತೆ ಇವರು. ಆಹಾ ಜನರ ಭಾಗ್ಯವೇ ? ಇಲ್ಲಿಯವರೆಗೆ ಬಜೆಟ್ ಯುಪಿಎ ಭಾಗವಾದ ಮಿತ್ರಪಕ್ಷಗಳಿಗೆ ಸೇರಿದ ಸಚಿವರು ಬಜೆಟ್ ಮಂಡಿಸುತ್ತಿದ್ದರಂತೆ.

ಇರಿಯುವ ಕತ್ತಿ ಯಾರದಾದರೇನು ?

ಯಾರು ಬಜೆಟ್ ಮಂಡಿಸಿದರೇನು ? ಸುರುಳಿ ಸುರುಳಿ ಬೆಲೆ ಏರಿಕೆಯ ಸುಳಿಯಲ್ಲಿ ಸಿಲುಕಿ ತತ್ತರಿಸಿರುವ ಜನರಿಗೆ ಕೊಂಚವಾದರೂ ನೆಮ್ಮದಿ ನೀಡುವಂತಹದ್ದೇನಾದರೂ ಬಜೆಟ್‌ನಲ್ಲಿ ಇದೆಯಾ ಅಥವಾ ಬೆಲೆ ಏರಿಕೆಯ ಬೆಂಕಿಗೆ ತುಪ್ಪ ಸುರಿಯುವಂತೆ ಜನರ ಬೆನ್ನ ಮೇಲೆ ಬಜೆಟ್ ಎಂಬ ಶಸ್ತ್ರಬಳಸಿ ಬರೆ ಹಾಕಲಾಗುವುದೇ ಎಂಬುದು ಇಲ್ಲಿ ನಿಜವಾದ ಪ್ರಶ್ನೆ. ನಿರಂತರವಾದ ರೈಲ್ವೆ ಅಪಘಾತಗಳಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿರುವ ಅಮಾಯಕ ಜನರ ಪ್ರಾಣ ರಕ್ಷಣೆಗೆ ಅಂದರೆ ರೈಲ್ವೆ ಸುರಕ್ಷತೆ ದೃಷ್ಟಿಯಿಂದ ಸರ್ಕಾರ ಬಜೆಟ್ ಮೂಲಕ ಯಾವ ಕ್ರಮವಹಿಸಿದೆ ಎಂಬುದು ಬಜೆಟ್‌ನ ವಿಷಯದಲ್ಲಿ ಮುಖ್ಯವಾದ ಪ್ರಶ್ನೆ.

ಬಜೆಟ್‌ಗೆ ಮೊದಲೆ ರೈಲ್ವೆ ದರಗಳನ್ನು 20 ಶೇ. ದರಗಳನ್ನು ಏರಿಸಲಾಗಿತ್ತು. ಬಜೆಟನಲ್ಲಿ ತಾನು ಪ್ರಯಾಣ ದರಗಳನ್ನೇನೂ ಏರಿಸಿಲ್ಲ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದ್ದಾರೆ ನಮ್ಮ ಸಚಿವರು. ಆದರೆ ಇಲ್ಲಿಯೂ ಅವರಿಗೆ ಪೂರ್ತಿ ಸತ್ಯವನ್ನು ಹೇಳಲಾಗಿಲ್ಲ. ಟಿಕೆಟ್ ಮಾಡಿಸುವುದು(ರಿಜರ್ವೇಶನ್) ಅದನ್ನು ರದ್ದು ಮಾಡುವುದು (ಕ್ಯಾನ್ಸಲೇಶನ್) ಮತ್ತು ತತ್ಕಾಲ್ ದರಗಳನ್ನು ಏರಿಸಿ ಪ್ರಯಾಣಿಕರಲ್ಲಿ ಹೆಚ್ಚಿನವರು ಪ್ರಯಾಣಕ್ಕೆ ಮೊದಲಿಗಿಂತ ಹೆಚ್ಚು ತೆರುವಂತೆ ಮಾಡಲಾಗಿದೆ. ಜತೆಗೆ ಸಾಗಾಣಿಕೆ ದರಗಳನ್ನು ಡೀಸೆಲ್ ದರಗಳ ಏರಿಕೆಯ ದರಗಳ ಏರಿಕೆಯನ್ನು ನೆಪವಾಗಿಸಿಕೊಂಡು 5 ಶೇ.ದಷ್ಟು ಏರಿಸಲಾಗಿದೆ. ಇದರಿಂದಾಗಿ ಡೀಸೆಲ್, ಸೀಮೆ ಎಣ್ಣೆ ಮತ್ತು ಅಡುಗೆ ಅನಿಲ ಸಾಗಾಣಿಕೆ ದರಗಳೂ ಏರಲಿವೆ. ಪ್ರಸ್ತುತ ಸರ್ಕಾರದ ಧೋರಣೆಯಲ್ಲಿ ಈ ಏರಿಕೆಗಳು ಕೂಡ ಬಳಕೆದಾರರ ಮೇಲೆಯೇ ಏರಗಿ ಬರಲಿವೆ. ಹೀಗಾಗಿ ಈ ತೈಲ ಉತ್ಪನ್ನಗಳ ದರಗಳು ಮತ್ತಷ್ಟು ಏರುವ ಸಂಭವವೂ ಇದೆ.


ವರ್ಷಕ್ಕೆರಡು ಬರೆ

ಇದು ಸಾಲದೆಂಬಂತೆ, ಬಜೆಟ್‌ನಲ್ಲಿ ಒಂದು 'ಇಂಧನ ಅಧಿಭಾರ'ವನ್ನು ಹೇರಲಾಗಿದೆ. ಇದರಿಂದಾಗಿ ವರ್ಷದಲ್ಲಿ ಎರಡು ಬಾರಿ ದರ ಏರಿಕೆಗಳನ್ನು ಮಾಡಲು ಈ ಬಜೆಟ್ ಅವಕಾಶ ಮಾಡಿಕೊಟ್ಟಿದೆ. ಜತೆಗೆ, ಒಂದು ಸ್ವತಂತ್ರವೆನ್ನಲಾದ 'ರೈಲು ದರಪಟ್ಟಿ ಪ್ರಾಧಿಕಾರ'(ಆರ್‌ಟಿಎ)ವನ್ನು ರಚಿಸುವ ಪ್ರಸ್ತಾವವಿದೆ. ಈ ಮೂಲಕ ನಿರಂತರವಾಗಿ ಏನಾದರೂ ಕಾರಣ ಹೇಳಿಕೊಂಡು ರೈಲು ಪ್ರಯಾಣ ಮತ್ತು ಸಾಗಾಣಿಕೆ ದರಗಳನ್ನು ಏರಿಸುತ್ತಲೇ ಇರಬಹುದು-ಪೆಟ್ರೋಲ್, ಡೀಸೆಲ್ ದರಗಳನ್ನು ಈಗ ಮೂರು ಮೂರು ದಿನಕ್ಕೂ ಏರಿಸುತ್ತಿಲ್ಲವೇ ? ಹಾಗೆ!

ಆದ್ದರಿಂದಲೇ ಇದು ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕಿರುವ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರವಾಗಿ ಖಂಡಿಸಿದೆ. ಈ ರೀತಿ ವಿವಿಧ ರೀತಿಗಳಲ್ಲಿ ಪ್ರಯಾಣದರಗಳಲ್ಲಿ ಪರೋಕ್ಷ ಏರಿಕೆ ಮತ್ತು ಸಾಗಾಣಿಕೆ ದರಗಳ ನೇರ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಅದು ಆಗ್ರಹಿಸಿದೆ.

ಹಣಕಾಸು ಬಿಕ್ಕಟ್ಟಿಗಿಲ್ಲ ಪರಿಹಾರ

ಇಷ್ಟು ಹೊರೆಗಳನ್ನು ಹೇರಿದ ನಂತರವೂ ಭಾರತೀಯ ರೈಲ್ವೆಯನ್ನು ಬಾಧಿಸುತ್ತಿರುವ ಹಣಕಾಸು ಬಿಕ್ಕಟ್ಟನ್ನು ನಿವಾರಿಸುವ ಗಂಭೀರ ಪ್ರಯತ್ನವನ್ನೇನೂ ಈ ಬಜೆಟ್ ಮಾಡಿಲ್ಲ. ಈ ಸರಕಾರ ಕಳೆದ ಮೂರು ವರ್ಷಗಳಲ್ಲಿ ಪ್ರಾಜೆಕ್ಟುಗಳ ಸಂಖ್ಯೆಯನ್ನು ಹೆಚ್ಚಿಸಿ, ಜಾಹೀರಾತುಗಳ ಮೇಲೆ ಖರ್ಚು ಹೆಚ್ಚಿಸಿ, ಪಲವಾರು ಅಡಿಗಲ್ಲು ಸಮಾರಂಭಗಳು ಮತ್ತು ಇತರ ಅಂತಹುದೇ ಚಟುವಟಿಕೆಗಳ ಮೇಲೆ ಖರ್ಚುಗಳನ್ನು ಮಾಡಿ ಉದ್ದೇಶಪೂರ್ವಕವಾಗಿಯೇ ನಿರ್ಮಾಣವಾಗಿರುವ ಬಿಕ್ಕಟ್ಟು ಇದು. ರೈಲು ಅಪಘಾತಗಳ ಪ್ರಮಾಣದಲ್ಲಿ ಗಂಭೀರ ಹೆಚ್ಚಳವಾಗಿದ್ದರೂ, ರೈಲು ಪ್ರಯಾಣವನ್ನು ಅಫಘಾತ-ಮುಕ್ತಗೊಳಿಸುವ ಬಗ್ಗೆ ನಿರ್ದಿಷ್ಟ



ಪ್ರಸ್ತಾವಗಳು ಕೂಡ ಈ ಬಜೆಟನಲ್ಲಿ ಇಲ್ಲ.

'ನಿರ್ವಹಣಾ ಅನುಪಾತ'ವನ್ನು ಕಡಿಮೆ ಮಾಡಲೆಂದು ಹೊಸ ರೈಲು ಲೈನುಗಳು, ಗೇಜ್ ಪರಿವರ್ತನೆ, ರೈಲು ದಾಸ್ತಾನುಗಳ ಗುರಿಗಳನ್ನೇ ಇಳಿಸಲಾಗಿದೆ. ಸಾಗಾಣಿಕೆಯ ಗುರಿಯನ್ನೇನೋ ಏರಿಸಲಾಗಿದೆ. ಆದರೆ ಹೊಸ ವ್ಯಾಗನುಗಳ ಖರೀದಿ ಗುರಿಯನ್ನು 2000ದಷ್ಟು ಇಳಿಸಿ ಸಾಗಾಣಿಕೆ ಗುರಿಯೂ ಈಡೇರದಂತೆ ಮಾಡಲಾಗಿದೆ.

ವಾರ್ಷಿಕ ಯೋಜನೆ ಈಡೇರುವಂತಿಲ್ಲ. ಏಕೆಂದರೆ ಯುಪಿಎ-2 ಸರಕಾರ ಬಹುವಾಗಿ ನಂಬಿರುವ ಪಿ.ಪಿ.ಪಿ.(ಸಾರ್ವಜನಿಕ-ಖಾಸಗಿ ಪಾಲುದಾರಿಕೆ) ಮಾದರಿ ಇಲ್ಲಿ ಕೆಲಸವನ್ನೇ ಮಾಡಿಲ್ಲ, ಏಕೆಂದರೆ, ಈ ಮಾದರಿಯಲ್ಲಿ ಒಂದಾದರೂ ಹೂಡಿಕೆ ನಡೆದಿಲ್ಲ. ಆದರೂ ಈ ಮಾದರಿಯಲ್ಲಿ ಅಚಲ ನಂಬಿಕೆಗೆ ಹೊಸ ರೈಲು ಮಂತ್ರಿಗಳೂ ಬದ್ಧರಾಗಿರಬೇಕು ತಾನೇ?



ಒಟ್ಟಿನಲ್ಲಿ ಇದು ಅಸಂಗತತೆ ಮತ್ತು ವೈರುಧ್ಯಗಳಿಂದ ತುಂಬಿರುವ ಬಜೆಟ್, ಅದನ್ನು ಮೋಸದ ಮಾತುಗಳಲ್ಲಿ ಸುತ್ತಿ ಮುಂದಿಡಲಾಗಿದೆ. ಇದರ ಒಟ್ಟು ಪರಿಣಾಮವೆಂದರೆ ಪ್ರಯಾಣ ಮತ್ತು ಸಾಗಾಣಿಕೆ ದರಗಳಲ್ಲಿ ಮತ್ತಷ್ಟು ಏರಿಕೆ ಎಂದು ಸಿಪಿಐಯು ಖಂಡಿಸಿದೆ. ಪ್ರಧಾನ ಮಂತ್ರಿಗಳು ಇದು ಸುಧಾರಣಾವಾದಿ ಬಜೆಟ್ ಎಂದಿದ್ದಾರೆ. ಅದು ಅವರ ಮಟ್ಟಿಗೆ ಪ್ರಶಂಸೆಯಿರಬಹುದು. ಆದರೆ, ಸಿಪಿಐಯು ಹೇಳಿರುವಂತೆ, ನವ-ಉದಾರವಾದಿ ಚೌಕಟ್ಟಿಗೆ ಅಂಟಿಕೊಂಡಿರುವ ಈ ರೈಲು ಬಜೆಟ್‌ನಿಂದ ಜನತೆ ನಿರೀಕ್ಷಿಸಬಹುದಾದದ್ದು ಇನ್ನಷ್ಟು ಹೊರೆಗಳು ಮತ್ತು [illegible] [illegible].

ಮುಳಬಾಗಿಲು : ದಲಿತರ ಕೈಗೆ ನಿವೇಶನ ದಾಖಲೆ–ಹಕ್ಕುಪತ್ರ ಛಲ ಬಿಡದ ಐಕ್ಯ ಹೋರಾಟಕ್ಕೆ ಯಶಸ್ಸು

ಕೋಲಾರ ಜಿಲ್ಲೆಯ ಮುಳಬಾಗಿಲು ಪಟ್ಟಣದಲ್ಲಿ ಕಳೆದ 30 ವರ್ಷಗಳಿಂದ ವಾಸ ಮಾಡಿ 25 ವರ್ಷಗಳಿಂದ ಹಕ್ಕು ಪತ್ರ ಹೊಂದಿ, ಪಡಿತರ ಚೀಟಿ, ಮತದಾರ ಪಟ್ಟಿ, ಸರ್ಕಾರದ ಇನ್ನಿತರ ಎಲ್ಲಾ ದಾಖಲೆಗಳಲ್ಲಿ ಅಧಿಕೃತವಾಗಿ ನಾಮಕರಣಗೊಂಡಿದ್ದ 'ವಿವೇಕಾನಂದ ನಗರ'ದ ಬಡ ದಲಿತರನ್ನು 1–9–2012 ರಂದು ಸಾವಿರಾರು ಪೊಲೀಸರ ಬಂದೋಬಸ್ತ್‌ನಲ್ಲಿ ನಿರ್ದಯವಾಗಿ ತೆರವುಗೊಳಿಸಿ ಬೀದಿಪಾಲು ಮಾಡಿದ್ದ ಪ್ರಕರಣ ಅದರ ಸಂಬಂಧವಾದ ಹೋರಾಟದ ಬಗೆಗೆ ನೀವು ಈಗಾಗಲೇ ಪತ್ರಿಕೆಯಲ್ಲಿ ಓದಿದ್ದೀರಿ.

ಸಿಪಿಐ(ಎಂ) ಮತ್ತು ದಲಿತ ಸಂಘಟನೆಗಳ ಛಲಬಿಡದ ಸತತ ಹೋರಾಟದ ಫಲವಾಗಿ ಈ ದಲಿತ ಕುಟುಂಬಗಳ ಹೋರಾಟ ಜಯವನ್ನು ದಾಖಲಿಸಿದ್ದು ಈಗ ಈ 48 ದಲಿತ ಕುಟುಂಬಗಳ ಕೈಯಲ್ಲಿ ಆಶ್ರಯ 20+30 ಅಳತೆಯ ನಿವೇಶನದ ದಾಖಲೆಪತ್ರಗಳು ನಗುತ್ತಿವೆ.

ಹೋರಾಟದ ಹಾದಿ


ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸದೇ ಏಕಾಏಕಿ ಬಡ ದಲಿತ ಕುಟುಂಬಗಳನ್ನು ಬೀದಿಗೆ ದೂಡಿದ್ದ ಪರಿಸ್ಥಿತಿಯಲ್ಲಿ ದಲಿತ ಸಂಘಟನೆಗಳ ಮುತುವರ್ಜಿಯಿಂದ ಈ ಕುಟುಂಬಗಳಿಗೆ ಪಟ್ಟಣದ ಶ್ರೀರಾಮ ಮಂದಿರದಲ್ಲಿ ತಾತ್ಕಾಲಿಕವಾಗಿ ತಂಗಲು ವ್ಯವಸ್ಥೆ ಮತ್ತು ದಾನಿಗಳಿಂದ ಊಟದ ವ್ಯವಸ್ಥೆಯನ್ನು ಮಾಡಿ ಈ ಕುಟುಂಬಗಳಿಗೆ ಸೂಕ್ತ ಪುನರ್ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿ ಅಂದಿನಿಂದಲೇ ಸಿಪಿಐ(ಎಂ) ಮತ್ತು ದಲಿತ ಸಂಘಟನೆಗಳ ನೇತೃತ್ವದಲ್ಲಿ ಪುರಸಭೆ ಕಛೇರಿ ಮುಂದೆ ಧರಣಿ ಸತ್ಯಾಗ್ರಹವನ್ನು ಆರಂಭಿಸಲಾಗಿತ್ತು.

ನಾನಾ ಹೋರಾಟಗಳು

ಗಾಂಧಿ ಜಯಂತಿಯಂದು ಆರಂಭಿಸಲಾದ ಅಮರಣಾಂತ ಉಪವಾಸ ಸತ್ಯಾಗ್ರಹ, ಮುಳಬಾಗಿಲು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಪ್ರತಿಭಟನೆ, ದ್ವಿಚಕ್ರ ವಾಹನಗಳ ರ್‍ಯಾಲಿ, ವಿದ್ಯಾರ್ಥಿಗಳ ಸೌಹಾರ್ದ ಬೆಂಬಲಾರ್ಥ ಕಾಲೇಜು ಬಂದ್...ಹೀಗೆ ನಾನಾ ರೂಪದ ಹೋರಾಟಗಳು ಸತತವಾಗಿ ನಡೆಯುತ್ತ ಬಂದಿದ್ದವು.

ಸಿಪಿಐ(ಎಂ) ಶಾಸಕರ ಮುತುವರ್ಜಿ

ಹಿಂದೆ 80 ರ ದಶಕದಲ್ಲಿ ಸಿಪಿಐ(ಎಂ) ಪಕ್ಷದ ಶಾಸಕರಾಗಿದ್ದ ಕಾಮ್ರೇಡ್ ಆರ್. ವೆಂಕಟರಾಮಯ್ಯನವರ ಸತತ ಹೋರಾಟದ ಫಲವಾಗಿ ಮುಳಬಾಗಿಲಿನ ಸರ್ವೆ ನಂಬರ್ 443/1, 444/1 ಮತ್ತು 444 ರ ಜಮೀನುಗಳನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿತ್ತು. ತಾ:2–10–1987 ರಂದು ಮಹಾತ್ಮ ಗಾಂಧಿ ಜಯಂತಿಯಂದು ಬಡ ದಲಿತ ನಿರ್ವಸತಿಗರಿಗೆ ಹಕ್ಕು ಪತ್ರಗಳನ್ನು ನೀಡಿ ಈ ಪ್ರದೇಶಕ್ಕೆ ವಿವೇಕಾನಂದ ನಗರ ಎಂದು ನಾಮಕರಣ ಮಾಡಲಾಗಿತ್ತು. ಪುರಸಭೆ, ಕಂದಾಯ ಇಲಾಖೆಯ ಭ್ರಷ್ಟ ಅಧಿಕಾರಿಗಳು ಭೂಮಾಲೀಕರೊಂದಿಗೆ ಶಾಮೀಲಾಗಿದ್ದರಿಂದ ಹಕ್ಕು ಪತ್ರ ವಿತರಿಸಿದ ಭೂಮಿಯನ್ನು ಸರ್ಕಾರವು ಜಮೀನಿನ ಮಾಲೀಕನಿಂದ ಖರೀದಿ ಮಾಡಲು ಪ್ರಯತ್ನ ಮಾಡಲಿಲ್ಲ. ದಲಿತ ಕುಟುಂಬಗಳಿಗೆ ನಿವೇಶನದ ದಾಖಲೆಗಳು ಸಿಗಲಿಲ್ಲ. ಹೀಗಾಗಿ ನ್ಯಾಯಾಲಯದಲ್ಲಿ ಜಮೀನಿನ ಮಾಲೀಕನ ಪರ ತೀರ್ಪು ಬರುವಂತಾಯಿತು.



ಹಾಲಿ ಶಾಸಕರ ಅನಾದಾರ–ಅಡ್ಡಿ

ಪಟ್ಟಣದ ನೂಗಲುಬಂಡೆ ಮತ್ತು ವೀರಭದ್ರನಗರದಲ್ಲಿ ಒಟ್ಟು ಸ.200 ನಿವೇಶನಗಳಿಗೆ ಆಗುವಷ್ಟು ಆಶ್ರಯ ನಿವೇಶನಕ್ಕಾಗಿ ಜಮೀನನ್ನು ಇತ್ತೀಚೆಗೆ ಸರ್ಕಾರ ಸ್ವಾಧೀನಪಡಿಸಿಕೊಂಡಿತ್ತು. ಇಷ್ಟಿದ್ದರೂ ಸ್ವತಃ ದಲಿತ ಸಮುದಾಯಕ್ಕೆ ಸೇರಿದ ಆಶ್ರಯ ಸಮಿತಿಯ ಅಧ್ಯಕ್ಷರಾದ ಮುಳಬಾಗಿಲು ಶಾಸಕರಿಗೆ ಬೀದಿಗೆ ಬಿದ್ದ ದಲಿತ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವುದು ಆದ್ಯತೆಯ ವಿಷಯವಾಗಲೇ ಇಲ್ಲ. ಆಶ್ರಯ ಸಮಿತಿ ಸಭೆಯನ್ನು ಕರೆದು ವಸತಿ ಕಳೆದುಕೊಂಡವರನ್ನು ಫಲಾನುಭವಿಗಳೆಂದು ನಿರ್ಣಯ ಅಂಗೀಕರಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೆ ಸಮಸ್ಯೆಯನ್ನು ಬಗೆಹರಿಸಲು ಸುಲಭವಾಗುತ್ತಿತ್ತು. ಆದರೆ ತಮ್ಮದೇ ರಾಜಕೀಯ ಲಾಭ ನಷ್ಟಗಳ ಲೆಕ್ಕಾಚಾರದಲ್ಲಿ ಮುಳುಗಿದ ಶಾಸಕರು ಅದನ್ನು ಮಾಡಲಿಲ್ಲ. ಬದಲಿಗೆ ಪಟ್ಟಣದ 700–800 ರಷ್ಟಿರುವ ಸಾಮಾನ್ಯ ಬಡವರ ಅರ್ಜಿಗಳ ಜೊತೆಯಲ್ಲಿ ಈ ದಲಿತ ಕುಟುಂಬಗಳ ಅರ್ಜಿಗಳು ಸಮಿತಿ ಮುಂದೆ ಬರಲಿ ಎಂದು ಹೇಳುತ್ತಾ ಸಮಸ್ಯೆಯ ಶೀಘ್ರ ಇತ್ಯರ್ಥಕ್ಕೆ ಅಡ್ಡಗಾಲು ಹಾಕಿಕೊಂಡು ಕುಳಿತರು. ಸಾಮಾನ್ಯ ಬಡಜನರ ನಿವೇಶನ ಅರ್ಜಿಗಳೊಂದಿಗೆ ಮನೆ ಕಳೆದುಕೊಂಡು ನಿರಾಶ್ರಿತರಾದ ಈ ದಲಿತ ಕುಟುಂಬಗಳನ್ನು ಸೇರಿಸಿ ಕಾಯಲು ಸಿಪಿಐ(ಎಂ) ಪಕ್ಷ ಮತ್ತು ದಲಿತ ಸಂಘಟನೆಗಳು ಒಪ್ಪಲಿಲ್ಲ. ಏಕೆಂದರೆ ಅರ್ಹತೆಯ ಪರಿಶೀಲನೆ ಇತ್ಯಾದಿಗಳ ಕಾರಣಕ್ಕಾಗಿ ಈ ಒಟ್ಟು ನಿವೇಶನ ಹಂಚಿಕೆ ವಿಷಯದಲ್ಲಿ ವಿಳಂಬವಾಗುವ ಸಾಧ್ಯತೆಗಳಿದ್ದವು.

ಕೊನೆಗೂ ಗೆಲುವು

ನಾನಾ ಹೋರಾಟಗಳು ಒಟ್ಟು ಚಳುವಳಿ ತಂದ ಒತ್ತಡ ಮತ್ತು ದಲಿತ ಕುಟುಂಬಗಳ ಸಮಸ್ಯೆಯ ತೀವ್ರತೆ ಅರಿವಿದ್ದ ಅಧಿಕಾರಗಳ ಸಕಾರಾತ್ಮಕ ಸ್ಪಂದನೆಯಿಂದಾಗಿ ಈ ನಿವೇಶನದ ಪ್ರಶ್ನೆ ಒಂದು ನಿರ್ಣಾಯಕ ಹಂತವನ್ನು ತಲುಪಿತು. ಆದರೆ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಗೆ ಬಂದು ಬಿಡಬಹುದಾದ ಆತಂಕ, ಮತ್ತು ಅದರ ನಡುವೆ ಸಂಬಂಧಿಸಿದ ಗುಮಾಸ್ತರ ರಜೆಗಳು....ಇತ್ಯಾದಿ 'ವಿಘ್ನ'ಗಳು ಎದುರಾದರೂ ಚಳುವಳಿಕಾರರ ದೃಢವಾದ ಪಟ್ಟು ಬಿಡದ ಹೋರಾಟದ ಫಲವಾಗಿ ಅಂತಿಮವಾಗಿ ಕಾನೂನುಬದ್ಧವಾಗಿ ದಲಿತ ಕುಟುಂಬಗಳಿಗೆ ನಿವೇಶನಗಳು ಮಂಜೂರಾದವು.

ಈ ಯಶಸ್ಸಿನ ಹಿನ್ನೆಲೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ವಿ. ಗೀತಾ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಮುಂತಾದವರು ಫೆಬ್ರವರಿ 15, 2013 ರಂದು ಮುಳಬಾಗಿಲು ಪಟ್ಟಣದಲ್ಲಿನ ಈ ಕುಟುಂಬಗಳ ತಾತ್ಕಾಲಿಕ ವಾಸಸ್ಥಾನವಾದ ಶ್ರೀರಾಮ ಮಂದಿರಕ್ಕೆ ಭೇಟಿ ನೀಡಿದಾಗ ಜನರಲ್ಲಿ ಸಂಭ್ರಮವೋ ಸಂಭ್ರಮ. ಮುಖಂಡರುಗಳಿಗೆ ಹಾರ ಹಾಕಿ ಅಭಿನಂದಿಸಿ ಎಲ್ಲರಿಗೂ ಸಿಹಿಹಂಚಿ ಸಂತಸಪಟ್ಟ ಜನರು ಸಭೆ ಸೇರಿ ಮುಂದೆ ಇಡಬೇಕಾದ ಹೆಜ್ಜೆಗಳ ಕುರಿತು ಚರ್ಚೆಯನ್ನು ನಡೆಸಿದರು.

ಮುಂದಿನ ಹಾದಿ

ನಿವೇಶನ ಮಂಜೂರಾದರೆ ಎಲ್ಲವೂ ಸಿಕ್ಕಂತಾಗಲಿಲ್ಲ. ಅಲ್ಲಿ ವಾಸಕ್ಕೆ ಮನೆ ಬೇಕು. ರಾಜೀವ್ ಹೌಸಿಂಗ್ ಕಾರ್ಪೋರೇಷನ್ನಿನ ವಸತಿ ಯೋಜನೆಯಲ್ಲಿ ಈ ಕುಟುಂಬಗಳು ಮನೆ ಕಟ್ಟಿಕೊಳ್ಳಲು ಅನುಕೂಲ ಕಲ್ಪಿಸುವ ಸಂಬಂಧ ಪ್ರಯತ್ನಗಳು ನಡೆದಿವೆ. ಮತ್ತು ಈ ವಿಷಯದಲ್ಲಿಯೂ ಜಿಲ್ಲಾಡಳಿತದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದ್ದು ಸೌಲಭ್ಯ ದೊರೆಯುವ ವಾತಾವರಣ ಕಂಡು ಬರುತ್ತಿದೆ.

ನಿವೇಶನ ರಹಿತರ ಚಳುವಳಿ ಕಟ್ಟಲು ನಿರ್ಧಾರ

ಹೋರಾಟದಿಂದ ಏನೂ ಸಾಧನೆಯಾಗುವುದಿಲ್ಲ. ಸುಮ್ಮನೆ ಹೋರಾಟ ಚಳುವಳಿ ಅಂತ ಯಾಕೆ ದಣಿಯುವಿರಿ ಅನ್ನುವುದು ನ್ಯಾಯಕ್ಕಾಗಿ ಹೋರಾಡುವವರಿಗೆ ಬಹಳ ಸಾರಿ ಸಿಗುವ ಉಪದೇಶ. ಜನರಲ್ಲಿ ಚಳುವಳಿಗೆ ಪ್ರತಿಫಲ ಸಿಗುವುದಿಲ್ಲ ಎಂಬ ನಿರಾಶಾ ಭಾವನೆಯನ್ನು ಹರಡಲಾಗಿದೆ. ಈ ಸಿನಿಕತನವನ್ನು ನಿವಾರಿಸಿ ಹೋರಾಟಕ್ಕೆ ಉತ್ಸಾಹ ತುಂಬುವ ಸ್ಫೂರ್ತಿ ಈ ಚಳುವಳಿಯ ಯಶಸ್ಸಿನಲ್ಲಿದೆ. ಅದನ್ನು ಬಳಸಿ ತಾಲ್ಲೂಕಿನಲ್ಲೂ ಜಿಲ್ಲೆಯಲ್ಲೂ ನಿವೇಶನರಹಿತರ ಹೋರಾಟವನ್ನು ಕಟ್ಟಲು ಇದೇ ಸಂದರ್ಭದಲ್ಲಿ ಸಂಘಟನೆಗಳ ಮುಖಂಡರು ಮತ್ತು ಫಲಾನುಭವಿಗಳು ನಿರ್ಧರಿಸಿದ್ದಾರೆ.

ಈ ಚಳುವಳಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಾ ಸಕ್ರಿಯವಾಗಿ ತೊಡಗಿಕೊಂಡು ನೇತೃತ್ವ ವಹಿಸಿದ ಜಿ.ಸಿ. ಬಯ್ಯಾರೆಡ್ಡಿ, ಗಾಂಧಿನಗರ ನಾರಾಯಣಸ್ವಾಮಿ, ವಿ. ಗೀತಾ, ದಲಿತ ಸಂಘರ್ಷ ಸಮಿತಿ ತಾಲ್ಲೂಕು ಸಂಚಾಲಕ ಕೀಲು ಹೊಳಲಿ ಸತೀಶ್, ದಲಿತ ಸಂಘರ್ಷ ಸಮಿತಿ(ಸಂಯೋಜಕ)ಯ ತಾಲ್ಲೂಕು ಸಂಯೋಜಕ ಸಂಗಸಂದ್ರ ವಿಜಯಕುಮಾರ್, ರೈತ ಹಕ್ಕುಗಳ ಹೋರಾಟ ಸಮಿತಿಯ ತಾಲ್ಲೂಕು ಅಧ್ಯಕ್ಷ ಮೆಕ್ಯಾನಿಕ್ ಶ್ರೀನಿವಾಸ್ ಮುಂತಾದವರು ಚಳುವಳಿಯನ್ನು ಮುಂದಕ್ಕೊಯ್ಯುವ ಬಗ್ಗೆಟ್ಟಿನ ತೀರ್ಮಾನ ಕೈಗೊಂಡು ಮುಂದುವರಿದಿದ್ದಾರೆ. ಈ ಐಕ್ಯ ಚಳುವಳಿ ಜಿಲ್ಲೆಯ ನಿವೇಶನ ರಹಿತರ ಹೋರಾಟಕ್ಕೆ ಹೊಸ ಚೈತನ್ಯ ತುಂಬಲಿದೆ ಎಂದರೆ ತಪ್ಪಾಗಲಾರದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರ ಭದ್ರತೆ ಶಾಸನಕ್ಕೆ ಒತ್ತಾಯಿಸಿ ಪ್ರಧಾನ ಮಂತ್ರಿಗಳಿಗೆ 4 ಕೋಟಿ ಸಹಿ

ಆಹಾರ ಭದ್ರತೆ ಕುರಿತಂತೆ ಮೂರು ಬೇಡಿಕೆಗಳನ್ನು ಯುಪಿಎ-2 ಸರಕಾರದ ಮುಂದಿಡುವ ಮನವಿಯನ್ನು ಪ್ರಧಾನ ಮಂತ್ರಿಗಳಿಗೆ ಸಲ್ಲಿಸಲಾಯಿತು. ಇದಕ್ಕೆ 4,01,00,273(4ಕೋಟಿ 1ಲಕ್ಷ 273)ಮಂದಿ ಸಹಿ ಹಾಕಿದ್ದಾರೆ. ಜನಗಳನ್ನು ಎಪಿಎಲ್, ಬಿಪಿಎಲ್ ಎಂದೆಲ್ಲ ಒಡೆಯದೆ ಒಂದು ಸಾರ್ವತ್ರಿಕವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಒದಗಿಸುವ ಆಹಾರ ಭದ್ರತಾ ಶಾಸನವನ್ನು ಈ ಬಜೆಟ್ ಅಧಿವೇಶನದಲ್ಲಿ ತರಬೇಕು, ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಪ್ರತಿಕುಟುಂಬಕ್ಕೆ ಕೆ.ಜಿ.ಗೆ 2ರೂ. ಮೀರದ ದರದಲ್ಲಿ ಒದಗಿಸಬೇಕು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನಗದು ವರ್ಗಾವಣೆ ಬೇಡ ಎಂಬ ಮೂರು ಬೇಡಿಕೆಗಳನ್ನು ಹೊಂದಿರುವ ಮನವಿಗೆ ಸಹಿಸಂಗ್ರಹ ಚಳುವಳಿಯನ್ನು ಎಡಪಕ್ಷಗಳು ಕಳೆದ ಒಂದು ವರ್ಷದಿಂದ ನಡೆಸುತ್ತಿವೆ.

ಈ ಚಳುವಳಿಯಲ್ಲಿ ಸಂಗ್ರಹಿಸಿದ ಸಹಿಗಳುಳ್ಳ ಮನವಿ ಪತ್ರವನ್ನು ಪ್ರಧಾನ ಮಂತ್ರಿ ಕಚೇರಿಗೆ ತಲುಪಿಸಲಾಗಿದೆ. ಇದಕ್ಕೆ ಮೊದಲು ನಾಲ್ಕು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ ಕಾರಟ್(ಸಿಪಿಐ-ಎಂ), ಎಸ್.ಸುಧಾಕರ ರೆಡ್ಡಿ(ಸಿಪಿಐ), ದೇಬಬ್ರತ ಬಿಸ್ವಾಸ್(ಎಐಎಫ್‌ಬಿ) ಮತ್ತು ಟಿ ಜೆ.ಚಂದ್ರಚೂಡನ್(ಆರ್‌ಎಸ್‌ಪಿ) ಮತ್ತುಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸೀತಾರಾಂ ಯೆಚುರಿ, ಬೃಂದಾ ಕಾರಟ್, ರಾಜ್ಯಸಭೆಯಲ್ಲಿ ಸಿಪಿಐ ಗುಂಪಿನ ಮುಖ್ಯಸ್ಥರಾದ ಡಿ.ರಾಜ ಮತ್ತು ಆರ್‌ಎಸ್‌ಪಿ ಮುಖಂಡರಾದ ಅಬನಿ ರಾಯ್ ಇದ್ದ ನಿಯೋಗ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಮನವಿಯ ಒಂದು ಪ್ರತಿಯನ್ನು ಸಲ್ಲಿಸಿದರು.

2ಜಿ ಕೇಸನ್ನು ಧ್ವಂಸಗೊಳಿಸುವ ಪಿತೂರಿ?


2ಜಿ ತರಂಗಾಂತರ ಹಂಚಿಕೆ ಹಗರಣದ ತನಿಖೆ ನಡೆಸುತ್ತಿರುವ ಸಿಬಿಐನ ಒಬ್ಬ ಪ್ರಾಸಿಕ್ಯೂಟರ್ ಮೇಲೆಯೇ ತನಿಖೆ ನಡೆಸಿ ಆತನ ಮೇಲೆ ಆರೋಪಪತ್ರ ಸಲ್ಲಿಸಬೇಕಾಗಿ ಬಂದಿರುವ ವಿಷಯ ಈ ತನಿಖೆಯನ್ನೇ ವಿಫಲಗೊಳಿಸುವ ಪಿತೂರಿ ನಡೆದಿದೆಯೇ ಎಂಬ ಸಂದೇಹವನ್ನು ಬಲಪಡಿಸಿದೆ. ಈ ಪ್ರಾಸಿಕ್ಯೂಟರ್ ಈ ಹಗರಣದ ಒಂದು ಫಲಾನುಭವಿ ಕಂಪನಿ ಯುನಿಟೆಕ್‌ನ ಮುಖ್ಯಾಧಿಕಾರಿಯೊಂದಿಗೆ ನಡೆಸಿದ್ದರೆನ್ನಲಾದ ಮಾತುಕತೆಗಳ ವಿವರ ಈಗ ಲಭ್ಯವಾಗಿದೆ. ಅದರ ಪ್ರಕಾರ ಇನ್ನೊಂದು ಅಂತಹ ಕಂಪನಿ ಸ್ವಾನ್ ಟೆಲಿಕಾಂನ ಮುಖ್ಯಸ್ಥನೊಂದಿಗೂ ಸಂಪರ್ಕವಿರುವುದು ಬಯಲಿಗೆ ಬಂದಿದೆ. ಯಾವ ರೀತಿ ಈ ಕಂಪನಿಗಳು ಮಾಡಿರುವ ಉಲ್ಲಂಘನೆಗಳನ್ನು ಮುಚ್ಚಿಕೊಳ್ಳಬಹುದು ಎಂಬ ಸಲಹೆಯನ್ನು ಈ ಸಿಬಿಐ ಪ್ರಾಸಿಕ್ಯುಟರ್ ಆ ಕಂಪನಿಗಳ ಮುಖ್ಯಸ್ಥರಿಗೆ ಸಲಹೆ ಕೊಡುತ್ತಿದ್ದಾರಂತೆ.

ಇಷ್ಟೇ ಅಲ್ಲ, ಸುಪ್ರಿಂ ಕೋರ್ಟ್ ಅನರ್ಹ ಕಂಪನಿಗಳಿಗೆ 85 ಪರವಾನಿಗೆಗಳನ್ನು ತಪ್ಪಾಗಿ ಹೇಗೆ ಕೊಡಲಾಯಿತು ಎಂಬ ಬಗ್ಗೆ ತನಿಖೆ ನಡೆಸಲು ಸಿಬಿಐಗೆ ನಿರ್ದೇಶನ ನೀಡಿತ್ತು. ಸಿಎಜಿ ಪ್ರಕಾರ ಪರವಾನಿಗೆ ನೀಡಿಕೆಯ ನಿಯಮಗಳನ್ನು ಉಲ್ಲಂಘಿಸಿದ ಆರು ಕಂಪನಿಗಳಿಗೆ ಈ ಪರವಾನಿಗೆಗಳನ್ನು ನೀಡಲಾಗಿದೆ. ಆದರೆ ಸಿಬಿಐ ಆರೋಪ ಪತ್ರ ಸ್ವಾನ್ ಮತ್ತು ಯುನಿಟೆಕ್ ಗಳಿಗೆ ತನ್ನ ವೀಕ್ಷಣೆಗಳನ್ನು ಸೀಮಿತಗೊಳಿಸಿದೆ, ಲೂಪ್, ಅಲಿಯಂಸ್, ವಿಡಿಯೋಕೋನ್ ಮತ್ತು ಎಸ್‌ಟೆಲ್ ಮಾಡಿರುವ ಉಲ್ಲಂಘನೆಗಳನ್ನು ಉಪೇಕ್ಷಿಸಿದೆ ಎನ್ನಲಾಗಿದೆ.

ಅಂದರೆ ಸುಪ್ರಿಂ ಕೋರ್ಟಿನ ನೇರ ಉಸ್ತುವಾರಿಯಲ್ಲಿ ತನಿಖೆ ನಡೆಯುತ್ತಿದ್ದರೂ, ಸಿಬಿಐನ ದುರ್ಬಲ ಆರೋಪ ಪತ್ರಗಳು, ಕೆಲವು ಪ್ರಾಸಿಕ್ಯುಟರ್‌ಗಳ ಶಾಮೀಲು ಮತ್ತು ಸಾಕ್ಷಿಗಳ ಮೂಲಕ ಈ ಕೇಸಿಗೆ ವ್ಯಾಪಕ ಧಕ್ಕೆ ಬಂದಿದೆ ಎನ್ನಲಾಗಿದೆ.

ಈ ನಡುವೆ ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ ನಡೆಸಬೇಕಾದ 2ಜಿ ತರಂಗಾಂತರವನ್ನು ಹರಾಜಿನ ಮೂಲಕ ಹಂಚಿಕೆಯನ್ನು ಬುಡಮೇಲು ಮಾಡುವ ಪ್ರಯತ್ನವೂ ನಡೆದಿದೆ ಎಂದು 2ಜಿ ತರಂಗಾಂತರ ಮೊಕದ್ದಮೆಯಲ್ಲಿ ಸಹ-ಅರ್ಜಿದಾರರಾದ 'ಟೆಲಿಕಾಂ ವಾಚ್ಡಾಗ್'(ದೂರಸಂಚಾರ ಕಾವಲು ಸಂಸ್ಥೆ) ಆರೋಪಿಸಿದೆ.

ಖಾಸಗಿ ಟೆಲಿಕಾಂ ಉದ್ದಿಮೆಯ ಪೂರ್ವಯೋಜಿತ ಪಿತೂರಿಯಿದು, ತರಂಗಾಂತರ ಮೌಲ್ಯಮಾಪನಗಳನ್ನು ಒಟ್ಟು ಸೇರಿ ಕೆಳಕ್ಕೆ ಇಳಿಸುವ ಮತ್ತು ಹರಾಜು ಪ್ರಕ್ರಿಯೆಯೇ ನಿಷ್ಪ್ರಯೋಜಕ ಎಂದು ತೋರಿಸುವ ಪ್ರಯತ್ನ ನಡೆದಿದೆ. ಈ ಮೊದಲು ಹರಾಜು ಪ್ರಕ್ರಿಯೆ ನಿರೀಕ್ಷಿತ ಆದಾಯವನ್ನು ತಂದಿರಲಿಲ್ಲ, ಇದು ಯುಪಿಎ-2 ಸರಕಾರದ ಬಯಕೆ ಕೂಡ ಇರಬೇಕು ಎಂಬುದನ್ನು ಈ ಅಂಕಣದಲ್ಲಿ ಪರಿಣಿತರ ಅಭಿಪ್ರಾಯವನ್ನು ಉಲ್ಲೇಖಿಸಲಾಗಿತ್ತು. ಈ ಹರಾಜು ಕೂಡ ನಿಷ್ಫಲವಾಗುವಂತೆ ಉದ್ದಿಮೆ ಪ್ರಯತ್ನಿಸುತ್ತಿದೆ, ಇದು ಚೆನ್ನಾಗಿ ಯೋಜಿಸಿ ಮಾಡಿರುವ ಪಿತೂರಿ ಎಂದು ಈಗ ಕಾವಲು ಸಂಸ್ಥೆಯ ಕಾರ್ಯದರ್ಶಿ ಕೂಡ ಹೇಳುತ್ತಿದ್ದಾರೆ.



ವೇದರಾಜ ಎನ್.ಕೆ.

ಇದು ನಿಮಗೆ ಗೊತ್ತೇ?

- ಭಾರತದಲ್ಲಿ ಆಹಾರ ಬೆಲೆಗಳು ವಿಪರೀತ ಹೆಚ್ಚುತ್ತಿರಲು ಜಾಗತಿಕ ಆಹಾರ ಬೆಲೆಗಳು ಕಾರಣ ಎನ್ನುತ್ತದೆ. ಆದರೆ ಇದು ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನ. ಏಕೆಂದರೆ, 'ಮೂಡಿ ಬರುತ್ತಿರುವ ಆರ್ಥಿಕಗಳು' ಎಂದು ಆಗಾಗ ಹಣಕಾಸು ಬಂಡವಾಳಿಗರ ಪ್ರಶಂಸೆ ಗಿಟ್ಟಿಸುವ ದೇಶಗಳಲ್ಲಿ ಭಾರತದಲ್ಲಿಯೇ ಅತಿ ಹೆಚ್ಚು ಆಹಾರ ಹಣದುಬ್ಬರ, ಕಳೆದ ವರ್ಷ 11.7ಶೇ. 'ಬ್ರಿಕ್ಸ್' ಗುಂಪಿನ ಇತರ ದೇಶಗಳಾದ ರಶ್ಯಾದಲ್ಲಿ 6.54ಶೇ., ಬ್ರೆಝಿಲ್‌ನಲ್ಲಿ 6.15ಶೇ., ದಕ್ಷಿಣ ಆಫ್ರಿಕಾದಲ್ಲಿ 5.75ಶೇ. ಹಾಗೂ ಚೀನಾದಲ್ಲಿ 1.9ಶೇ.
- ಈ ವರ್ಷ ಜನವರಿ ವೇಳೆಗೆ ಈಗಾಗಲೇ ಅದು 11.88ಶೇ.ಕ್ಕೆ ಏರಿದೆ. ಆಹಾರಧಾನ್ಯಗಳ ಬೆಲೆಗಳಲ್ಲಿ 18ಶೇ., ತರಕಾರಿಗಳ ಬೆಲೆಗಳಲ್ಲಿ 28.4ಶೇ., ಬೇಳೆಕಾಳುಗಳಲ್ಲಿ 19ಶೇ. ಮತ್ತು ಸಕ್ಕರೆ ಬೆಲೆ 13ಶೇ. ಏರಿಕೆಯಾಗಿದೆ. ಇವು ಸಗಟು ಬೆಲೆಗಳಲ್ಲಿನ ಹೆಚ್ಚಳ, ಚಿಲ್ಲರೆ ಬೆಲೆಗಳಲ್ಲಿನ ಏರಿಕೆ ಇನ್ನೂ ಹೆಚ್ಚಿರುತ್ತದೆ. ಸಾಲದ್ದಕ್ಕೆ ಸಕ್ಕರೆ ಬೆಲೆಗಳ ಮೇಲಿನ ನಿಯಂತ್ರಣವನ್ನು ತೆಗೆಯುವ ಸಾಧ್ಯತೆ ನಿಚ್ಚಳವಾಗಿದೆ.
- ಯುಪಿಎ-2 ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ಪೆಟ್ರೋಲ್ ಬೆಲೆಗಳನ್ನು 19 ಬಾರಿ ಹೆಚ್ಚಿಸಲಾಗಿದೆ, ಒಟ್ಟು ಏರಿಕೆ 120ಶೇ., ಡೀಸೆಲ್ ಬೆಲೆಗಳಲ್ಲಿನ ಏರಿಕೆ 67ಶೇ.

ಪಡಿತರ ಚೀಟಿ ಪರದಾಟಕ್ಕೆ ....

ಪುಟ 3 ರಿಂದ

ಪಡೆಯಲಾಗುತ್ತಿದೆ ಎಂದು ಜನ ದೂರುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇಲ್ಲಿಯ ತಹಶಿಲ್ದಾರ್ ಕಚೇರಿಯಲ್ಲಿ ಪಡಿತರ ಚೀಟಿಗಳನ್ನು ವಿತರಣೆ ಮಾಡುವಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದೂ ಕೆಲ ಮಧ್ಯವರ್ತಿಗಳು ತಮ್ಮ ಬೆಂಬಲಿಗರಿಗೆ ಪಡಿತರ ಚೀಟಿಗಳನ್ನು ಕೊಡಿಸಿ ಅವರಿಂದ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಇಂತಹ ಅಕ್ರಮ ಪಡಿತರ ಚೀಟಿಗಳನ್ನು ಪಡೆಯಲು ಕಚೇರಿಯ ಹಿಂಭಾಗದ ಕಿಟಕಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎನ್ನಲಾಗಿದೆ. ಇದು ಚಿಂತಾಮಣಿಗೆ ಮಾತ್ರ ಸೀಮಿತವಾಗಿರದೆ ಇತರ ಕಡೆಗಳಲ್ಲಿಯೂ ನಡೆಯುತ್ತಿರುವ ಸಾಮಾನ್ಯ ವಿದ್ಯಮಾನ ಆಗಿರಬಹುದು.

ಪಡಿತರ ವ್ಯವಸ್ಥೆಯಲ್ಲಿ 'ಟಾರ್ಗೆಟ್' ಪದ್ಧತಿ ಇರುವವರೆಗೂ ಇಂತಹ ಅಕ್ರಮಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಒಂದು ಜಿಲ್ಲೆಗೆ, ಒಂದು ತಾಲೂಕಿಗೆ ಇಂತಿಷ್ಟು ಚೀಟಿಗಳೆಂದು ನಿಗಧಿಪಡಿಸುವುದರಿಂದ ಅರ್ಹರಿಗೆ ಪಡಿತರ ಚೀಟಿಗಳು ಸಿಗುವುದಿಲ್ಲ. ಯಾವುದೇ ಷರತ್ತನ್ನು ವಿಧಿಸದೆ ಎಲ್ಲರಿಗೂ ಪಡಿತರ ಚೀಟಿಗಳನ್ನು ವಿತರಿಸಿದರೆ ಮಾತ್ರ ಅರ್ಹರಿಗೆ ತಪ್ಪದೆ ಪಡಿತರ ಚೀಟಿಗಳು ಸಿಗುವಂತಾಗುತ್ತದೆ. ಅದನ್ನೇ ಪಡಿತರ ಪದ್ಧತಿಯ ಸಾರ್ವತ್ರೀಕರಣ ಎನ್ನುವುದು. ಎಪಿಎಲ್-ಬಿಪಿಎಲ್ ಎಂಬ ಬೇಧವನ್ನೂ ಮಾಡದೆ ಎಲ್ಲರಿಗೂ ಒಂದೇ ರೀತಿಯ ಪಡಿತರ ಚೀಟಿಗಳನ್ನು ವಿತರಿಸುವ ಮೂಲಕ ಮಾತ್ರ ಬಡವರು ಪಡಿತರ ವಂಚಿತರಾಗುವುದನ್ನು ತಡೆಯಬಹುದು. ಪಡಿತರ ಚೀಟಿ ಗುರುತಿನ ಚೀಟಿಯೂ ವಾಸಸ್ಥಳದ ಮಾಹಿತಿ ಚೀಟಿಯೂ ಆಗಿರುವುದರಿಂದ ಪಡಿತರ ಚೀಟಿಗೆ ಎಲ್ಲಿಲ್ಲದ ಮಹತ್ವವಿದೆ. ಯಾವುದೇ ಕೆಲಸಕ್ಕೆ ಹೋದರೂ ಪಡಿತರ ಚೀಟಿ ಕೇಳುತ್ತಾರೆ. ಹೀಗಾಗಿ ಈ ಚೀಟಿ ಎಲ್ಲರಿಗೂ ಬೇಕೆಬೇಕು. ಬಡವರ ಪಾಲಿಗೆ ಜನಪ್ರತಿನಿಧಿಗಳು ಸತ್ತೇ ಹೋಗಿದ್ದಾರೆ. ಜನರ ದುಡ್ಡಿನಿಂದ ಸಂಬಳ ಪಡೆಯುವ ಅಧಿಕಾರಿಗಳಾದರೂ ಜನರ ಸಂಕಷ್ಟಕ್ಕೆ ಸ್ಪಂದಿಸಬಾರದೆ?

ಸರ್ವೇಜನೋ ಸುಖಿನೊ ಭವಂತು.

ತಾವು ತಮ್ಮವರುಗಳ ಹಿತ ಕಾಯಲೆಂದೆ
ಹುಟ್ಟಿರುವ ಆ ಕಪಟಿ ಮಂದಿಗಳ ಕಂಡೆ.
ಬಾಯಿಂದ ಸರ್ವೇಜನೋ ಸುಖಿನೋ ಭವಂತು
ಅನ್ನುತ್ತ ಸುಲಿದುಂಡು ತೇಗುವರು ಕುಂತು.

ಬೆಲೆಯೇರಿಕೆ

ಆಹಾರ ಧಾನ್ಯವನು ಕತ್ತಲೆಗೆ ಸರಿಸಿ
ಅಂಜದಿರಿ ಕೃತ್ರಿಮ ಅಭಾವ ಸೃಷ್ಟಿಸಿ
ಬೆಲೆಯನ್ನು ನೀವಿನ್ನು ಬೇಕಷ್ಟು ಏರಿಸಿ
ನಮ್ಮ ಪಾಲನ್ನು ಮಾತ್ರ ಕಾದಿರಿಸಿ ಎಣಿಸಿ.

– ವಿಡಂಬಾರಿ

ಸಮುದಾಯ ಐದನೇ ರಾಜ್ಯ ಸಮ್ಮೇಳನ

ಪುಟ 6 ರಿಂದ

ಪ್ರೊ.ಹುಡಗಿ, ಅಚ್ಯುತ, ಬಡಿಗೇರ, ವಿಮಲ ಇರುವ ಅಧ್ಯಕ್ಷೀಯ ಮಂಡಳಿ ನಡೆಸಿಕೊಟ್ಟಿತು. ಪ್ರಧಾನ ಕಾರ್ಯದರ್ಶಿ ಟಿ. ಸುರೇಂದ್ರ ರಾವ್‌ರವರು ಇಂದಿನ ಸಾಂಸ್ಕೃತಿಕ ಪರಿಸ್ಥಿತಿಯ ವಿವರ, ಮುಂಬರುವ ಅವಧಿಯಲ್ಲಿ ಸಮುದಾಯದ ಕರ್ತವ್ಯಗಳನ್ನೂ ಗುರುತಿಸುವುದು, ಕಳೆದ ಸಮ್ಮೇಳನದ ನಂತರ ಘಟಕಗಳು ಮತ್ತು ರಾಜ್ಯ ಕೇಂದ್ರ ಹಮ್ಮಿಕೊಂಡ ಚಟುವಟಿಕೆಗಳ ವರದಿ, ಮತ್ತು ಅವುಗಳ ವಿಮರ್ಶೆ, ಸಂಘಟನಾ ಪರಿಸ್ಥಿತಿಯ ಪರಾಮರ್ಶೆ, ಹಿಂದಿನ ಅನುಭವದ ಆಧಾರದ ಮೇಲೆ ಮುಂದಿನ 2–3 ವರ್ಷಗಳ ಯೋಜನೆ ಹೀಗೆ ನಾಲ್ಕು ಭಾಗಗಳ ಸಮ್ಮೇಳನದ ಕರಡು ವರದಿಯನ್ನು ಚರ್ಚೆಗೆ ಮಂಡಿಸಿದರು.

ಈ ಯೋಜನೆಯಲ್ಲಿ ಈಗಾಗಲೇ ಸಮುದಾಯದ ಘಟಕಗಳ ವಿಸ್ತರಣೆ, ಘಟಕಗಳು ಪ್ರಧಾನವಾಗಿ ಮಾಡುತ್ತಾ ಬಂದಿರುವ ರಂಗ ಸಂಬಂಧಿ ಚಟುವಟಿಕೆ, ಸಾಂಸ್ಕೃತಿಕ ವಿದ್ಯಮಾನಗಳಿಗೆ ಸ್ಪಂದನ, ಮುಂತಾದವುಗಳಲ್ಲಿ ವಿಸ್ತರಣೆ ಮತ್ತು ನಿರ್ದಿಷ್ಟ ಯೋಜನೆ, ಈಗಾಗಲೇ ಕೆಲವು ಘಟಕಗಳಲ್ಲಿ ಆರಂಭವಾಗಿರುವ ಸಾಹಿತ್ಯ ಮತ್ತು ಚಿತ್ರ ಸಮುದಾಯದ ಚಟುವಟಿಕೆಗಳ ಮಟ್ಟವನ್ನು 'ಸಿನೆಮಾ ನೂರು' ಕಾರ್ಯಕ್ರಮದ ಮೂಲಕ ಏರಿಸುವುದು ಮತ್ತು ರಾಜ್ಯದಾದ್ಯಂತ ವಿಸ್ತರಿಸುವ ಯೋಜನೆಯೂ ಸೇರಿತ್ತು.

ರಾಜ್ಯ ಮಟ್ಟದ ರೆಪರ್ಟರಿ ಸ್ಥಾಪಿಸುವುದು, ದಶಕದ ಸಾಹಿತ್ಯ ಅವಲೋಕನ ಪ್ರಾದೇಶಿಕ ಸಮಾವೇಶ ಯೋಜನೆಯ ಕೆಲವು ಪ್ರಮುಖ ಅಂಶಗಳಾಗಿದ್ದವು.

ಮೊದಲ ದಿನ ಸಂಜೆ ವೈವಿಧ್ಯಮಯ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು.

ಎರಡನೇ ದಿನ 30ಕ್ಕೂ ಹೆಚ್ಚು ಪ್ರತಿನಿಧಿಗಳು ಕರಡು ವರದಿಯ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. ಬಿಚ್ಚು ಮನಸ್ಸಿನ ಪ್ರಜಾಸತ್ತಾತ್ಮಕ ಚರ್ಚೆ ನಡೆಯಿತು. ಕರಡು ವರದಿ, 8 ನಿರ್ಣಯಗಳನ್ನು ಹಾಗೂ ಲೆಕ್ಕಪತ್ರವನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು.

ಸಂವಿಧಾನ ತಿದ್ದುಪಡಿ

ಹೊಸ ಸನ್ನಿವೇಶದ ಅಗತ್ಯಗಳಿಗೆ ಸ್ಪಂದಿಸಲು ಸಮುದಾಯದ ಸಂವಿಧಾನದಲ್ಲಿ ಕೆಲವು ತಿದ್ದುಪಡಿಗಳನ್ನು ರಾಜ್ಯ ಸಮಿತಿ ಇದಕ್ಕಾಗಿ ನೇಮಿಸಿದ್ದ ಒಂದು ಸಮಿತಿ ಶಿಫಾರಸು ಮಾಡಿತ್ತು. ಅವುಗಳನ್ನು ರಾಜ್ಯ ಸಮಿತಿ ಪರಿಶೀಲಿಸಿದ ನಂತರ ಕೆಲವು ಮಾರ್ಪಾಡುಗಳೊಂದಿಗೆ ಅಂಗೀಕರಿಸಿತ್ತು. ಈ ತಿದ್ದುಪಡಿಗಳನ್ನೂ ಸಮ್ಮೇಳನದಲ್ಲಿ ಮಂಡಿಸಲಾಯಿತು. ಈ ತಿದ್ದುಪಡಿಗಳನ್ನೂ ಚರ್ಚೆಯ ನಂತರ ಸಮ್ಮೇಳನ ಭಾರೀ ಬಹುಮತದಿಂದ ಅಂಗೀಕರಿಸಿತು. 38 ಸದಸ್ಯರ ರಾಜ್ಯಸಮಿತಿಯನ್ನು ಸಮ್ಮೇಳನ ಆರಿಸಿತು. ಸಮ್ಮೇಳನ ಚುನಾಯಿಸಿದ ಹೊಸ ರಾಜ್ಯ ಸಮಿತಿ ಹೊಸ ಪದಾಧಿಕಾರಿಗಳನ್ನು ಚುನಾಯಿಸಿತು. ಪ್ರೊ.ಆರ್.ಕೆ. ಹುಡಗಿ ಮತ್ತು ಟಿ. ಸುರೇಂದ್ರ ರಾವ್ ಅವರು ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಪುನರಾಯ್ಕೆಯಾದರು.

ಸಮಾರೋಪದಲ್ಲಿ ಮಾತನಾಡುತ್ತಾ ಕೊಂಕಣಿ ಅಕಾಡೆಮಿ ಮಾಜಿ ಅಧ್ಯಕ್ಷರಾದ ಎರಿಕ್ ರೋಜಾರಿಯೊ ಇಂದಿನ ಪರಿಸ್ಥಿತಿಯಲ್ಲಿ ಸಮುದಾಯವನ್ನು ರಾಜ್ಯದಾದ್ಯಂತ ಮತ್ತು ವಿಶೇಷವಾಗಿ ಮಂಗಳೂರಿನಲ್ಲಿ ಬಲಪಡಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದರು. ಪ್ರೊ.ಆರ್.ಕೆ.ಹುಡಗಿಯವರು ಸಮುದಾಯದ ಮುಂದೆ ಇರುವ ಕರ್ತವ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು, ಈಗಿನ ಕೊರತೆಗಳನ್ನು ನೀಗಿಸಿ ಸಂಘಟನೆಯನ್ನು ಬಲಪಡಿಸಲು ಕಳಕಳಿಯ ಮನವಿ ಮಾಡಿದರು.

ಸಮ್ಮೇಳನಕ್ಕೆ ನೆರವಾದ ಸ್ವಯಂ ಸೇವಕರಿಗೆ ನೆನಪಿನ ಕಾಣಿಕೆ ಅರ್ಪಿಸಿ ಎಲ್ಲರನ್ನು ವಂದಿಸಲಾಯಿತು. ಸಮುದಾಯ ಗೀತೆ 'ಎಲ್ಲಿಂದ ಬಂದಿರೆಂದು ಕೇಳತೇವ ನಾವು.. ..' ಹಾಡುವುದರೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ರಾಜ್ಯ ಮಟ್ಟದ ರೆಪರ್ಟರಿ ರಚನೆ ಹಾಗೂ ಇತರ ನಿರ್ಣಯಗಳು

- ಕೋಮುವಾದ ವಿರೋಧಿಸಿ,
- ಮಡೆಸ್ನಾನ–ಪಂಕ್ತಿಭೇಧ ಮತ್ತು ಇತರ ಮೂಢನಂಬಿಕೆ ಕಂದಾಚಾರಗಳ ವಿರುದ್ಧ ಹೋರಾಟಕ್ಕೆ ಕರೆ ಕೊಟ್ಟು,
- ತಕ್ಷಣ ನವೀನ್ ಸೂರಿಂಜೆ ಬಿಡುಗಡೆಗೆ ಒತ್ತಾಯಿಸಿ,
- ಮಹಿಳೆಯರ ಮೇಲೆ ಮುಂದುವರೆಯುತ್ತಿರುವ ದೌರ್ಜನ್ಯಗಳನ್ನು ಖಂಡಿಸಿ,
- ಸಾಹಿತ್ಯ ಅಕಾಡೆಮಿ ರಚನೆ ಮಾಡಬೇಕೆಂದು ಆಗ್ರಹಿಸಿ,
- ರಂಗಾಯಣದ ಸ್ವಾಯತ್ತತೆ ಮೇಲೆ ದಾಳಿ ಖಂಡಿಸಿ,
- ಟಿಪ್ಪು ಸುಲ್ತಾನ್ ವಿಶ್ವವಿದ್ಯಾಲಯ ಸ್ಥಾಪನೆಗೆ ಬೆಂಬಲಿಸಿ,
- ರಾಜ್ಯ ಮಟ್ಟದ ರೆಪರ್ಟರಿ ರಚಿಸಲು

ಮಂಗಳೂರು ವಿ.ವಿ. ಮತ್ತು ಮಣಿಪಾಲದಲ್ಲಿ ಪ್ರೊ.ಐಜಾಜ್

ಅಂತರರಾಷ್ಟ್ರೀಯ ಖ್ಯಾತಿಯ ಚಿಂತಕ ಪ್ರೊ. ಐಜಾಜ್ ಅಹ್ಮದ್ ಮಂಗಳೂರಿಗೆ ಬರುತ್ತಾರೆ ಎಂದು ತಿಳಿಯುತ್ತಲೇ ಇಲ್ಲಿನ ಅಕಾಡೆಮಿಕ್ ಮತ್ತು ಬುದ್ಧಿಜೀವಿ ವಲಯಗಳಲ್ಲಿ ವಿದ್ಯುತ್ ಸಂಚಾರವಾಯಿತು. ಅವರ ಇನ್ನಷ್ಟು ಸಭೆಗಳನ್ನು ಸಂಘಟಿಸಲು ಸಂಸ್ಥೆಗಳು ಮುಂದಾದವು. ಮಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಆಹ್ವಾನದ ಮೇರೆಗೆ ಅವರು ವಿ.ವಿ.ಯಲ್ಲಿ ಫೆ. 18ರ ಬೆಳಿಗ್ಗೆ 'ಪೋಸ್ಟ್ ಮಾಡರ್ನಿಸಂ' ಮೇಲೆ ಪ್ರೊ. ಅಹ್ಮದ್ ಉಪನ್ಯಾಸ ನೀಡಿದರು. ಈ ಉಪನ್ಯಾಸಕ್ಕೆ ವಿ.ವಿ.ಯ ಅಧ್ಯಾಪಕ ವರ್ಗ, ಸಂಶೋಧಕರು ಮತ್ತು ವಿದ್ಯಾರ್ಥಿಗಳಲ್ಲದೆ ಮಂಗಳೂರಿನ ಹಲವು ಆಸಕ್ತರು ಸೇರಿದಂತೆ ಸುಮಾರು 300 ಜನ ಸೇರಿದ್ದರು. ಉಪನ್ಯಾಸದ ನಂತರ ಉತ್ತಮ ಸಂವಾದವೂ ನಡೆಯಿತು.

ಉಡುಪಿಯ ಬಳಿಯ ಮಣಿಪಾಲದ 'ಮಣಿಪಾಲ್ ಇನ್ಸ್‌ಟಿಟ್ಯೂಟ್ ಆಫ್ ಕಮ್ಯುನಿಕೇಶನ್ಸ್' ಆಹ್ವಾನದ ಮೇರೆಗೆ ಆ ಸಂಸ್ಥೆಯ ಸಭಾಂಗಣದಲ್ಲಿ ಫೆ. 18ರ ಸಂಜೆ 'ಅರಬ್ ಸ್ಪ್ರಿಂಗ್ ಅಂಡ್ ಒಕ್ಯುಪೈ ವಾಲ್ ಸ್ಟ್ರೀಟ್' ಎಂಬ ವಿಷಯದ ಮೇಲೆ ಪ್ರೊ. ಅಹ್ಮದ್ ಉಪನ್ಯಾಸ ನೀಡಿದರು. ಈ ಸಭೆಯಲ್ಲೂ ಇನ್ಸ್‌ಟಿಟ್ಯೂಟ್‌ನ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳಲ್ಲದೆ ಉಡುಪಿ–ಮಣಿಪಾಲಗಳ ಹಲವು ಆಸಕ್ತರು ಸೇರಿದಂತೆ ಸುಮಾರು 400 ಜನ ಸೇರಿದ್ದರು. ಎರಡೂ ಸಭೆಗಳಲ್ಲಿ ಸಭಾಂಗಣ ತುಂಬಿ, ಹಲವು ಆಸಕ್ತರು ಹೊರಗೆ ನಿಂತೇ ಕೇಳುವಂತಾಯಿತು.

ಎರಡು ಭಾರತಗಳ ನಡುವಿನ ....

ಪುಟ 7 ರಿಂದ

ಪ್ರಮಾಣ ಇನ್ನೂ ಜಿಡಿಪಿಯ 1.2ಶೇ.ದಲ್ಲೇ ಸ್ಥಗಿತವಾಗಿದೆ. ಆರೋಗ್ಯವಲಯದ ಖಾಸಗೀಕರಣದಿಂದಾಗಿ ಆರೋಗ್ಯದ ಮೇಲೆ ಖಾಸಗಿ ಖರ್ಚಿನ ಪ್ರಮಾಣ ಜಿಡಿಪಿಯ 2.9ಶೇ.ಕ್ಕೇರಿದೆ, ಅಂದರೆ ಸಾರ್ವಜನಿಕ ಖರ್ಚಿನ ಇಮ್ಮಡಿಗಿಂತಲೂ ಹೆಚ್ಚು. ಇದರಿಂದ ಔಷಧಿಗಳು ಮತ್ತು ಆರೋಗ್ಯಪಾಲನೆಯ ಖರ್ಚು ವಿಪರೀತವಾಗಿ ಹೆಚ್ಚಿ, ಪರಿಣಾಮವಾಗಿ ನಮ್ಮ ಇನ್ನೂ 3ಕೋಟಿ ಜನಗಳು ಪ್ರತಿವರ್ಷ ಬಡತನದ ರೇಖೆಯ ಕೆಳಗೆ ತಳ್ಳಲ್ಪಡುತ್ತಿದ್ದಾರೆ.

ಹಣಕಾಸು ಕ್ರೋಡೀಕರಣದ ಗಿರ

ಈ ಸರ್ವೆ ಹಣಕಾಸು ಕ್ರೋಡೀಕರಣದ ಅಗತ್ಯದ ಬಗ್ಗೆ ಮನವರಿಕೆ ಮಾಡಿಸಲು ಶ್ರಮಪಡುತ್ತದೆ, ಅದೂ ಆರ್ಥಿಕ ನಿಧಾನಗತಿಯಿಂದಾಗಿ ತೆರಿಗೆ ಆದಾಯ ಇಳಿಯುತ್ತಿರುವಾಗ. ಪ್ರಸಕ್ತ ಹಣಕಾಸು ವರ್ಷದ ಮೊದಲ ಒಂಭತ್ತು ತಿಂಗಳಲ್ಲಿ ಕಾರ್ಪೊರೇಟ್ ತೆರಿಗೆ ಆದಾಯ 4.9ಶೇ.ದಷ್ಟು, ಕಸ್ಟಮ್ಸ್ ಸುಂಕ 18.9ಶೇ.ದಷ್ಟು ಮತ್ತು ಕೇಂದ್ರೀಯ ಅಬಕಾರಿ ಸುಂಕ 16ಶೇ.ದಷ್ಟು ಇಳಿದಿದೆ ಎಂಬುದು ಅದರ ಅಂದಾಜು. ಆದರೆ ವೈಯಕ್ತಿಕ ಆದಾಯ ತೆರಿಗೆ 7.6ಶೇ. ಮತ್ತು ಸೇವಾ ತೆರಿಗೆ 5.9ಶೇ.ದಷ್ಟು ಹೆಚ್ಚಿದೆ. ಇದು ಶ್ರೀಮಂತರು ಮತ್ತು ಕಾರ್ಪೊರೇಟ್ ವಲಯ ಆರ್ಥಿಕ ನಿಧಾನಗತಿ ಆಂತರಿಕ ಬೇಡಿಕೆಗಳು ಕುಗ್ಗಿರುವುದರಿಂದ ಕಡಿಮೆ ತೆರಿಗೆಗಳನ್ನು ತೆರುತ್ತಿದೆ, ಆದರೆ ಸಂಬಳದಾರ ಮತ್ತು ಮಧ್ಯಮ ವರ್ಗಗಳು ಹೆಚ್ಚು ತೆರಿಗೆ ತೆರುತ್ತಿವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ತೆರಿಗೆ ಮತ್ತು ಜಿಡಿಪಿ ನಡುವಣ ಅನುಪಾತ 2007–08ರಲ್ಲಿ 11.9ಶೇ. ತಲುಪಿತ್ತು, ಅಲ್ಲಿಂದ ಅದು ಸತತವಾಗಿ ಇಳಿಮುಖಗೊಂಡಿದೆ. 2009–10ರಲ್ಲಿ 9.6ಶೇ.ಕ್ಕೆ ಇಳಿಯಿತು, 2011–12ರಲ್ಲಿ ತುಸು ಹೆಚ್ಚಿ 9.9ಶೇ. ಆಯಿತು, 2012–13ರಲ್ಲಿ ಇದು ಬಹಳ ಕಡಿಮೆಯಿರುವ ಸಾಧ್ಯತೆಯಿದೆ. ತೆರಿಗೆ ಆಧಾರವನ್ನು ವಿಸ್ತರಿಸಿ ತೆರಿಗೆ : ಜಿಡಿಪಿ ಅನುಪಾತವನ್ನು ಏರಿಸುವ ಮೂಲಕ ಹಣಕಾಸು ಕ್ರೋಢೀಕರಣವನ್ನು ಸಾಧಿಸಬಹುದು. ಸರ್ವೆ ಈ ಅಂಶವನ್ನು ಒಪ್ಪಿಕೊಳ್ಳುತ್ತದೆ, ಆದರೆ "ಹಣಕಾಸು ಕ್ರೋಢೀಕರಣಕ್ಕೆ ಮಿತಿಯಿಲ್ಲದ ಸಬ್ಸಿಡಿಗಳು ಮುಂತಾದ ಬದ್ಧತೆಗಳು ವಿಶೇಷವಾಗಿ ಸಮಸ್ಯೆಗಳಾಗಿವೆ" ಎಂದು ಟಿಪ್ಪಣಿ ಮಾಡುತ್ತದೆ. ಅಂದರೆ, ಹಣಕಾಸು ಕ್ರೋಢೀಕರಣವನ್ನು ಸಬ್ಸಿಡಿಗಳನ್ನು ತೀವ್ರವಾಗಿ ಕಡಿತ ಮಾಡುವ ಮೂಲಕ ಸಾಧಿಸಬೇಕು ಎಂದು ಅದರ ಭಾವನೆ. ಸಬ್ಸಿಡಿಗಳ ಮೊತ್ತ ರೂ.1,66,824 ಕೋಟಿ ಎಂಬುದು ಅದರ ಅಂದಾಜು.

2012–13ರ ಹಣಕಾಸು ಕೊರತೆ ರೂ.5,13,590 ಕೋಟಿ ಎಂದು ಅಂದಾಜು ಮಾಡಲಾಗಿದೆ. ಈ ಅಂಕಣದಲ್ಲಿ ಮತ್ತೆ–ಮತ್ತೆ ಹೇಳಿರುವಂತೆ, 2012–13ರ ಬಜೆಟ್ ದಸ್ತಾವೇಜುಗಳ ಪ್ರಕಾರ ಸರಕಾರ ಬಿಟ್ಟುಕೊಟ್ಟ ತೆರಿಗೆ ಆದಾಯಗಳ ಮೊತ್ತ ರೂ.5.28 ಲಕ್ಷ ಕೋಟಿ. ಅಂದರೆ, ಮೊದಲನೆಯದಾಗಿ, ಹಣಕಾಸು ಕೊರತೆ ಉಂಟಾಗಿರುವುದಾದರೂ ಯಾತಕ್ಕೆ ಎಂಬುದನ್ನು ಇಲ್ಲಿಯೇ ಸ್ಪಷ್ಟವಾಗಿ ಕಾಣಬಹುದು. ದೊಡ್ಡ ಹಣಕಾಸು ಕೊರತೆಗಳನ್ನು ನಿರ್ಮಿಸುವ ಈ ಮೂಲದ ಮೇಲೆ ಗುರಿಯಿಡುವ ಬದಲು, ಸರಕಾರ ಬಡವರ ಅಲ್ಪ ಸಬ್ಸಿಡಿಗಳ ಮೇಲೆಯೇ ಗುರಿಯಿಡುವುದನ್ನೇ ಮುಂದುವರೆಸಿದೆ. ಇದು ಬಡವರನ್ನು ಇನ್ನಷ್ಟು ಬಡವರಾಗಿಸುತ್ತದೆ, ಮತ್ತು ನಮ್ಮ ಆರ್ಥಿಕದಲ್ಲಿನ ಆಂತರಿಕ ಬೇಡಿಕೆಯನ್ನು ಇನ್ನಷ್ಟು ಹಿಂಡಿ ಹಾಕುತ್ತದೆ, ನಮ್ಮ ಆರ್ಥಿಕವನ್ನು ಇನ್ನಷ್ಟು ನಿಧಾನಗೊಳಿಸುತ್ತದೆ.

ಈ ಆರ್ಥಿಕ ಸರ್ವೇಕ್ಷಣೆಯಲ್ಲಿನ ನಿಲುವುಗಳೇ ಮುಂದುವರೆದರೆ, ನಮ್ಮ ಜನಗಳ ಮೇಲೆ ನಿರ್ದಯ ಆರ್ಥಿಕ ದಾಳಿಗಳು ಇನ್ನಷ್ಟು ಹೆಚ್ಚಿ ಎರಡು ಭಾರತಗಳ ನಡುವಿನ ಕಂದರ ಇನ್ನಷ್ಟು ಅಗಲಗೊಳ್ಳುತ್ತದೆ. ಆದ್ದರಿಂದ ಒಂದು ಉತ್ತಮ ಭಾರತವನ್ನು ಕಟ್ಟಬೇಕಾದರೆ, ನಮ್ಮ ವಿಶಾಲ ಜನಸಮೂಹಗಳಿಗೆ ಉತ್ತಮ ಬದುಕು ದೊರಕುವಂತಾಗಬೇಕಾದರೆ, ಒಂದು ಪರ್ಯಾಯ ಧೋರಣೆಯ ದಿಕ್ಕು ಹಿಡಿಯುವುದು ಅತ್ಯಗತ್ಯ. ಸಿಪಿಐ(ಎಂ) ಈಗ ಕೈಗೊಂಡಿರುವ 'ಸಂಘರ್ಷ ಸಂದೇಶ ಜಾಥಾ'ಗಳ ಗುರಿ ಇದೇ ಬಗೆಯ ಪರ್ಯಾಯವನ್ನು ಮುಂದಿಡುವುದು.

'ಪ್ರೀತಿಯ ಗಾಳಿ ಬೀಸುತಿದೆ...'

ಲಿಂಗರಾಜು

"ಚಂದದ ಗೂಡೊಂದನು ಕಟ್ಟಿ ಪ್ರಿಯತಮೆಯ ಮೇಲಿನ ಪ್ರೀತಿಯನ್ನು ಹಂಬಲಿಸಿ, ಆ ಪ್ರೀತಿಯನ್ನು ಒಲಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಮಾಡುತ್ತಾನೆ ಆತ. ಪ್ರಿಯಕರನ ಪರಿಪರಿಯ ಪ್ರೀತಿಯ ನಿವೇದನೆಗೆ ಧಿಡೀರನೆ ಒಪ್ಪಿಗೆಯನ್ನೂ ಸೂಚಿಸದೆ, ಗೂಡು ಚನ್ನಾಗಿದೆಯೇ, ಇಲ್ಲವೇ ಎಂದು ಪರೀಕ್ಷಿಸಿ, ಪ್ರೇಮ ಪರೀಕ್ಷೆಗೆ ಒಡ್ಡಿ, ಕೊನೆಗೂ ಏಳು ದಿನಗಳ ನಂತರ ಒಪ್ಪಿ, ಆಕೆ ಪ್ರಿಯಕರನ ಆ ಚಂದದ ಗೂಡು ಸೇರುತ್ತಾಳೆ."

ಇದು ಯಾವುದೋ ಸಿನಿಮಾದ ಕಥೆ ಎಂದು ಕೊಂಡಿರಾ......!? ಖಂಡಿತ ಅಲ್ಲ! ಟೇಲರ್ ಬರ್ಡ್ ಎಂಬ ಪಕ್ಷಿ ತನ್ನ ಪ್ರಿಯತಮೆಯನ್ನು ಒಲಿಸಿಕೊಳ್ಳುವ ವಿಧಾನವಂತೆ. ಯಕಶ್ಚಿತ್ ಒಂದು ಹಕ್ಕಿ, ಪ್ರೀತಿಗಾಗಿ ಈ ರೀತಿ ಹಂಬಲಿಸುವಾಗ, ಪ್ರಕೃತಿಯನ್ನೇ ಪಳಗಿಸಿ, ವಿಜ್ಞಾನ– ತಂತ್ರಜ್ಞಾನದ ನಾಗಾಲೋಟದಲ್ಲಿ ಓಡುತ್ತಿರುವ ಮನುಷ್ಯ, ಪ್ರೀತಿಯನ್ನು ಹಂಬಲಿಸುವುದು ತಪ್ಪೆಂದು ಕಿರುಚುವವರಿಗೆ ಏನನ್ನಬೇಕು? ಶ್ರೀರಾಮ ಸೇನೆ ಮುತಾಲಿಕ್ ಈ ಟೇಲರ್ ಬರ್ಡ್‌ಗಿಂತಲೂ ಕಡೆಯಾದನೇ.........? ಒಂದು ಹುಡುಗ – ಹುಡುಗಿ ಒಬ್ಬರನೊಬ್ಬರು ಮನಸಾರೆ ಪ್ರೀತಿಸಿ ಬಾಳ ಸಂಗಾತಿಗಳಾಗುವುದು ಮಹಾ ಅಫರಾಧವೇ? ಪಕೃತಿ ಸಹಜವಾದ ಪ್ರೀತಿಯನ್ನೇ ವಿರೋಧಿಸುವವರು ಮನುಷ್ಯರಾಗಿರಲು ಸಾಧ್ಯವೇ?

ಪ್ರೀತಿಗೆ ಜಾತಿ, ಧರ್ಮ, ಭಾಷೆ, ಗಡಿ ಅಂತಸ್ತು, ಯಾವುದೂ ಇಲ್ಲ. ನಮ್ಮ ಭಾರತೀಯ ಸಮಾಜ ಸಾಮಾಜಿಕ ಅಸಮಾನತೆಗಳಿಂದ ಕೂಡಿದ ವ್ಯವಸ್ಥೆ. ಜಾತಿ, ಧರ್ಮ ಎಂಬ ಸಂಕೋಲೆಗಳ ಸುಳಿಯಲ್ಲಿ ಏನನ್ನೂ ಅರಿಯದ ಮುಗ್ಧ ಪ್ರೀತಿ ನರಳಿ ಒದ್ದಾಡುತ್ತಿದೆ. ಸಂಸ್ಕೃತಿ ವಕ್ತಾರರೆನಿಸಿಕೊಂಡವರು ಸ್ವಚ್ಛಂದವಾಗಿ ವಿಹರಿಸಬೇಕಿದ್ದ ಪ್ರೀತಿಯನ್ನು ಪಂಜರದ ಗಿಳಿಯನ್ನಾಗಿಸಿದ್ದಾರೆ. ಪ್ರೀತಿಸುವವರು ಹಾಗೂ ಪ್ರೀತಿಸಿ ಮದುವೆಯಾದವರು ಮುಕ್ತವಾಗಿ ಬದುಕಲಾರದ ಪರಿಸ್ಥಿತಿ ಇದೆ. ಪ್ರೀತಿಸಿ ಅಂತರ್ಜಾತಿ ಮದುವೆಯಾದ ಕಾರಣಕ್ಕೆ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಒಂದು ಊರಿನಲ್ಲಿ ದಲಿತರ ಕೇರಿಯೇ ಬೆಂಕಿಗಾಹುತಿಯಾಗಬೇಕಾಯಿತು.

ಪ್ರೀತಿಯನ್ನು ವಿರೋಧಿಸುವವರು ನಮ್ಮ ಸಮಾಜದ ಈ ಶ್ರೇಣೀಕೃತ ವ್ಯವಸ್ಥೆಯನ್ನು ಮುಂದುವರಸಿಕೊಂಡು ಹೋಗಲು ಬಯಸುವವರೇ ಆಗಿದ್ದಾರೆ. ವ್ಯವಸ್ಥೆಯಲ್ಲಿನ ಜಾತಿ ತಾರತಮ್ಯ, ಅಸ್ಪೃಷ್ಯತೆ, ವರದಕ್ಷಿಣೆ, ಪುರುಷ ಪ್ರಾಧಾನ್ಯತೆ, (ಹೆಣ್ಣು ಮಕ್ಕಳ ಆಯ್ಕೆಯ ಹಕ್ಕಿನ ನಿರಾಕರಣೆ) ದುಂದುವೆಚ್ಚ, ಮೌಢ್ಯ, ಕಂದಾಚಾರ, ಇತ್ಯಾದಿಗಳನ್ನು ಪೋಷಿಸಿಕೊಂಡು ಹಾಗೂ ರಕ್ಷಿಸಿಕೊಂಡು ಬರಲು ಟೊಂಕ ಕಟ್ಟಿ ನಿಂತಿದ್ದಾರೆ. ಆದರೆ ವಿಜ್ಞಾನ – ತಂತ್ರಜ್ಞಾನದ ಈ ಯುಗದಲ್ಲಿ ಕೊಂಚ ಸಡಿಲತೆ ಕಂಡು ಬರುತ್ತಿರುವುದು ಸನಾತನವಾದಿಗಳಿಗೆ ಸಹಿಸಲಸಾಧ್ಯದ ವಿಷಯವಾಗಿದೆ. ಪರಂಪರಾಗತ ಮೌಲ್ಯಗಳಿಗೆ ಪ್ರೀತಿ, ಪ್ರೇಮ ಅಕ್ಷರಷಹ ಸವಾಲಾಗಿ ನಿಂತಿದೆ. ಹೀಗಾಗಿಯೇ ಇದು ಭಾರತೀಯ ಸಂಸ್ಕೃತಿಯಲ್ಲ, ವಿದೇಶಿ ಸಂಸ್ಕೃತಿ ಎಂದು ಅವಲತ್ತುಕೊಳ್ಳುತ್ತಿದ್ದಾರೆ. ಹಾಗಾದರೆ ಗಂಡು – ಹೆಣ್ಣು ಪ್ರೀತಿಸುವುದು ವಿದೇಶಿ ಸಂಸ್ಕೃತಿಯೇ? ಸಂಸ್ಕೃತಿ ವಕ್ತಾರರೆನಿಸಿಕೊಂಡವರೇ ಮಾತನಾಡುವ ಪುರಾಣಗಳನ್ನು ಉದಾಹರಿಸುವುದಾದರೆ ದುಷ್ಯಂತ – ಶಾಕುಂತಲೆಯ ನಡುವಿನ ಪ್ರೀತಿಯನ್ನು ಏನೆಂದು ಕರೆಯಬೇಕು? ಈ ತರಹದ ನೂರಾರು ಪುರಾಣದ ಕಥೆಗಳನ್ನು



ಉದಾಹರಿಸಬಹುದು. ಹೀಗಾಗಿ ಪ್ರೀತಿಸುವುದು ವಿದೇಶಿ ಸಂಸ್ಕೃತಿ ಎನ್ನುವುದಕ್ಕೆ ಯಾವ ಪುರಾವೆಯೂ ಸಿಗುವುದಿಲ್ಲ ಮತ್ತು ಇಂಥ ಹುರುಳಿಲ್ಲದ ವಾದವನ್ನು ಯಾರೂ ಗಂಭೀರವಾಗಿ ಪರಿಗಣಿಸಬೇಕಿಲ್ಲ.

ಹೀಗೆ ಒಂದು ಅರ್ಥಪೂರ್ಣ ಚರ್ಚೆಗೆ ವೇದಿಕೆ ಒದಗಿಸಿತ್ತು ಡಿವೈಎಫ್ಐ – ಎಸ್‌ಎಫ್ಐ ಬೆಂಗಳೂರು ಜಿಲ್ಲಾಸಮಿತಿಗಳು. ಫೆಬ್ರವರಿ 14ರ, ಪ್ರೇಮಿಗಳ ದಿನಾಚರಣೆ ಸಂದರ್ಭದಲ್ಲಿ 'ನಿರ್ಭಯವಾಗಿ ಪ್ರೀತಿಸಿ – ಹೊಣೆಗಾರಿಕೆಯಿಂದ ವರ್ತಿಸಿ' ಎಂಬ ಘೋಷಣೆಯೊಂದಿಗೆ ನಗರದ ಎಸ್ ಸಿ ಎಂ ಹೌಸ್‌ನಲ್ಲಿ 'ಪ್ರೇಮ ವಿವಾಹದ ಹಿಂದಿರುವ ವಿವಿಧ ಆಯಾಮಗಳು' ಈ ಕುರಿತು ಸಂವಾದ ಕಾರ್ಯಕ್ರಮ, ಏರ್ಪಡಿಸಿತ್ತು. ಸಂವಾದದಲ್ಲಿ ಸಂಗೀತ ನಿರ್ದೇಶಕ ವಿ. ಮನೋಹರ್, ಲೇಖಕಿ ಡಾ. ವಸುಂಧರ ಭೂಪತಿ, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಿ ರಾಜಶೇಖರ್ ಮೂರ್ತಿ, ಎಸ್‌ಎಫ್ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಜನವಾದಿ ಮಹಿಳಾ ಸಂಘಟನೆ ರಾಜ್ಯ ಕಾರ್ಯದರ್ಶಿ ಕೆ. ಎಸ್. ಲಕ್ಷ್ಮಿ ಸೇರಿದಂತೆ ಹಲವರು ಭಾಗವಹಿಸಿ ಮಾತನಾಡಿದರು. ಡಿವೈಎಫ್ಐ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಅಧ್ಯಕ್ಷ ಲಿಂಗರಾಜು ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್ಐ ಬೆಂಗಳೂರು ಉತ್ತರ ಜಿಲ್ಲಾ ಸಂಚಾಲಕ ಎಸ್. ಪ್ರಸಾದ್ ಪ್ರಾಸ್ತಾವಿಕವಾಗಿ ಮಾತುಗಳನ್ನಾಡಿದರು. ಎಸ್‌ಎಫ್ಐ ಮುನಿರಾಜು ಕಾರ್ಯಕ್ರಮ ನಿರೂಪಿಸಿದರು. ಡಿವೈಎಫ್ಐ ಮಧುರಾಜ್ ಸ್ವಾಗತಿಸಿದರು. 'ಪ್ರೀತಿಯ ಗಾಳಿ ಬೀಸುತಿದೆ ಹಟ್ಟಿ ಮೊಹಲ್ಲಾಗಳ ನಡುವೆ' ಎಂಬ ಹಾಡಿನೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮ ಎಸ್‌ಎಫ್ಐ ಚಿಕ್ಕರಾಜು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಕೆಂಪು ಕೂಟ ಎಂಬ ರಹಸ್ಯ ಕೂಟದ ....

ಪುಟ 16 ರಿಂದ

ತಯಾರಾಯಿತು. ಹೇಗೆ ಕಾರ್ಮಿಕರ ಕ್ಲಬ್ ಅವರು ಸದಾ ಕುಡಿದು, ಜಗಳವಾಡುತ್ತಾ ಕೆಲಸಗಳ್ಳರಾಗುವುದನ್ನು ತಪ್ಪಿಸಲು ಬಹಳ ಪ್ರಯೋಜನಕಾರಿ ಎಂಬುದನ್ನು ಅವರಿಗೆ ಮನವಟ್ಟುವಂತೆ ವಿವರಿಸಲಾಗಿತ್ತು. ಅನುಮತಿಯೂ ಸಿಕ್ಕಿತು. ಈಗ ಕಾರ್ಮಿಕರ ಅಸಲೀ ಮುಖ ಪ್ರದರ್ಶನಗೊಂಡಿತು. ಬಹಳ ಉತ್ಸಾಹದಿಂದ 1922 ರ ಮೇ ದಿನದಂದು ಒಂದು ದೊಡ್ಡ ಮೆರವಣಿಗೆಯೊಂದಿಗೆ ಕಾರ್ಮಿಕರ ಕ್ಲಬ್ ಉದ್ಘಾಟನೆಗೊಂಡಿತು. ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ, ಕಾರ್ಮಿಕರ ಕ್ಲಬ್ ಚಿರಾಯುವಾಗಲಿ, ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ ಎಂಬ ಘೋಷಣೆಗಳು ಮೊಳಗಿದವು. ಪಕ್ಕಾ ಚೀನಿ ಹಬ್ಬಗಳ ಶೈಲಿಯಲ್ಲಿ ಪಲ್ಲಕ್ಕಿಯೊಂದರಲ್ಲಿ ಏಳು ಸಮುದ್ರದಾಚೆಯ ಗಡ್ಡದ ತಾತ ಮಾ (ಕಾರ್ಲ್ ಮಾರ್ಕ್ಸ್‌ರವರು) ನ ಚಿತ್ರವೊಂದರ ಮೆರವಣಿಗೆಯನ್ನೂ ಮಾಡಲಾಯಿತು.

ಕಾರ್ಮಿಕರ ಕ್ಲಬ್ ಸ್ಥಾಪನೆಯಾದ ಕೆಲವೇ ದಿನಗಳಲ್ಲಿ ಮಾವೊರವರು ಗಣಿ ಪ್ರದೇಶಕ್ಕೆ ಭೇಟಿ ನೀಡಿದರು. ಕಾರ್ಮಿಕರ ಕ್ಲಬ್ ಸ್ಥಾಪನೆಯಿಂದ ಸಂತೋಷಗೊಂಡರು. ಅದೇ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಘೋಷಣೆ ಹಾಕುವುದು ಗುಪ್ತವಾಗಿ ಕೆಲಸ ಮಾಡುತ್ತಾ ಬೆಳೆಯುತ್ತಿದ್ದ ಪಕ್ಷದ ಬೆಳವಣಿಗೆಗೆ ಹಾನಿಯನ್ನುಂಟು ಮಾಡುತ್ತದೆಂದು ತಿಳಿಹೇಳಿದರು. ಆಗ್ಗೆ ಇನ್ನೂ ಗಣಿ ಕಾರ್ಮಿಕರು ರೈಲ್ವೆ ಕಾರ್ಮಿಕರೂ ಸೇರಿ 13,000 ಜನರಲ್ಲಿ ಸಣ್ಣ ಭಾಗ ಮಾತ್ರ ಕ್ಲಬ್‌ಗೆ ಸೇರಿದ್ದರು. ಉಳಿದ ಕಾರ್ಮಿಕರನ್ನು ಆಕರ್ಷಿಸುವ ಬಗೆ ಹೇಗೆ ? ಅಲ್ಲಿಯ ಕಾರ್ಮಿಕರ ಮುಖ್ಯ ಸಮಸ್ಯೆಗಳು ಮತ್ತು ಅದರ ಪರಿಹಾರಗಳ ಬಗ್ಗೆ ಚರ್ಚಿಸಿದರು. ದುಬಾರಿ ಬಡ್ಡಿಯ ಸಾಲ, ದುಬಾರಿ ಬೆಲೆಗಳು ಅವರ ಜೀವವನ್ನೇ ಹಿಂಡಿ ಹಿಪ್ಪೆ ಮಾಡಿ ಹಾಕುತ್ತಿದ್ದವು. ಅದಕ್ಕೆ ಒಂದು ಪರಿಹಾರ ಒದಗಿಸುವುದು ಬಹಳ ತುರ್ತಿನದಾಗಿತ್ತು. ಒಂದು ಸಹಕಾರ ಸಂಘವನ್ನು ಸ್ಥಾಪಿಸುವುದೇ ಅದಕ್ಕೆ ಸೂಕ್ತ ಪರಿಹಾರವೆಂದು ತೀರ್ಮಾನಿಸಿದರು. ವಸ್ತುಗಳನ್ನು ಅಗ್ಗದ ಬೆಲೆಗೆ ಒದಗಿಸುವುದರ ಜೊತೆಗೆ ಸಾಲ ನೀಡುವುದನ್ನೂ ಆರಂಭಿಸಿದರು. ಇದು ಕಾರ್ಮಿಕರಿಗೆ ಗಣನೀಯ ಪರಿಹಾರ ಒದಗಿಸಿತು. ಕಾರ್ಮಿಕರ ಕ್ಲಬ್‌ಗೆ ಸದಸ್ಯರಾಗಿದ್ದವರಿಗೆ ಮಾತ್ರ ಈ ಸೌಲಭ್ಯ ಲಭ್ಯವಾಗುತ್ತಿದ್ದುದರಿಂದ ಕಾರ್ಮಿಕರ ಕ್ಲಬ್‌ನ ಸದಸ್ಯತ್ವ ಬಡಾಯಿಸಿತು.

ಅಲ್ಲಿ ಕಾರ್ಮಿಕರು ಅತ್ಯಂತ ದುಬಾರಿ ಬಡ್ಡಿಗೆ ಸಾಲ ಪಡೆದು ತಮ್ಮ ಸಂಪಾದನೆಯನ್ನೆಲ್ಲಾ ಕಳೆದುಕೊಳ್ಳುತ್ತಿದ್ದುದನ್ನು ಅಭ್ಯಾಸ ಮಾಡಿದ ಈ ಅಣ್ಣ ತಮ್ಮಂದಿರು ಬಡ್ಡಿ ಸಾಹುಕಾರರ ಪೀಡೆಯನ್ನು ತೊಲಗಿಸುವ ಸಲುವಾಗಿ ಸಹಕಾರೀ ಸಂಘವೊಂದನ್ನು ಆರಂಭ ಮಾಡಿದರು. ಕೆಲ ಕಾಲದಲ್ಲಿಯೇ ಅದನ್ನು ಒಂದು ಸಣ್ಣ ಬ್ಯಾಂಕಾಗಿ ಪರಿವರ್ತನೆ ಮಾಡಿದರು.

ಕಾರ್ಮಿಕರ ಕ್ಲಬ್ ಮತ್ತು ಸಮಾಜವಾದೀ ಯುವಜನ ಸಭಾ ಆರಂಭ

ಕಾರ್ಮಿಕರಿಗೆ ಅರಿವು ಮೂಡಿಸುವ ಮುಂದಿನ ಹಂತವಾಗಿ ತಮ್ಮನ ಸಹಾಯದಿಂದ ಕಾರ್ಮಿಕರ ಕ್ಲಬ್ ಒಂದನ್ನು ಆರಂಭಿಸಿದರು. ಪಾಠಗಳು, ಉಪನ್ಯಾಸಗಳು, ಪತ್ರಿಕೆಗಳನ್ನು ಓದುವುದು ಇವುಗಳ ಮೂಲಕ ಕಾರ್ಮಿಕರಿಗೆ ಶಿಕ್ಷಣ ನೀಡಿತು ಈ ಕ್ಲಬ್. ಈ ಚಟುವಟಿಕೆಗಳು ಮುಂದುವರೆದಂತೆ ಅಲ್ಲಿಯ ಆರು ಸಾವಿರ ಕಾರ್ಮಿಕರಲ್ಲಿ ಶೇ. 60 ಭಾಗ ಈ ಕಾರ್ಮಿಕರ ಕ್ಲಬ್ ಸದಸ್ಯರಾದರು. ಈ ಕಾರ್ಮಿಕರ ನಡುವೆ ಯುವಕರನ್ನು ಆರಿಸಿ ಸಮಾಜವಾದೀ ಯುವಜನ ಸಂಘವನ್ನು ಕೂಡ ಆರಂಭಿಸಲಾಯಿತು. ಇದನ್ನು ನಡೆಸಲು ರಾಜಧಾನಿ ಚಾಂಗ್ ಶಾದಿಂದ ಅಲ್ಲಿಯ ಸಮಾಜವಾದೀ ಯುವಜನ ಸಂಗದಿಂದ ಒಬ್ಬ ಕಾರ್ಯಕರ್ತನನ್ನು ಗಣಿ ಪ್ರದೇಶಕ್ಕೆ ಕಳುಹಿಸಲಾಯಿತು. ಇದೇ ಸಮಯಕ್ಕೆ ರಷ್ಯಾದಲ್ಲಿ ಶಿಕ್ಷಣ ಪಡೆಯಲು ಕಳುಹಿಸಲಾಗಿದ್ದ ಲಿಯು ಶಾವೋಖಿಯುವರು (ಮುಂದೆ ಚೀನಾದ ಅಧ್ಯಕ್ಷರಾದವರು)ಹಿಂದಿರುಗಿ ಬಂದು ಅಖಿಲ ಚೀನಾ ಕಾರ್ಮಿಕ ಒಕ್ಕೂಟದ ನಾಯಕತ್ವ ವಹಿಸಿಕೊಂಡಿದ್ದರು. ಅವರನ್ನೂ ಕೂಡ ಈ ಗಣಿ ಪ್ರದೇಶದ ಚಳುವಳಿಯನ್ನು ಬಲಪಡಿಸಲು ಕಳುಹಿಸಲಾಯಿತು. ಇದರಿಂದ ಬೆಂಕಿಗೆ ಗಾಳಿ ಜೊತೆಗೂಡಿದಂತಾಯಿತು. ಇದು ಗಣಿ ಕಾರ್ಮಿಕರ ಮಹತ್ವದ ಸಂಘರ್ಷವೊಂದಕ್ಕೆ ನಾಂದಿಯಾಯಿತು.

JANASHAKTHI KANNADA VARA PATRIKE MAR 10, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Saturday
Licensed to Post without prepayment License No. WPP-283

ಕೆಂಪು ಕೂಟ ಎಂಬ ರಹಸ್ಯ ಕೂಟದ ಕಾಟ ಮತ್ತು ಕಾರ್ಮಿಕರ ಮಕ್ಕಳಿಗೆ ಶಾಲೆ ಆರಂಭ



ಜಿ.ಎಸ್.ನಾಗರಾಜ್ **24**

ಎರಡನೇ ಭೇಟಿಯಲ್ಲಿ ಮಾವೋರೊಡನೆ ಅವರ ತಮ್ಮನೂ ಜೊತೆಗೂಡಿದ್ದ. ಲಿ ಲಿಸಾನ್ ಮೊದಲಾದ ಇನ್ನೂ ಮೂರು ಜನ ಸಂಗಾತಿಗಳೂ ಇದ್ದರು. ಅಲ್ಲಿ ತಕ್ಷಣವೇ ಕಾರ್ಮಿಕ ಸಂಘವನ್ನು ಸ್ಥಾಪಿಸಲು ಪ್ರಯತ್ನಿಸುವುದು ಅಪಾಯಕಾರಿ ಎಂಬುದು ಮಾವೋರವರಿಗೆ ಅರಿವಾಯಿತು. ಒಂದು ಕಡೆ ಚೀನಾದಾದ್ಯಂತ ಬೆಳೆಯುತ್ತಿದ್ದ ಹೊಸ ವಿಚಾರಗಳ ಅಲೆ ಕಾರ್ಮಿಕರ ಮೇಲೆ ಬೀರುತ್ತಿದ್ದ ಪ್ರಭಾವದಿಂದ ಆತಂಕಗೊಂಡಿದ್ದ ಗಣಿ ಕಂಪನಿಗಳ ಮಾಲೀಕ ವರ್ಗ, ಮತ್ತೊಂದು ಕಡೆ ಈಗಾಗಲೇ ಹಿಂದಿನ ಲೇಖನಗಳಲ್ಲಿ ವಿವರಿಸಿದಂತೆ ಚೀನಾದಲ್ಲಿ ವ್ಯಾಪಕವಾಗಿದ್ದ ರಹಸ್ಯ ಕೂಟಗಳ ಕಾಟ. ಈ ರಹಸ್ಯ ಕೂಟಗಳ ಮಂತ್ರ-ತಂತ್ರಗಳ ರೀತಿಯ ರಹಸ್ಯ ಆಚರಣೆಗಳು ರೈತಾಪಿ ಮೂಲದ ಕಾರ್ಮಿಕರನ್ನು ಸೆಳೆಯುತ್ತಿದ್ದವು. ಇವುಗಳ ಜೊತೆಗೆ ಅಲ್ಲಿಯ ಪ್ರಸಿದ್ಧ ಕುಂಗ್ ಫು ತೆರನ ದೈಹಿಕ ತರಬೇತಿ ಪಡೆದ ಕಾರ್ಯಕರ್ತರು ಅವರಲ್ಲಿ ಭಯ ಗೌರವಗಳನ್ನು ಮೂಡಿಸುತ್ತಿದ್ದರು. ಆ ಗಣಿ ಪ್ರದೇಶದಲ್ಲಿ 'ಕೆಂಪು ಕೂಟ' ಎಂಬ ರಹಸ್ಯ ಕೂಟವು ಕಾರ್ಮಿಕರ ನಡುವೆ ಪ್ರಬಲವಾಗಿತ್ತು. ಈ ರಹಸ್ಯ ಕೂಟದಲ್ಲಿ ಆಡಳಿತ ವರ್ಗದವರು, ಕಾರ್ಮಿಕ ಕಂಟ್ರಾಕ್ಟ್‌ದಾರರು ಸದಸ್ಯರಾಗಿದ್ದರು. 'ಕೆಂಪು ಕೂಟ'ವು ಅಫೀಮು ಅಡ್ಡೆ, ಜೂಜು ಕಟ್ಟೆ, ವೇಶ್ಯಾವಾಟಿಕೆಗಳ ಮೇಲೆ ಹಿಡಿತ ಹೊಂದಿತ್ತು. ಈ 'ಕೆಂಪು ಕೂಟ'ದ ನಾಯಕ ಗಣಿ ಆಡಳಿತ ವರ್ಗಕ್ಕೆ ಸಲಹೆಗಾರನಾಗಿದ್ದ. ಅವರು ಈ 'ಕೆಂಪುಕೂಟ'ವು ಕಾರ್ಮಿಕರನ್ನು ದಮನಿಸಲು ನೆರವಾಗುವುದೆಂಬ ಕಾರಣಕ್ಕೇ ಅದನ್ನು ಪ್ರೋತ್ಸಾಹಿಸಿ ಬೆಳೆಸುತ್ತಿದ್ದರು.

ಈ ಎಲ್ಲ ಪರಿಸ್ಥಿತಿಯನ್ನು ಆಳವಾಗಿ ಅಧ್ಯಯನ ಮಾಡಿದ ಮಾವೋರವರು ಈ ಪರಿಸ್ಥಿತಿಗೆ ಅನುಗುಣವಾದ ದಾರಿಯನ್ನು ರೂಪಿಸಿದರು. ಕಾನೂನು ಬದ್ಧವಾಗಿ ಎಷ್ಟೆಲ್ಲಾ ಅವಕಾಶಗಳಿವೆಯೋ ಅಷ್ಟನ್ನೂ ಬಳಸಿಕೊಂಡು ಕಾರ್ಮಿಕರ ಮನಗೆಲ್ಲಬೇಕು. ಅವರಿಗೆ ನಮ್ಮ ಮೇಲೆ ದೃಢವಾದ ನಂಬಿಕೆ ಮೂಡಿದ ನಂತರವೇ ಆಗ ಇನ್ನೂ ಕಾನೂನಿನಲ್ಲಿ ಇನ್ನು ಅವಕಾಶವಿರದ ಕಾರ್ಮಿಕ ಸಂಘ ಸ್ಥಾಪನೆಯಂತಹ ಕೆಲಸಗಳಿಗೆ ಕೈ ಹಾಕಬೇಕು. ಹೀಗೆ ಹಂತ-ಹಂತವಾಗಿ ಮುಂದುವರೆಯಬೇಕು. ಯಾವುದೇ ಕಾರಣಕ್ಕೂ ಆರಂಭದಲ್ಲಿ ರಹಸ್ಯ ಕೂಟವನ್ನು ಎದುರು ಹಾಕಿಕೊಳ್ಳಬಾರದು. ಇದು ಅವರು ಅಲ್ಲಿ ಕೆಲಸ ಆರಂಭಿಸಿದ ಲಿ ಲಿಸಾನ್ ರವರಿಗೆ ಕೊಟ್ಟ ನಿರ್ದೇಶನ.

ಚಾಂಗ್ ಶಾ ದಲ್ಲಿ ಮಾಡಿದ್ದಂತೆ ಇಲ್ಲಿಯೂ ರಾತ್ರಿ ಶಾಲೆ ಆರಂಭಿಸಲು ಪ್ರಯತ್ನಿಸಿದರು. ಅದಕ್ಕಾಗಿ ಲಿ ಲಿಸಾನ್ ಅಲ್ಲಿಯ ಮ್ಯಾಜಿಸ್ಟ್ರೇಟ್‌ರವರಿಗೆ ಮೇಲ್ವರ್ಗಗಳು ಬಳಸುವ ಶಾಸ್ತ್ರೀಯ ಚೀನೀ ಭಾಷೆಯಲ್ಲಿ ಒಂದು ಪತ್ರವನ್ನು ಬರೆದರು. ಕಾರ್ಮಿಕರಿಗೆ ಶಿಕ್ಷಣ ನೀಡಿ ಅವರನ್ನು ಹೆಚ್ಚು ಶಿಸ್ತುಬದ್ಧವಾಗಿ ಕೆಲಸ ಮಾಡುವಂತೆ ಮಾಡಲು ಹೇಗೆ ಅನುಕೂಲವಾಗುತ್ತದೆ ಎಂಬುದನ್ನು ಛಂದಸ್ಸುಮಯವಾದ ಶಾಸ್ತ್ರೀಯ ಚೀನೀ ಭಾಷೆಯಲ್ಲಿ ವರ್ಣಿಸಿದರು. ಈ ತಂತ್ರದಿಂದ ಅವರ ಅನುಮತಿ ಪಡೆಯುವುದು ಸುಲಭವಾಯಿತು.

ಆದರೆ ಜೀವನ ಪೂರ್ತಿ ಗಣಿಯ ಗುಂಡಿಗಳಲ್ಲಿ ದುಡಿಯುವ ನಮಗೆ ಓದಿನಿಂದ ಪ್ರಯೋಜನವೇನು ಎಂಬುದು ನಿರಾಶೆಗೊಳಗಾದ ಕಾರ್ಮಿಕರ ಭಾವನೆ. ಅದನ್ನು ಹಿಮ್ಮೆಟ್ಟಿಸಲು ಅವರು ಕಾರ್ಮಿಕರ ಮಕ್ಕಳಿಗೆ ಶಾಲೆ ಆರಂಭಿಸಿದರು. ಅಲ್ಲಿ ಇದ್ದ ಒಂದು ಕ್ರಿಶ್ಚಿಯನ್ ಶಾಲೆ ಅತಿ ಹೆಚ್ಚು ಫೀಸು ವಸೂಲಿ ಮಾಡುತ್ತಾ ಕೇವಲ ಕುಲೀನರಿಗಾಗಿ ಮೀಸಲಾಗಿತ್ತು. ಕಾರ್ಮಿಕರ ಮಕ್ಕಳಿಗೆ ಶಾಲೆಯೇ ಇಲ್ಲದ್ದರಿಂದ ಮಕ್ಕಳ ಭವಿಷ್ಯದ ಬಗ್ಗೆ ಕಾತರರಾದ ಕಾರ್ಮಿಕರಿಂದ ಉತ್ಸಾಹದ ಪ್ರತಿಕ್ರಿಯೆ ಬಂತು. ಇವೆಲ್ಲವುಗಳಿಂದ ಒಂದು ದೊಡ್ಡ ಕಟ್ಟಡದಲ್ಲಿ ಶಾಲೆ ನಡೆಸಬೇಕಾಯಿತು.

ಪಕ್ಷದ ಗುಂಪು ರಚನೆ

ಈ ಮಕ್ಕಳ ಓದನ್ನು ಗಮನಿಸುವ ನೆಪದಲ್ಲಿ ಕಾರ್ಮಿಕರ ಮನೆಗಳಿಗೆ ಭೇಟಿ ನೀಡಿ ಅವರ ಗೆಳೆತನ ಬೆಳೆಸುವುದು, ಅವರ ತಿಳುವಳಿಕೆಯನ್ನು ಬೆಳೆಸುವುದು ಇಂತಹ ಕ್ರಮಗಳನ್ನು ಬಳಸಿದರು. ಕಾರ್ಮಿಕರ ಒಂದು ಪತ್ರಿಕೆಯನ್ನು ಮಕ್ಕಳ ಮೂಲಕ ಕಾರ್ಮಿಕರ ಮನೆಗಳಿಗೆ ಮುಟ್ಟಿಸಿದರು. ಕಾರ್ಮಿಕರೇ ಸ್ವತಃ ಈ ಪತ್ರಿಕೆಗೆ ಲೇಖನ ಬರೆಯಬೇಕೆಂದು ಒತ್ತಾಯಿಸಿದರು. ಇದು ಓದು ಬರಹ ಬಾರದ ಆ ಕಾರ್ಮಿಕರಿಗೆ ಆಶ್ಚರ್ಯವನ್ನುಂಟು ಮಾಡಿತು. ಇದು ಕೇವಲ ಶಾಲೆಯಲ್ಲ ಎಂಬುದು ಕಾರ್ಮಿಕರಿಗೆ ಅರಿವಾಗತೊಡಗಿತು. ಕಲ್ಲಿದ್ದಲ ಗಣಿಗಳಿಗೆ ಅಂಟಿಕೊಂಡಿದ್ದ ರೈಲ್ವೆ ಕಾರ್ಮಿಕರು, ಮುಖ್ಯವಾಗಿ ಅದರ ತಂತ್ರಜ್ಞ ಕೆಲಸಗಾರರು ಹೆಚ್ಚು ಸ್ಪಂದಿಸಿದರು. ರೈಲ್ವೆ ಹಾಗು ಗಣಿಗಳಲ್ಲಿ ಇಂತಹ ಕಾರ್ಮಿಕರನ್ನು ಗುರುತಿಸಿ ಪಕ್ಷದ ಗುಂಪನ್ನು ರಚಿಸಲಾಯಿತು. ಏಳು ಜನರಿಂದ ಆರಂಭವಾದ ಈ ಗುಂಪು ಮೂರು ತಿಂಗಳುಗಳಲ್ಲಿ ಮೂವತ್ತಾಯಿತು.

ಈ ಪ್ರದೇಶದ ಸುತ್ತ ಮುತ್ತ ಇದ್ದ ಇತರ ಗಣಿಗಳಲ್ಲಿ, ಇಲ್ಲಿಂದ ಬೇರೆ ನಗರಗಳಿಗೆ ಹೋಗುವ ರೈಲ್ವೆ ಮಾರ್ಗಗಳಲ್ಲಿ ಕೂಡ ಪಕ್ಷದ ಗುಂಪುಗಳ ಒಂದು ಸರಣಿಯನ್ನು ರಚಿಸಲಾಯಿತು. ಹೀಗೆ ಕಾರ್ಮಿಕ ಸಂಘವನ್ನು ಸ್ಥಾಪಿಸುವ ಹೋರಾಟಗಳನ್ನು ಆರಂಭಿಸುವ ಮೊದಲು ಒಂದು ವ್ಯಾಪಕ ಸಿದ್ಧತೆಗಳನ್ನು ನಡೆಸಲಾಯಿತು.


ಕಾರ್ಮಿಕರೊಂದಿಗೆ ಮಾವೋ

ಕಾರ್ಮಿಕರಿಗಾಗಿ ರಾತ್ರಿ ಶಾಲೆ ಮತ್ತು ಕಾರ್ಮಿಕರ ಕ್ಲಬ್ ಆರಂಭ

ಹೀಗೆ ಕಾರ್ಮಿಕರ ವಿಶ್ವಾಸವನ್ನು ಗಳಿಸುತ್ತಾ ಕಾರ್ಮಿಕರಿಗೆ ರಾತ್ರಿ ಶಾಲೆಯನ್ನು ಆರಂಭಿಸಿದರು. ಹಗಲು ಮಕ್ಕಳಿಗೆ ಶಾಲೆ ರಾತ್ರಿ ಅವರ ತಂದೆಯರಿಗೆ ಶಾಲೆ. ಈ ಕಾರ್ಮಿಕರ ಶಾಲೆ ಅಕ್ಷರಾಭ್ಯಾಸದಿಂದಲೇ ಆರಂಭವಾಯಿತು. ಚೀನಾದಲ್ಲಿ ಅಂದು ವಯಸ್ಕರಿಗೆಂದು ರೂಪಿಸಲಾಗಿದ್ದ ಸರಳ ಅಕ್ಷರಗಳ ಪಠ್ಯ ಪುಸ್ತಕ ಉಪಯೋಗಿಸಿದರು. ಆದರೆ ವಿವರಣೆ ಕೊಡುವಾಗ ನಾವು ನಿರೀಕ್ಷಿಸುವಂತೆಯೇ ಕಾರ್ಮಿಕರ ಜೀವನದ ಸ್ಥಿತಿಗತಿ, ಶೋಷಣೆಗಳ ವಿವರಣೆಗಳನ್ನು ನೀಡಲಾಗುತ್ತಿತ್ತು. ಅದಕ್ಕಾಗಿಯೇ ಪ್ರತ್ಯೇಕ ಪಠ್ಯ ಪುಸ್ತಕಗಳನ್ನು ರಾಜಧಾನಿ ಚಾಂಗ್ ಶಾದಲ್ಲಿ ಮಾವೋ, ಅವರ ಪತ್ನಿ ಮತ್ತಿತರರು ಕೂಡಿ ಕಟ್ಟಿದ್ದ ಸಾಮೂಹಿಕ ಶಿಕ್ಷಣ ಸಂಘ ರೂಪಿಸಿ ಕೊಟ್ಟಿತು. ಇವೆಲ್ಲವುಗಳಿಂದ ಗಣಿಯ ಮಾಲೀಕ ವರ್ಗಕ್ಕೆ, ಕಾರ್ಮಿಕರ ಗುತ್ತಿಗೆದಾರರಿಗೆ ಅನುಮಾನ ಬರಬಾರದೆಂದು ಶಾಲೆಗೆ ಬರುವ ಪ್ರತಿ ಕಾರ್ಮಿಕನೂ ಅವನ ಗುತ್ತಿಗೆದಾರನಿಂದ ಅನುಮತಿ ತೆಗೆದುಕೊಂಡೇ ಬರಬೇಕೆಂಬುದನ್ನು ಕಡ್ಡಾಯವಾಗಿ ಪಾಲಿಸುತ್ತಿದ್ದರು. ಜೊತೆಗೆ ಶಾಲೆಯಲ್ಲಿ ಪಾಠ ಮಾಡುವಾಗ ಒಬ್ಬರನ್ನ ಕಾವಲಿಗೆ ನಿಲ್ಲಿಸಿ ಯಾರೂ ಪಾಠವನ್ನ ಕೇಳಿಸಿಕೊಳ್ಳಲು ಸಿಗದಂತೆ, ಅವರು ಉಪಯೋಗಿಸುತ್ತಿದ್ದ ಪಠ್ಯ ಪುಸ್ತಕ ಬೇರೆಯವರ ಕಣ್ಣಿಗೆ ಬೀಳದಂತೆ ಎಚ್ಚರ ವಹಿಸುತ್ತಿದ್ದರು. ರೈಲ್ವೆ ಕಾರ್ಮಿಕರೇ ಹೆಚ್ಚಾಗಿದ್ದ ವಿದ್ಯಾರ್ಥಿಗಳಿಂದ ಆರಂಭವಾದರೂ ಗಮನ ಕೊಟ್ಟು ಗಣಿ ಕಾರ್ಮಿಕರನ್ನು ಸೇರಿಸಿಕೊಂಡರು.

ಶಾಲೆಗೆ ಹೆಚ್ಚು ಕಾರ್ಮಿಕರನ್ನು ಆಕರ್ಷಿಸಲು ಹಬ್ಬಗಳಲ್ಲಿ ಜಾನಪದ ನೃತ್ಯ, ಚೀನಾದಲ್ಲಿ ಪ್ರಸಿದ್ಧವಾದ ಸಮರ ಕಲೆ ಕುಂಗ್ ಫು ಇವುಗಳ ಪ್ರದರ್ಶನ ಮತ್ತು ಕಲಿಕೆಗಳನ್ನು ಏರ್ಪಡಿಸಿದರು. ಈ ಪ್ರಯತ್ನಗಳಿಂದ ನೂರಾರು ಕಾರ್ಮಿಕರು ರಾತ್ರಿ ಶಾಲೆಗೆ ಬರತೊಡಗಿದರು. ಶಾಲೆ ವಿಸ್ತಾರವಾಗಲಾರಂಭಿಸಿತು. ಅಲ್ಲಿಗೆ ತರುತ್ತಿದ್ದ ಕಾರ್ಮಿಕ ಪತ್ರಿಕೆಯನ್ನು ಕಾರ್ಮಿಕರು ಓದಲಾರಂಭಿಸಿದರು. ಅದರ ಸಂಚಿಕೆಯೊಂದರಲ್ಲಿ ಶಾಂಘೈ ನಗರದ ಕಾರ್ಮಿಕರು, 'ಕಾರ್ಮಿಕರ ಕ್ಲಬ್' ಒಂದನ್ನು ಆರಂಭಿಸಿದರೆಂಬುದನ್ನು ಕಾರ್ಮಿಕರು ಓದಿದರು. ತಾವೂ ಅಂತಹುದೊಂದನ್ನು ಏಕೆ ಆರಂಭಿಸ ಬಾರದೆಂದು ಚರ್ಚಿಸಲಾರಂಭಿಸಿದರು. ಲಿ ಲಿಸಾನ್ ಮತ್ತು ಗೆಳೆಯರು ಇಂತಹ ದಿನಕ್ಕಾಗಿಯೇ ಕಾಯುತ್ತಿದ್ದರು. ತಾವೇ ಆರಂಭಿಸಬೇಕೆಂದಿದ್ದ ಮಾತು ಕಾರ್ಮಿಕರ ಬಾಯಿಂದಲೇ ಬಂದಾಗ ಅವರಿಗೆ ಅಪಾರ ಸಂತೋಷವಾಯಿತು. ತಕ್ಷಣವೇ ಸಿದ್ಧತಾ ಸಮಿತಿಯೊಂದನ್ನು ರಚಿಸಿಕೊಂಡರು. ಅಂದಿನ ಚೀನಾದಲ್ಲಿ ಕಾರ್ಮಿಕರ ಸಂಘಗಳನ್ನು ರಚಿಸಿಕೊಳ್ಳಲು ಅವಕಾಶವಿರಲಿಲ್ಲ. ಹೀಗಾಗಿ ಕಾರ್ಮಿಕರ ಕ್ಲಬ್ ಎಂಬ ಹೆಸರಿನಲ್ಲೇ ಕಾರ್ಮಿಕ ಸಂಘಗಳನ್ನು ಆರಂಭಿಸಲಾಗುತ್ತಿತ್ತು.

ಸರಿ, ಮತ್ತೆ ಛಂದಸ್ಸುಮಯವಾದ ಶಾಸ್ತ್ರೀಯ ಭಾಷೆಯಲ್ಲಿ ಮ್ಯಾಜಿಸ್ಟ್ರೇಟ್‌ರನ್ನು ಮರುಳುಗೊಳಿಸಲು ಮತ್ತೊಂದು ಪತ್ರ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of/owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086
Editor NITHYANANDASWAMI